(9) ಶಾಸನ ರಚನೆ

(ಅ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ''2000ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು

(ii) ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ ''2000ನೇ ಸಾಲಿನ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಎರಡು ಬಹಳ ಪ್ರಮುಖವಾದಂಥ ಮಸೂದೆಗಳನ್ನು ಮಾನ್ಯ ಮಂತ್ರಿಗಳು ಆಗಲೇ ಸದನದಲ್ಲಿ ಮಂಡಿಸಿ ಈಗ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದಂಥ ಸ್ಥಿತಿಯಲ್ಲಿ ಇದ್ದೇವೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಪೀಠವನ್ನಲಂಕರಿಸಿದ್ದರು)

1. ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2000 ಮತ್ತು

2. ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ, 2000 ಇವೆರಡೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ತರಹ ಇದೆ. ಆದ್ದರಿಂದ ಚರ್ಚೆಗೆ ಇವೆರಡನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದೆಂದು ನನ್ನ ಸಲಹೆಯಾಗಿದೆ.

ಅಧ್ಯಕ್ಷರು: ಸೇಮ್ ಸಬ್ಜೆಕ್ಟ್ ಇರುವುದರಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಮಸೂದೆಗಳು ಬಹಳ ಪ್ರಮುಖವಾಗಿರುವುದರಿಂದ ಚರ್ಚೆಗೆ ನಮಗೆ ಸಾಕಷ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು: ಸರ್ಕಾರಿ ಕೆಲಸ ಎಷ್ಟು ಹೊತ್ತು ಮಾಡಿದ್ದೇವೋ ಅದರ ನಾಲ್ಕರಷ್ಟು ಸಮಯವನ್ನು ಇತರ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಅಂದರೆ ವಿರೋಧ ಪಕ್ಷದವರಿಗೆ ಸಮಯ ಕೊಡಲಾಗಿದೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಎಲ್ಲಾ ಸಮಯದಲ್ಲೂ ನೀವೇ ಮಾತನಾಡುತ್ತೀರಿ ಎಂದು ಹೇಳುತ್ತೀರಿ. ಮಾನ್ಯ ಮುಖ್ಯಮಂತ್ರಿಗಳು ಯಾವಯಾವಾಗ ಸಂದರ್ಭ ಸಿಗುತ್ತದೋ ಆವಾಗ ನಮ್ಮ ಕಡೆಗೆ ವ್ಯಂಗ್ಯವಾಗಿ ಮಾತಿನಲ್ಲಿ ಚುಚ್ಚುತ್ತಲೇ ಇರುತ್ತಾರೆ. ಒಂದು ಸಾರಿ ಅಧಿಕೃತವಾಗಿ ಇರತಕ್ಕಂಥ ವಿರೋಧ ಪಕ್ಷ ಎಂದು ಹೇಳುತ್ತಾರೆ. ಅವರು ಸಹಕಾರ ಕೊಟ್ಟರು ಎಂದು ಹೇಳುತ್ತಾರೆ, ಒಂದು ಸಾರಿ ನಮಗೆ ಚುಚ್ಚುತ್ತಾ ಇರುತ್ತಾರೆ. ನಾವು ಹೊರಗಡೆಗೆ ಹೋದರೆ 'ನೀವೇನೂ ವಿರೋಧ ಪಕ್ಷವಾಗಿ ಸಮರ್ಥವಾಗಿ ಕೆಲಸವನ್ನೇ ಮಾಡುತ್ತಿಲ್ಲ' ಎಂದು ಪತ್ರಿಕೆಯವರು ಹೇಳುತ್ತಾರೆ. ನಮಗಂತೂ ಇಲ್ಲಿ ತೃಪ್ತಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಸ್ವಾಮಿ. ಡಿಬೇಟ್ ಲೆವೆಲ್ ಏನಿರಬೇಕು, ವಿಷಯಗಳು ಏನಿರಬೇಕು ಮಾತನಾಡಬೇಕೆಂದು ನಾವು ಏನೇನು ಪ್ರಿಪೇರ್ ಆಗಿ ಬರುತ್ತೇವೆ ಅದನ್ನೂ ಸಹಿತ ಸದನದಲ್ಲಿ ಮಾತನಾಡುವುದಕ್ಕೆ ಆಗುತ್ತಿಲ್ಲ. ನಾನು ಹೀಗೆ ಹೇಳಿದೆ ಎಂದು ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ಪ್ರಶ್ನೋತ್ತರ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಿಂಗಾಪುರದ ಬಗ್ಗೆ ಒಂದು ಪ್ರಶ್ನೆ ಹೇಳಿದರು. ನಾನು ಬಹಳ ಮಹತ್ವವಾಗಿರತಕ್ಕಂಥ ಸಲಹೆಯನ್ನು ಕೊಡಬೇಕೆಂದು ಹೇಳಿಬಿಟ್ಟು, ಸಲಹೆಯ ರೂಪದಲ್ಲಿ ಅವರಿಗೆ ಪ್ರಶ್ನೆಯನ್ನು ಕೇಳಬೇಕೆಂದು ಇದ್ದೆ. ಸಮಯ ನಮಗೆ ಸಿಗಲಿಲ್ಲ.

ಅಧ್ಯಕ್ಷರು: ಸಮಯ ಇಲ್ಲದಿದ್ದುದರಿಂದ ನಾನೇ ಅದನ್ನು ಮೊಟಕುಗೊಳಿಸಿದೆ. ಅವರು ಮಾಡಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ನಿಮಗೆಹೇಳುತ್ತಿಲ್ಲ. ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ನಾನು ಹೇಳುತ್ತಿದ್ದೇನೆ. ಗಮನ ಸೆಳೆಯುವ ಸೂಚನೆ ಬಗ್ಗೆ ಎರಡೂವರೆ ಗಂಟೆ ಕಾಲ ಚರ್ಚೆಯಾಗಿದೆ. ಇದು ಯಾವ ಪುರುಷಾರ್ಥಕ್ಕೆ ಎಂದು ನಾನು ಕೇಳುತ್ತಿದ್ದೇನೆ. ಈಗ ನಾವು ಹೇಳುವುದಕ್ಕೆ ಹೋದರೆ ಅದನ್ನು ಯಾರಿಗೋ ಚುಚ್ಚಬೇಕೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ನಾನೂ ಕೂಡ ವ್ಯಂಗ್ಯವಾಗಿ ಚುಚ್ಚಿ ಮಾತನಾಡಬಲ್ಲೆ. ಆದರೆ ಅದರಿಂದ ಉಪಯೋಗವಾಗುವುದಿಲ್ಲ ಸ್ವಾಮಿ. ಈಗ ಎರಡೂ ಬಿಲ್‌ನ್ನು ಒಂದೇ ಸಾರಿಗೆ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ಇಲ್ಲಿ ಕೇಳುವ ಪ್ರಶ್ನೆ ಅಲ್ಲ.

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರೇ, ಇದು ಸೇಮ್ ಸಬ್ಜೆಕ್ಟ್ ಆಗಿದ್ದು ಕೆಲವು ಮುನ್ಸಿಪಾಲಿಟೀಸ್‌ಗೆ ಅಪ್ಲೈ ಆಗುತ್ತವೆ ಇನ್ನು ಕೆಲವು ಕಾರ್ಪೊರೇಷನ್‌ಗೆ ಅಪ್ಲೈ ಆಗುತ್ತವೆ ಅಷ್ಟೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಿಮಗೆ ಸಮಯದ ಅಭಾವ ಇದ್ದರೆ ತಾವು 8 ಗಂಟೆವರೆಗೆ ಸದನವನ್ನು ನಡೆಸಿದರೆ ಅದಕ್ಕೆ ನಾವು ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಫೈನಾನ್ಶಿಯಲ್ ಬಿಲ್ ಬಗ್ಗೆ ಫೈನಾನ್ಸ್ ಸೆಕ್ರೆಟರಿಯವರು 30ನೇ ತಾರೀಖು ಬೆಳಗ್ಗೆಯೇ ಪಾಸ್ ಮಾಡಿಕೊಡಬೇಕೆಂದು ಬಿ.ಎ.ಸಿ.ಯಲ್ಲಿ ಹೇಳಿದರು. ನಾವು ಒಪ್ಪಿಕೊಂಡಿದ್ದೇವೆ. ನಾವು ವಾಕ್‌ಔಟ್ ಮಾಡಿದ್ವಿ. ಅಪ್ರೊಪ್ರಿಯೇಷನ್ ಬಿಲ್‌ನ್ನು ಇಮ್ಮಿಡಿಯೆಟ್ ಆಗಿ ಚರ್ಚೆಗೆ ತೆಗೆದುಕೊಳ್ಳುತ್ತೀರೆಂದು ನಮಗೇನೂ ತಲೆ ಇಲ್ಲವಾ? ಈ ಸಪ್ಲಿಮೆಂಟರಿ ಬಜೆಟ್ ಬಂದಿದೆ. ಇದರ ಬಗ್ಗೆಯೇ ನಾವು ಎರಡು ದಿವಸ ಮಾತನಾಡಬಹುದು. ನಾವು ಅಷ್ಟು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾವುದನ್ನು ಹೈಲೈಟ್ ಮಾಡಬೇಕೋ ಅದನ್ನು ಮಾತ್ರ ಮಾಡಿ ನಾವು ಸುಮ್ಮನಾಗುತ್ತೇವೆ. ಆದ್ದರಿಂದ, ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕೆಲವು ವಿಚಾರಗಳನ್ನು ನಾವು ತಿಳುವಳಿಕೆಯಿಂದ, ಉದ್ದೇಶಪೂರ್ವಕವಾಗಿ ಸರ್ಕಾರ ಮಾಡತಕ್ಕಂಥ ಕೆಲಸಗಳ ಬಗ್ಗೆ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕವಾಗಿ ಇನ್ನೊಂದು ಅಭಿಪ್ರಾಯ ಇದ್ದೇ ಇರುತ್ತದೆ. ಅದನ್ನು ನಾವು ಹೇಳಲೇ ಬೇಕಾಗುತ್ತದೆ. ಆದ್ದರಿಂದ ಅದಕ್ಕೆ ದಯವಿಟ್ಟು ತಾವು ಮಾನ್ಯತೆ ಕೊಡಬೇಕು. ಈಗ ನೀರಾ ಚಳುವಳಿ ಬಗ್ಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಈ ಬಗ್ಗೆ ಚಳುವಳಿ ನಡೆಯುತ್ತಿದೆ. ಸರ್ಕಾರಕ್ಕೆ ತೊಂದರೆಗಳು ಇರಬಹುದು. ಆದರೆ ನೀರಾ ಬಗ್ಗೆ ಚರ್ಚೆಯೇ ಆಗಲಿಲ್ಲ ಎಂದರೆ ಹೇಗೆ? ತಾವು ಯೋಚನೆ ಮಾಡಿ.

ಅಧ್ಯಕ್ಷರು: ಅದನ್ನೂ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಮಸೂದೆ ಬಗ್ಗೆ ಮಾನ್ಯ ಚಂದ್ರೇಗೌಡರೆ, ತಾವು ಮುಂದುವರಿಸಿ.

\+ ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇಂದಿನ ಕರ್ನಾಟಕ ಪೌರ ನಿಗಮಗಳ, ಪುರಸಭೆಗಳ ಸ್ಥಿತಿಯ ಬಗ್ಗೆ ದೊಡ್ಡ ಅವಲೋಕನವನ್ನು ಮಾಡಬೇಕಾದಂಥ ಸ್ಥಿತಿಯಲ್ಲಿ ನಾವಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರೇಗೌಡರು ಏಕೆ ಬಿಲ್ ಮೂವ್ ಮಾಡಿದರು? ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇದ್ದಾರೆ. ಅವರೇ ಮೂವ್ ಮಾಡಲಿ. ವಿರೋಧ ಪಕ್ಷದ ಸಾಲಿನಲ್ಲಿ ಮಾನ್ಯ ಖರ್ಗೆಯವರು ಕುಳಿತಿದ್ದರು. ನಾನು ವಿಧಾನಪರಿಷತ್ತಿನಲ್ಲಿ ಮಂತ್ರಿಯಾಗಿ ಕುಳಿತಿದ್ದಾಗ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಬಿಲ್ ಮೂವ್ ಮಾಡುವುದಕ್ಕೆ ನನ್ನನ್ನು ಅಲ್ಲಿಂದ ಈ ಸದನಕ್ಕೆ ಕರೆಸಿಕೊಂಡಿದ್ದಾರೆ.

ಅಧ್ಯಕ್ಷರು: ಶ್ರೀ ಡಿ.ಬಿ.ಚಂದ್ರೇಗೌಡರು ಸಂಸದೀಯ ವ್ಯವಹಾರಗಳ ಸಚಿವರಾಗಿರುವುದರಿಂದ ಬಿಲ್ ಮೂವ್ ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಆದ್ದರಿಂದ ಈ ಸ್ಥಿತಿಯನ್ನು ಸುಧಾರಿಸಬೇಕು, ನಗರ ಮತ್ತು ಪೌರಸಭೆಗಳ ಸ್ಥಿತಿಗತಿ ಉತ್ತಮವಾಗಬೇಕು ಎನ್ನುವ ಸದಿಚ್ಛೆಯಿಂದ ಅನೇಕರು ಸರ್ವೋಚ್ಚ ನ್ಯಾಯಾಲಯದಲ್ಲಿ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಪಿಟಿಷನ್ ಹಾಕಿರುವುದು ತಮಗೆ ಮತ್ತು ಮಾನ್ಯ ಸದಸ್ಯರೆಲ್ಲರಿಗೆ ಗೊತ್ತಿದೆ. ಆ ನ್ಯಾಯಾಲಯದವರು ಒಂದು ತೀರ್ಪಿತ್ತು 'ಪ್ರಸ್ತುತ ಚಾಲ್ತಿಯಲ್ಲಿರುವ ಬಾಡಿಗೆ ಆಧಾರಿತ ಆಸ್ತಿ ತೆರಿಗೆಯಲ್ಲಿ ಸುಧಾರಣೆಯಾಗಬೇಕು, ಅದನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿ ಎನ್ನುವಂಥ ಒಂದು ಆದೇಶವನ್ನು ಕೊಟ್ಟಿದ್ದಾರೆ. ಜೊತೆಯಲ್ಲಿ ಈ ಸ್ವಯಂ ತೆರಿಗೆ ಆಸ್ತಿ ಪದ್ಧತಿಯನ್ನು ಜಾರಿಗೆ ತಂದ ಮೇಲೆ ಅದರ ಬಗ್ಗೆ ಕೂಡ ಅನೇಕರು ಉಚ್ಚನ್ಯಾಯಾಲಯಕ್ಕೆ ಹೋದಾಗ ಉಚ್ಚನ್ಯಾಯಾಲಯ ಈ ಪದ್ಧತಿಯ ಪರವಾಗಿ ತೀರ್ಪು ನೀಡಿದೆ. ಈ ತೀರ್ಪುಗಳ ಜೊತೆಗೆ ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿ ಅವರ ಅಭಿಪ್ರಾಯವನ್ನು ಪಡೆದು ಆ ವರದಿಯ ಆಧಾರದಲ್ಲಿ ಒಂದು ಕಾಂಪ್ರಹೆನ್ಸಿವ್ ಬಿಲ್‌ನ್ನು ನೀವು ತನ್ನಿ, ಸಮಗ್ರವಾದ ತಿದ್ದುಪಡಿಯನ್ನು ತನ್ನಿ, ಆಗೊಮ್ಮೆ ಈಗೊಮ್ಮೆ ತಿದ್ದುಪಡಿ ತರುವುದರಿಂದ ಏನೂ ಉಪಯೋಗವಿಲ್ಲ ಎನ್ನುವಂಥ ಸಲಹೆ ಸೂಚನೆಯನ್ನು ಕೊಟ್ಟಿದ್ದಾರೆ. ಮತ್ತೊಂದು ಅಂಶ ಏನೆಂದರೆ - ಯಾವ ರೀತಿ ನಡವಳಿಕೆ ಇರಬೇಕೆನ್ನುವುದರ ಬಗ್ಗೆ ಕಾರ್ಪೊರೇಷನ್ ಮತ್ತು ಸರ್ಕಾರದ ಮಧ್ಯೆ ಒಂದು ಒಪ್ಪಂದ ಆಗಿದೆ. ಇವೆಲ್ಲವುಗಳನ್ನೂ ಗಮನದಲ್ಲಿಟ್ಟುಕೊಂಡು ಈ ಮೂಲ ವಿಚಾರಗಳ ಬಗ್ಗೆ ನಾವು ಕೆಲವು ತಿದ್ದುಪಡಿಗಳನ್ನು ಇಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಒಂದು ಕಡೆ ಪ್ರತಿನಿತ್ಯ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ವಾಹನಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ನನ್ನ ಅಂದಾಜಿನ ಪ್ರಕಾರ ಬೆಂಗಳೂರು ನಗರದಲ್ಲಿ ಸರಿಸುಮಾರು 14 ಲಕ್ಷಕ್ಕಿಂತ ಹೆಚ್ಚು ವಾಹನಗಳು ಓಡಾಡುತ್ತಿವೆ. ಇದರಿಂದ ಪರಿಸರ ಮಾಲಿನ್ಯ ಆಗುತ್ತದೆ. ಈ ವಾಹನಗಳ ಸಂಖ್ಯೆ ಜಾಸ್ತಿ ಆದಾಗ, ಜನಗಳ ಸಂಖ್ಯೆ ಜಾಸ್ತಿ ಆದ ಹಾಗೆ ಈ ರಸ್ತೆಗಳ ನಿರ್ವಹಣೆ ಕೂಡ ಕಷ್ಟ, ಮತ್ತು ರಸ್ತೆಗಳ ಅಭಿವೃದ್ಧಿ ಮಾಡುವುದಕ್ಕೂ ಕಷ್ಟಕರವಾದಂಥ ಪರಿಸ್ಥಿತಿಗೆ ಬಂದಿದ್ದೇವೆ. ಅದರ ಜೊತೆಯಲ್ಲಿ ಪ್ರತಿನಿತ್ಯ ಹೊರಹೋಗುವಂಥ ಕಸ, ತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ಸಾಗಣೆ ಮತ್ತು ವಿಲೇವಾರಿ, ಈ ನಗರಗಳ ಸ್ವಚ್ಛತೆ ಹಾಗೂ ಸೌಂದರ್ಯಗಳನ್ನು ಕಾಪಾಡುವುದಕ್ಕಾಗಿ ಕ್ರಮ ತೆಗೆದುಕೊಳ್ಳುವುದು ಈ ಬಗ್ಗೆ ಅನೇಕ ಬಾರಿ ಕೋರ್ಟ್‌ಗಳ ಆದೇಶ ಬಂದಿದೆ. ಹಿಂದೆ ಸದನದಲ್ಲಿ ಚರ್ಚೆಯಾಗಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸಮಗ್ರವಾದಂಥ ಒಂದು ಮಸೂದೆಯನ್ನು ಈ ಸದನದಲ್ಲಿ ಮಂಡನೆ ಮಾಡಿದ್ದೇವೆ. ಆ ಮಸೂದೆಯ ಮೂಲ ಉದ್ದೇಶಗಳು ಏನೆಂದರೆ, ಈಗ ಇರತಕ್ಕಂಥ ಪದ್ಧತಿ ಏನು? ಈಗ ತರುವ ಪದ್ಧತಿಯಲ್ಲಿ ಆಸ್ತಿ ತೆರಿಗೆಯನ್ನು ನಿಗದಿ ಮಾಡುವಾಗ ಆಧಾರ ಏನು? ವಾರ್ಷಿಕ ಬಾಡಿಗೆ

ಏನು ಬರುತ್ತದೋ ಅದೇ ಆಧಾರ. ಬೆಂಗಳೂರು ನಗರವನ್ನು [illegible]ಅಂತಹ ಮಾನ್ಯ ಸದಸ್ಯರುಗಳಿಗ ಇನಲ್ಲಾ ಗೊತ್ತಿರತಕ್ಕಂಥ ವಿಚಾರ ಮತ್ತು [illegible] ಕಂದಾಯ ಮಂತ್ರಿಗಳಾಗಿದ್ದಂಥ ಮಾನ್ಯ ಸೋಮಶೇಖರ ಅವರು ಇದನ್ನೆಲ್ಲಾ [illegible] ಹೇಳಿದ್ದಾರೆ. ಈಗಾಗಲೇ ಒಂದು ದಿನಕ್ಕೆ ಸುಮಾರು 960 ಟನ್ ಬಿ.ಸಿ.ಸಿ. ಬೌಂಡರಿ [illegible] ವೇಸ್ಟ್ ಗಾರ್ಬೇಜ್ ಹೊರಬರುತ್ತದೆಂದು ಬೆಂಗಳೂರು ಸಿಟಿ ಕಾರ್ಪೊರೇಷನ್‌ರವರು ಹೇಳುತ್ತಾರೆ. The amount of solid Waste generated per day is about 2200 tonnes which works out Rs. seventyfive crores per year. ಆದ್ದರಿಂದ ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುವುದು? ನಾನು ಮೊದಲು ಈ ಆಸ್ತಿ ತೆರಿಗೆ ವಿಚಾರವಾಗಿ ಹೇಳುತ್ತೇನೆ. ಸಂಪತ್ತನ್ನು ರೂಢಿಸಿಕೊಳ್ಳಬೇಕು. ಸಂಪತ್ತನ್ನು ರೂಢಿಸಿಕೊಳ್ಳುವುದಕ್ಕೆ ನಾನು ಮೊದಲೇ ತಿಳಿಸಿದ ಹಾಗೆ ಸರ್ವೋಚ್ಚನ್ಯಾಯಾಲಯದ ಆದೇಶದಂತೆ ತಜ್ಞರ ಸಮಿತಿ ಏನು ಆಳ ಪೂರ್ಣವಾದ ಅಭ್ಯಾಸದ ಮೇಲೆ ಒಂದು ವರದಿ ಕೊಟ್ಟಿದೆ ಅದನ್ನು ಆಧಾರವಾಗಿಟ್ಟುಕೊಂಡು ಈ ಆಸ್ತಿ ತೆರಿಗೆಯನ್ನು ಕೊಡಬೇಕು. ಇದುವರೆಗೆ ಹೌಸ್ ರೆಂಟ್ ಕಂಟ್ರೋಲ್ ಆಕ್ಟ್‌ನಲ್ಲಿ ಏನು ಬರುತ್ತದೋ ಅದು ಆಸ್ತಿ ಮಾನದಂಡವಾಗಿತ್ತು. ಅದು ಸರಿಯಾದ ಮಾನದಂಡವಲ್ಲವೆನ್ನುವುದು ನಿರ್ವಿವಾದ. ಅದಕ್ಕಾಗಿ ಹೆಚ್.ಆರ್.ಸಿ. ಆಕ್ಟ್‌ನಲ್ಲಿ ಕೂಡ ಕೆಲವು ಬದಲಾವಣೆಗಳನ್ನು ತಂದಿದ್ದೇವೆ, ಅದು ಇನ್ನೂ ಜಾರಿಗೆ ಬರಬೇಕಾಗಿದೆ. ಆದ್ದರಿಂದ ಈ ಆಸ್ತಿ ತೆರಿಗೆ ಆಧಾರದ ವಾರ್ಷಿಕ ಬಾಡಿಗೆ ಆಗಬಾರದು, ವಾರ್ಷಿಕ ಬಾಡಿಗೆಯಲ್ಲಿ ದೋಷಗಳು ಇವೆ, ಪ್ರಾಮಾಣಿಕ ತೆರಿಗೆದಾರರಿಗೆ ಕಿರುಕುಳ ಸಹ ಬರುತ್ತದೆ ಮತ್ತು ಒಡೆಯ ಸ್ವತಃ ವಾಸ ಮಾಡತಕ್ಕಂಥ ಮನೆಗೆ ರಿಯಾಯಿತಿ ಕೊಟ್ಟಿಲ್ಲ, ತೆರಿಗೆ ವಿಧಿಸುವಾಗ ಮತ್ತೆ ಭ್ರಷ್ಟಾಚಾರ ನಡೆಯುತ್ತದೆ, ತೆರಿಗೆ ವಿಧಿಸದೇ ಇರುವ ಆಸ್ತಿಗಳು ಹೆಚ್ಚಾಗಿವೆ, ಪೌರಸಭೆಗಳಿಗೆ ಬರಬೇಕಾದ ತೆರಿಗೆಯಲ್ಲಿ ಸೋರಿಕೆ ಆಗುತ್ತಿದೆ. ಸೋರಿಕೆ, ಭ್ರಷ್ಟಾಚಾರ ಇದರಿಂದ ಪೌರಸಭೆಗಳಿಗೆ ಆದಾಯ ಕಡಿಮೆಯಾಗುತ್ತದೆ. ಆದ್ದರಿಂದ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವ ವಾದ. ಆಡಳಿತದ ವೆಚ್ಚ ಏನೂ ಕಡಿಮೆಯಾಗುತ್ತಿಲ್ಲ. ಮೇಲ್ಮನವಿಗಳ ಸಂಖ್ಯೆಗಳು ಹೆಚ್ಚುತ್ತಿವೆ. ನ್ಯಾಯಾಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಜ್ಯವನ್ನು ಹೂಡುತ್ತಿದ್ದಾರೆ. ಪಾರದರ್ಶಕತೆ ಇಲ್ಲ, ತೆರಿಗೆ ದರ ಹೆಚ್ಚು, ವಾರ್ಷಿಕ ಬಾಡಿಗೆ ಶೇಕಡ 20 ರಿಂದ 25 ದರದಲ್ಲಿ ತೆರಿಗೆ ವಿಧಿಸುತ್ತಿದ್ದಾರೆ, ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೆಲವು ಸುಧಾರಣೆಗಳನ್ನು ತರುವುದಕ್ಕೆ ಇದರಲ್ಲಿ ಪ್ರಯತ್ನವನ್ನು ಮಾಡಿದ್ದೇವೆ.

4.20 ಪಿಎಂ

ಇದರಲ್ಲಿ ಅವು ಯಾವಾಗ ಜಾರಿಗೆ ಬರುತ್ತವೆ ಎನ್ನುವುದು ಒಂದು ಪ್ರಶ್ನೆ. ಈ ಸುಧಾರಿತ ತೆರಿಗೆ ಪದ್ಧತಿಯನ್ನು ಜಾರಿಗೆ ತರುವಾಗಲೇ ಯಾವ ಯಾವ ಶಾಸನದಲ್ಲಿ ತಿದ್ದುಪಡಿ ಆಗಬೇಕು ಎಂಬುದನ್ನು ನಾವು ಈಗಾಗಲೇ ಆಲೋಚಿಸಿದ್ದೇವೆ.

ಸಾರ್ವಜನಿಕರು ಸ್ವಯಂ ಆಸ್ತಿಯನ್ನು ನಿರ್ಧಾರ ಮಾಡುವುದರಿಂದ ಸ್ವಲ್ಪ ಮಟ್ಟಿಗೆ ಪರಿಸ್ಥಿತಿಗಳಲ್ಲಿ ಆಗುವ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಸಹಾಯಕವಾಗುವ ಎನ್ನುವ ಮಾತನ್ನು ಮಾನ್ಯ ಸುರೇಶ್ ಕುಮಾರ್‌ರವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಕಟ್ಟಡದ ಮೌಲ್ಯವನ್ನು ಸರಿಗಣಿಸಿ ಕರ ನಿರ್ಧರಿಸುವುದರಿಂದ ಗೊಂದಲದ ವಾತಾವರಣ ಇರುವುದಿಲ್ಲ. ಹಾಗೂ ಪಾರದರ್ಶಕತೆ ಇರುತ್ತದೆ ಎನ್ನುವ ಮಾತನ್ನು ಈಗಾಗಲೇ ನಾನು ಹೇಳಿದ್ದೇನೆ. ನಮಗೆ ಪೌರ ಸಭೆಗಳಿಗೂ ಪೌರ ನಿಗಮಗಳ ತಿದ್ದುಪಡಿಯಲ್ಲಿ ವಿಶೇಷವಾಗಿ ಇದನ್ನು ರೂಪಿಸಿದ್ದೇವೆ. ಬಹಳ ಮುಖ್ಯವಾಗಿ ಸೆಕ್ಷನ್ 2(ಎ)ರಲ್ಲಿ ಬಾಡಿಗೆ ಆಧಾರಿತ ವಾರ್ಷಿಕ ಮೌಲ್ಯವನ್ನು ಬಿಟ್ಟು ಬಿಡಬೇಕು. ಸ್ವತ್ತಿನ ಮೂಲ ಮೌಲ್ಯದ ವ್ಯಾಖ್ಯೆಯನ್ನು ಮಾಡಬೇಕು, ಕಟ್ಟಡ ಮತ್ತು ಭೂಮಿಗಳ ಮೌಲ್ಯಗಳ ಜೊತೆ ತೆರಿಗೆಗೆ ಗುರಿಯಾಗುವ ಇರುವ ಸ್ವತ್ತಿನ ಮೂಲ ಮೌಲ್ಯ ಅಂದರೆ ಭೂ ಮೌಲ್ಯಯಿರಬಹುದು, ಕಟ್ಟಡ ಮೌಲ್ಯ ಇರಬಹುದು, ಸವಕಳಿಯನ್ನು ಕಳೆದು ಉಳಿಯುವ ಮೌಲ್ಯವನ್ನು ಆಧಾರವನ್ನಾಗಿ ಇಟ್ಟುಕೊಂಡು ತೆರಿಗೆಯನ್ನು ವಿಧಿಸಬೇಕು ಎಂದು 2 ಸೆಕ್ಷನ್ 27(ಎ)ನಲ್ಲಿ ತಂದಿದ್ದೇವೆ. 94ರ ಅಡಿಯಲ್ಲಿ ಅನುಸೂಚಿತ ದರದಲ್ಲಿ ನಿಗದಿಪಡಿಸತಕ್ಕಂಥ ಒಂದು ವ್ಯಾಖ್ಯಾನವನ್ನು ಮಾಡಿದ್ದೇವೆ. ಈಗ ಪ್ರಕರಣದ ದರ ನಿರ್ದಿಷ್ಟಪಡಿಸುವುದರಿಂದ, ಅನುಸೂಚಿ ಬಿಟ್ಟು ಬಿಡುವುದು, ಹೀಗೆ ನೀರಿನ ತೆರಿಗೆ ವಿಧಿಸತಕ್ಕಂಥ ಅಧಿಕಾರ, ತೆರಿಗೆ ವಿನಾಯಿತಿ ಒಳಪಟ್ಟ ಕಟ್ಟಡಗಳಿಂದ ಇದರಲ್ಲಿ ಅವರು ಎಲ್ಲಾ ಅನುಕೂಲ ಪಡೆಯುತ್ತಾರೆ ಉದಾಹರಣೆಗೆ ಖಾಸಗಿ ಶಾಲೆಗಳು ಇವರು ಎಲ್ಲಾ ಅನುಕೂಲವನ್ನು ಪಡೆಯುತ್ತಾರೆ ಆದರೆ ಅವರು ಶುಲ್ಕ ಕೊಡುವುದಕ್ಕೆ ಮಾತ್ರ ಮುಂದೆ ಬರುವುದಿಲ್ಲ. ಅಥವಾ ತೆರಿಗೆ ಕಟ್ಟತಕ್ಕಂಥ ಪ್ರಯತ್ನವನ್ನೇ ಮಾಡಿಲ್ಲ. ಆದ್ದರಿಂದ, ಯಾರಿಗೆ ಈವರೆಗೆ ತೆರಿಗೆ ವಿನಾಯಿತಿ ಇತ್ತೋ, ಸರ್ಕಾರಿ ಕಟ್ಟಡಗಳನ್ನು ಬಿಟ್ಟು ಉಳಿದ ಕಟ್ಟಡಗಳಿಗೆ ಸೇವಾ ಶುಲ್ಕವನ್ನು ಹಾಕತಕ್ಕಂಥದ್ದು ಮತ್ತು ವಸೂಲಿಗಾಗಿ ಈ ಒಂದು ಅವಕಾಶವನ್ನು ಸೆಕ್ಷನ್ 94ರಲ್ಲಿ ಮಾಡಿಕೊಂಡಿದ್ದೇವೆ. ಈ ತೆರಿಗೆಗಳನ್ನು ಹಾಕಿದರೆ ವಾರ್ಷಿಕ ಅಂದರೆ ಏಪ್ರಿಲ್ 1ರಿಂದ ಇದು ಪ್ರಾರಂಭವಾಗಬೇಕು. ಮುನ್ಸಿಪಲ್ ಪ್ರದೇಶದ ಎಲ್ಲಾ ಸ್ವತ್ತುಗಳ ಮೇಲೆ ತೆರಿಗೆಯ ಮೂಲ ಮೌಲ್ಯದ ಶೇಕಡವಾರು ಪ್ರಮಾಣದಲ್ಲಿ ತೆರಿಗೆ ದರ ಶೇಕಡ 0.3 ರಿಂದ 0.6ರವರೆಗೆ ಅರ್ಥಾತ್ ಒಂದು ಸಾವಿರ ಮೌಲ್ಯಕ್ಕೆ ಮೂರು ರೂಪಾಯಿನಂತೆ ಆ ತೆರಿಗೆ ಹಾಗೂ 6ಕ್ಕೆ ಮೀರದಂತೆ ಆ ತೆರಿಗೆಯನ್ನು ಹಾಕತಕ್ಕಂಥ ಆಲೋಚನೆಯನ್ನು ಈ ಮಸೂದೆಯಲ್ಲಿ ಸೆಕ್ಷನ್ 102ರಲ್ಲಿ ತಂದಿದ್ದೇವೆ. ಸೆಕ್ಷನ್ 102ರಲ್ಲಿ ಸ್ವತ್ತು ತೆರಿಗೆ ನಿರ್ಧಾರಣೆಯ ವಿಧಾನಗಳೇನು, ಅಂದರೆ ಮೆಥಡ್ ಹಾಗೂ ಬಾಡಿಗೆಯನ್ನು ನಿಗದಿಪಡಿಸತಕ್ಕಂಥ ವಿಧಾನವನ್ನು ಇಲ್ಲಿ ಹಾಕಿದ್ದೇವೆ. ಕಟ್ಟಡದ ಮೌಲ್ಯ, ವಿಸ್ತೀರ್ಣ ಆಧಾರದ ಮೇಲೆ ನಿಗದಿಪಡಿಸುವ ವಿಧಾನ. ಈ ಸ್ಟ್ಯಾಂಪು ಅಧಿನಿಯಮ 45(ಬಿ) ಅನ್ವಯ ನಿಯಮಗಳನ್ನು ಇಷ್ಟರಲ್ಲಿಯೇ ರಚಿಸಲಾಗುವುದು. ಜಮೀನಿನ ಅಂದಾಜು ಮಾರುಕಟ್ಟೆ ಬೆಲೆ ಮತ್ತು ಕಟ್ಟಡದ ನಿರ್ಮಾಣದ ವೆಚ್ಚ ನಿಗದಿ ಮಾಡಲು ಒಂದು ಸಮಿತಿಯನ್ನು ರಚಿಸಿದ್ದು, ಇದರಲ್ಲಿ ಕಂದಾಯ ಇಲಾಖೆಯ ರಿಜಿಸ್ಟ್ರೇಷನ್ ಅಧಿಕಾರಿಗಳು, ಲೋಕೋಪಯೋಗಿ

ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್‌ಗಳು, ಭೂ ಮಾಪನ ಇಲಾಖೆ ಹಾಗೂ ಮಹಾನಗರಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು, ಸದಸ್ಯರು, ಇವರೆಲ್ಲಾ ಸೇರಿಸಿಕೊಂಡು ಒಂದು ಸಮಿತಿ ನೇಮಕ ಮಾಡಿದ್ದು, ಸಮಿತಿ ನಿರ್ದಿಷ್ಟಪಡಿಸಿದ ಪ್ರತಿ ಚದರಡಿಯ ಜಮೀನಿನ ಅಂದಾಜು ಮಾರುಕಟ್ಟೆಯ ಬೆಲೆ ಮತ್ತು ಕಟ್ಟಡದ ಮೌಲ್ಯ ಅಕೆದರೆ ನಿರ್ಮಾಣ ವೆಚ್ಚ ಸೇರಿಸಿ ಎಷ್ಟು ಆಗುತ್ತದೆ ಎಂದು ಅಂದಾಜು ಮಾಡುವುದು, ಇದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಸರಿಪಡಿಸತಕ್ಕಂಥ ಅಧಿಕಾರವನ್ನು ಈ ಸಮಿತಿಗೆ ಈ ಸೆಕ್ಷನ್‌ನಲ್ಲಿ ನಾವು ಅವಕಾಶವನ್ನು ಮಾಡಿ ಕೊಟ್ಟಿದ್ದೇವೆ. ಸೆಕ್ಷನ್ 103ರಲ್ಲಿ ಸ್ವಂತ ಅನುಭವದ, ಸ್ವಂತ ಉಪಯೋಗಕ್ಕಾಗಿ ಇರುವ ಸ್ವತ್ತುಗಳ ಮಾಲೀಕರು ಏನು ಇದ್ದಾರೆ, ಅವರು ಈ ಮಾರುಕಟ್ಟೆ ಬೆಲೆಯನ್ನು ನಿಗದಿ ಮಾಡುವುದಕ್ಕಾಗಿಲ್ಲ, ಅದರಲ್ಲಿ ಶೇಕಡ 50ರಷ್ಟನ್ನು ವಿನಾಯಿತಿ ಕೊಡಬೇಕೆಂದು ಇದರಲ್ಲಿ ತಿದ್ದುಪಡಿ ತಂದಿದ್ದೇವೆ. 106ರಲ್ಲಿ 6ನೇ ತಿದ್ದುಪಡಿಯಂತೆ, ಭೂಮಿ ಮತ್ತು ಕಟ್ಟಡಗಳ ಮೇಲೆ ತೆರಿಗೆ ಎಂಬ ಪದದ ಬದಲು ಸ್ವತ್ತು ತೆರಿಗೆ ಎಂದು ಪದ ಪ್ರಯೋಗ ಮಾಡಿದ್ದೇವೆ. ಇದೊಂದು ಪ್ರಾಸಂಗೀಕವಾದ ತಿದ್ದುಪಡಿಯಾಗಿದೆ. ಸ್ವತ್ತು ತೆರಿಗೆಯ ಸ್ವಯಂ ಘೋಷಣೆ ಈಗಾಗಲೇ ಅದರ ಅನುಭವ ಸಾಕಷ್ಟು ಆಗಿರುವುದರಿಂದ ನಾನು ಹೆಚ್ಚು ಹೇಳದೆ, ಮುನ್ಸಿಪಲ್ ಕೌನ್ಸಿಲ್ ತೆರಿಗೆ ನಿರ್ಧಾರಣೆಯ ವಿಷಯವಾಗಿ ಮಾರ್ಗಸೂಚಿ ಹೊರಡಿಸುವವರು, ಮಾಲೀಕ ಅಥವಾ ಅನುಭೋಗದಾರ ಪ್ರಕಟಪಡಿಸಿದ ಮೂಲ ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷ ತೆರಿಗೆ ಪಾವತಿಸಿ ವಿವರವನ್ನು ಪತ್ರಿಕೆಯ ಮೂಲಕ ಪುರಸಭೆಯವರು ಪ್ರಚಾರ ಮಾಡಬೇಕು ಎನ್ನುವ ಆಲೋಚನೆಯನ್ನು ಈ ಮಸೂದೆಯಲ್ಲಿ ಅಳವಡಿಸಿದ್ದೇವೆ. ಕಮಿಷನರಿಗೆ ಅಥವಾ ಮುಖ್ಯ ಅಧಿಕಾರಿಗಳಿಗೆ ಸಲ್ಲಿಸತಕ್ಕಂಥ ಅದಿಭೋಗದಾರರಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಹೀಗೆ ಪಾವತಿ ಮಾಡತಕ್ಕಂಥವರಿಗೆ ಒಂದು ಕಾಲಮಿತಿಯನ್ನು ಹಾಕಿದ್ದು ಏಪ್ರಿಲ್ 30ರ ಒಳಗೆ ಪಾವತಿ ಮಾಡತಕ್ಕಂಥವರಿಗೆ ಶೇಕಡ 5 ರಷ್ಟು ರಿಯಾಯಿತಿಯನ್ನು ಇದರಲ್ಲಿ ಅಳವಡಿಸಿದ್ದೇವೆ. ಅಧಿಕಾರಿಗಳು ಒಂದು ವರ್ಷದೊಳಗೆ ಮಾಲೀಕನ ವಿವರ, ಸ್ವತ್ತು ತೆರಿಗೆ ನಿರ್ಧಾರಣೆ ಮಾಡಿ ಅದನ್ನು ಕಳುಹಿಸಬೇಕು ಎನ್ನುವುದನ್ನು ಅಧಿಕಾರಿಗಳಿಗೂ ಕೂಡ ಒಂದು ವರ್ಷದ ಮಿತಿಯನ್ನು ಹಾಕಿ ಈ ಮಸೂದೆಯಲ್ಲಿ ಅಳವಡಿಸಿದ್ದೇವೆ. ತೆರಿಗೆ ಸ್ವಯಂ ಘೋಷಣೆ ಮಾಡದೇ ವಿವರಗಳನ್ನು ಪತ್ರಿಕೆಗೆ ಕೊಡದೇ ಅಥವಾ ಉದ್ದೇಶಪೂರ್ವಕವಾಗಿ ತಪ್ಪು ವಿವರ ಕೊಟ್ಟಂಥ ಮಾಲೀಕರ ಸ್ವತ್ತನ್ನು ಪರಿಶೀಲನೆ ಮಾಡಿ ತೆರಿಗೆ ವಿಧಿಸುವ ಅಧಿಕಾರ, ಮುನ್ಸಿಪಲ್ ಕಮೀಷನರ್ ಅಥವಾ ಮುಖ್ಯ ಅಧಿಕಾರಿಗೆ ಇದೆ. ಅಪೂರ್ಣ ಅಥವಾ ತಪ್ಪು ವಿವರಗಳನ್ನು ಪತ್ರಿಕೆಗಳಲ್ಲಿ ನೀಡಿದವರಿಗೆ ನಿರ್ಧಾರಣೆ ಮಾಡಿದ ಮತ್ತು ಸಂದಾಯ ಮಾಡಿದ ತೆರಿಗೆಗಳ ವ್ಯತ್ಯಾಸದ ಎರಡರಷ್ಟು ದಂಡ ವಿಧಿಸುವ ಅಧಿಕಾರವು ಇದೆ. ಕಾರಣ ಏನೆಂದರೆ, ಪರವಾನಿಗೆ ತೆಗೆದುಕೊಳ್ಳದೆ ಕಟ್ಟಡ ಕಟ್ಟಿಬಿಡುತ್ತಾರೆ, ಆಗ ಆ ಕಟ್ಟಡಕ್ಕೆ ತೆರಿಗೆಯನ್ನು ಹಾಕುವುದಕ್ಕೆ ಆಗುವುದಿಲ್ಲ, ಪರವಾನಿಗೆಯನ್ನು ಅಪ್ರೂವ್ ಮಾಡುವುದಿಲ್ಲ, ಲೈಸನ್ಸ್ ಇಲ್ಲದೇ ಮಾಡುವುದು ಒಂದು ಲೈಸನ್ಸ್ ತೆಗೆದುಕೊಂಡು ಯಾವ ರೀತಿಗೆ

ಅನುಮತಿಸಿರುತ್ತಾರೋ ಅದನ್ನು ತಪ್ಪಿಸಿ ಮತ್ತೊಂದು ರೀತಿಯಲ್ಲಿ ಕಟ್ಟಡ ಕಟ್ಟುವುದು, ಇಂಥವರಿಗೆ ಎರಡರಷ್ಟು ತೆರಿಗೆ ಹಾಕತಕ್ಕಂಥ ಆಲೋಚನೆಯನ್ನು ಈ ಮಸೂದೆಯಲ್ಲಿ ಮಾಡಿದ್ದೇವೆ. ಇದಕ್ಕಾಗಿ ಸ್ವತ್ತು ತೆರಿಗೆ ರಿಜಿಸ್ಟನ್ನು ತಯಾರಿಸಿ ಪ್ರಕಟಿಸಬೇಕು ಎಂದು ಸೆಕ್ಷನ್ 106 ರಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಸೆಕ್ಷನ್ 107ರಲ್ಲಿ ಕಾನೂನು ಬಾಹಿರ ಕಟ್ಟಡಗಳಿಗೆ ವಿಧಿಸುವ ಸ್ವತ್ತು ತೆರಿಗೆ, ಎರಡರಷ್ಟು ದಂಡ, ಕಾನೂನು ಬಾಹಿರ ಕಟ್ಟಡಗಳಿಗೆ ಸಕ್ರಮವಾಗದಿರುವ ದಂಡ ವಿಧಿಸಿ ಆದೇಶಿಸಿರುವ ವಿರುದ್ಧ ಅಪೀಲ್‌ಗೂ ಕೂಡ ಇದರಲ್ಲಿ ಅವಕಾಶ ಕೊಟ್ಟಿದ್ದೇವೆ. ಸೆಕ್ಷನ್ 107(ಎ)ನಲ್ಲಿ ಭೂಮಿ ಮತ್ತು ಕಟ್ಟಡ ಸಮೀಕ್ಷೆ ಮಾಡಿ, ಸ್ವತ್ತು ರಿಜಿಸ್ಟನ್ನು ತಯಾರಿಸಲು ನಿಯಮಗಳನ್ನು ರಚಿಸಲಾಗುವುದು, ಅಧಿಕಾರಿಗಳು ಅಥವಾ ಇತರ ಏಜೆನ್ಸಿಗಳ ಮೂಲಕ ಸ್ವತ್ತು ರಿಜಿಸ್ಟು ತಯಾರಿಸಲಾಗುವುದು. ಸೆಕ್ಷನ್ 109ರಲ್ಲಿ ಪ್ರತಿ ಐದು ವರ್ಷಗಳಿಗೊಮ್ಮೆ ಈ ತೆರಿಗೆ ಪರಿಷ್ಕರಿಸತಕ್ಕಂಥ ಒಂದು ತಿದ್ದುಪಡಿಯನ್ನು ಇದರಲ್ಲಿ ಅಡಗಿಸಿದ್ದೇವೆ. ಸೆಕ್ಷನ್ 110ರಲ್ಲಿ ಬಾಡಿಗೆ ಆಧಾರಿತ ತೆರಿಗೆಯನ್ನು, ಬಾಡಿಗೆದಾರನಿಂದ ವಸೂಲಿ ಕ್ರಮವನ್ನು ವಿವರಿಸಿದ್ದನ್ನು ಬಿಟ್ಟು ಬಿಟ್ಟು, ತೆರಿಗೆ ತಪ್ಪಿಸಿಕೊಂಡ ಸಂದರ್ಭದಲ್ಲಿ ಆರು(6) ವರ್ಷಗಳ ಒಳಗೆ ನೋಟಿಸ್ ಕೊಟ್ಟು ತೆರಿಗೆ ನಿರ್ಧಾರಣೆ ಮಾಡಲು, ಅಧಿಕಾರಿಗಳಿಗೆ ಅಧಿಕಾರವನ್ನು ಕೊಡಲಾಗಿದೆ, ದಂಡವು ಸೇರಿದಂತೆ ಸ್ವತ್ತು, ತೆರಿಗೆಯ ಬಗ್ಗೆ ಅಪೀಲು 142, 150, 150:1 ಇವುಗಳಿಗೆ ಪ್ರಾಸಂಗಿಕ ತಿದ್ದುಪಡಿಗಾಗಿ ಮಾಡಿದ್ದೇವೆ. ಬಹಳ ಮುಖ್ಯವಾಗಿ ಪೌರನಿಗಮದಲ್ಲಿ ವಿಶೇಷವಾದಂತಹ ಶಾಸನಕ್ಕೂ ಮತ್ತು ಇದಕ್ಕೂ ವ್ಯತ್ಯಾಸವೆಂದರೆ, ಬೆಂಗಳೂರು ಮಹಾನಗರ ಈ ಒಂದು ವೇಸ್ಟ್ ಮ್ಯಾನೇಜ್‌ಮೆಂಟ್ ಇದರ ಬಗ್ಗೆ ನಾನು ಸೂಕ್ಷ್ಮವಾಗಿ ಮೊದಲೇ ಹೇಳಿದ್ದೇನೆ. ಇದರ ಬಗ್ಗೆ ಏನು ಮಾಡಬೇಕೆಂದರೆ, ಇಷ್ಟೊಂದು ಹಣ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ಗೆ ಬೆಂಗಳೂರು ಕಾರ್ಪೊರೇಷನ್‌ರವರು ಸುಮಾರು 960 ರೂಪಾಯಿಗಳನ್ನು ಒಂದು ಟನ್‌ಗೆ ಡಿಸ್‌ಪೋಸ್ ಮಾಡುವುದಕ್ಕಾಗಿ ಖರ್ಚು ಮಾಡುತ್ತಾರೆ. ಒಂದು ದಿವಸಕ್ಕೆ ಸುಮಾರು 2200 ಟನ್ ಸಾಲಿಡ್‌ವೇಸ್ಟ್ ಜನರೇಟಾಗುತ್ತದೆ. ನಮಗೆ ಒಂದು ವರ್ಷಕ್ಕೆ 75 ಕೋಟಿ ರೂಪಾಯಿಗಳು ಬೇಕೆಂಬುದು ಒಂದು ಅಂದಾಜು. ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ಒದಗಿಸುವುದಕ್ಕೆ ಏನಾದರೊಂದು ಮಾರ್ಗವನ್ನು ಹುಡುಕಬೇಕು. ಬೆಂಗಳೂರು ನಗರದಲ್ಲಿ ರಿಜಿಸ್ಟ್ರೇಷನ್ ಆಗತಕ್ಕಂತಹ ವಾಹನಗಳಿದ್ದಾವೆ, ಆ ವಾಹನಗಳಿಗೆ ತೆರಿಗೆಯನ್ನು ಹಾಕಬೇಕೆಂಬ ಹೊಸ ಆಲೋಚನೆ ಈ ಒಂದು ಮಸೂದೆಯಲ್ಲಿ ಜಾರಿಗೆ ತರುವ ಬಗ್ಗೆ ಪ್ರಯತ್ನವನ್ನು ಮಾಡಿದ್ದೇವೆ. ಬೆಂಗಳೂರು ನಗರದಲ್ಲಿ ಜನ ಬದುಕಬೇಕೆಂಬ ಆಲೋಚನೆ ಇದ್ದರೆ ತೆರಿಗೆ ಹಾಕದೆ ಹಣ ಬರದೆ ಯಾವುದೇ ಕೆಲಸವನ್ನು ಯಾವುದೇ ಸರ್ಕಾರವು ಮಾಡುವುದಕ್ಕಾಗುವುದಿಲ್ಲ. ಅದು ಸರ್ವಕಾಲಿಕ, ಸರ್ವ ಮಾನ್ಯ ಪದ್ಧತಿಯಾಗಿದೆ. ಆಯಾಯ ಕಾಲಕ್ಕೆ ನಗರ ಬೆಳೆದ ಹಾಗೆ, ಅದರ ಅನುಕೂಲಕ್ಕೆ ಈ ಒಂದು ಪ್ರಮಾಣವನ್ನು ಪರಿಷ್ಕರಿಸುವುದಕ್ಕೆ ಅವಕಾಶವಿದೆ. ಅದಕ್ಕಾಗಿ ಈ ಒಂದು ತೆರಿಗೆಯನ್ನು ಈ ಮಸೂದೆಯಲ್ಲಿ ಅಳವಡಿಸಿದ್ದೇವೆ. ಬೆಂಗಳೂರು ನಗರದ ಈ ತೆರಿಗೆಗೆ ನಾವು

ಅನುಮತಿಯನ್ನು ಕೊಡುವುದರ ಜೊತೆಗೆ ನಗರದ ಅಭಿವೃದ್ಧಿಗೆ ಸಹಕರಿಸಬೇಕು. ಬಳಿಗ್ಗೆ ಸಿಂಗಪೂರ್ ವಿಚಾರವನ್ನು ಪ್ರಸ್ತಾಪ ಮಾಡಿದರು, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಆ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನೇ ಆದರ್ಶವಾಗಿಟ್ಟುಕೊಂಡು ನಗರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಾವು ಆಲೋಚನೆಯನ್ನು ಮಾಡುತ್ತೇವೆ. ಹಿಂದೆ ಸ್ವಲ್ಪ ತಾಂತ್ರಿಕ ದೋಷವಿತ್ತು, ಅದೇನೆಂದರೆ ಸೆಕ್ಷನ್ 186ರಲ್ಲಿ ಎಲ್ಲೆಲ್ಲಿ ಸ್ಯೂವರೇಜ್‌ಬೋರ್ಡ್‌ಗಳಿದ್ದಾವೆ, ಅಲ್ಲಿ ಈ ಶಾಸನ ಜಾರಿಯಾಗುವುದಿಲ್ಲ, ಈ ಒಂದು ವಿನಾಯಿತಿ ಕೊಟ್ಟಿದ್ದರು. ಈಗ ಚಾಪ್ಟರ್-13ರಲ್ಲಿ 187 ರಿಂದ 264 ಪ್ರಕರಣಗಳು ಅನ್ವಯವಾಗುವುದಿಲ್ಲ ಎನ್ನುವುದನ್ನು ಸರಿಪಡಿಸುವುದಕ್ಕಾಗಿ ಪ್ರಕರಣ 186ರಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈ ಬೆಂಗಳೂರು ನಗರದಲ್ಲಿ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಚಾಪ್ಟರ್ 13ರಲ್ಲಿ 245 ರಿಂದ 264 ಪ್ರಕರಣಗಳು ನಗರಪಾಲಿಕೆಗೆ ಅನ್ವಯವಾಗುವಂತೆ ತಿದ್ದುಪಡಿಯನ್ನು ತರಲು ಇದರಲ್ಲಿ ಉದ್ದೇಶಿಸಲಾಗಿದೆ. There was a technical flaw. ಅದನ್ನು ಸರಿಪಡಿಸುವುದಕ್ಕೆ ಇಲ್ಲಿ ನಾವು ಪ್ರಯತ್ನವನ್ನು ಮಾಡಿದ್ದೇವೆ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಕಾಂಪ್ರಹೆನ್ಸಿವ್ ಲೆಜಿಸ್ಲೇಷನ್ ಏನು ತಂದಿದ್ದೇವೆ, ಇದಕ್ಕೆ ಸದನವು ಒಪ್ಪಿಗೆಯನ್ನು ಕೊಡುವುದರ ಮೂಲಕ ಪುರಸಭೆಗಳ ಮತ್ತು ನಗರಸಭೆಗಳ ಸರ್ವಾಂಗೀಣ ಅಭಿವೃದ್ಧಿಗೆ ಒಂದು ಮಾದರಿಯನ್ನು ನಾವು ಏನು ರೂಪಿಸಿದ್ದೇವೆ, ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಯೋಚಿಸಿದ್ದೇವೆ, ಮತ್ತು ಸೌಂದರ್ಯವನ್ನು ಹೆಚ್ಚಿಸಬೇಕು ಎಂದು ಯೋಚನೆ ಮಾಡಿದ್ದೇವೆ, ಉತ್ತಮವಾದಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ಬಗ್ಗೆ ಆಲೋಚನೆಯನ್ನು ಮಾಡಿದ್ದೇವೆ ಅದಕ್ಕೆ ಸಹಾಯವಾಗ ಬೇಕೆಂದು ಹೇಳಿ ತಮ್ಮ ಮೂಲಕ ಪ್ರಾರ್ಥನೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಹಾಗೆ ಒಂದೆರಡು ವಿಚಾರಗಳನ್ನು ನಾನು ಹಂಚಿಕೊಳ್ಳುವುದಾದರೆ ಬಹು ಮುಖ್ಯವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ, ಒಂದು ಕ್ರಾಂತಿಕಾರಿ ಬದಲಾವಣೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇಂದು ಸ್ಥಳೀಯ ಸಂಸ್ಥೆಗಳು ಹಾಗೂ ನಮ್ಮ ಕಾರ್ಪೋರೇಷನ್‌ಗಳು, ಆರ್ಥಿಕ ಸ್ಥಿತಿಯಿಂದ ಬಹಳ ಹದೆಗೆಟ್ಟಿವೆ. ಇವೊತ್ತು ಸಂಪನ್ಮೂಲಗಳ ಕೊರತೆಯಿಂದ ಒಂದು ರಸ್ತೆಯನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿಯಾಗಿ ಕುಡಿಯುವ ನೀರಿನ ಯೋಜನೆಗಳನ್ನು ಮಾಡುವುದಕ್ಕಾಗುವುದಿಲ್ಲ. ಈ ಸಂಪನ್ಮೂಲಗಳಿಲ್ಲದೆ ಬಹಳ ವರ್ಷಗಳಿಂದ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದೇವೆ. ಈಗ ನಮ್ಮ ಬಹಳ ಮುಖ್ಯವಾದ ಆದಾಯವೆಂದರೆ, ಈಗ ಬೇರೆ ಬೇರೆ ಸೆಸ್‌ಗಳು ಏನಿದ್ದಾವೆ, ಎಜ್ಯುಕೇಷನ್ ಸೆಸ್, ಹೆಲ್ತ್ ಸೆಸ್, ಲೈಬ್ರರಿ, ಇವೆಲ್ಲಾ ಸೆಸ್‌ಗಳು ಸರ್ಕಾರಕ್ಕೆ ಹೋಗುತ್ತವೆ. ಆದರೆ ನಮ್ಮ

ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಉಳಿದಿರುವಂತಹ ಸೆಸ್‌ಗಳಾದ ಪ್ರಾಪರ್ಟಿ ಟ್ಯಾಕ್ಸ್ ಮಾತ್ರ. ಇದನ್ನು ಬಿಟ್ಟರೆ ಅಡ್ವರ್‌ಟೈಸ್‌ಮೆಂಟ್ ಟ್ಯಾಕ್ಸ್ ಬಿಟ್ಟರೆ ಇವರೆಡು ಟ್ಯಾಕ್ಸ್‌ನ್ನು ಬಿಟ್ಟರೆ ಯಾವುದೇ ಟ್ಯಾಕ್ಸ್‌ನ್ನು ನಾವು ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಿಂದ ನಮ್ಮ ಒಂದು ಆದಾಯ ಬಹಳ ಮುಖ್ಯವಾದಂತಹ ಆದಾಯ, ಈ ಪ್ರಾಪರ್ಟಿ ಟ್ಯಾಕ್ಸ್ ಏನು ಕಲೆಕ್ಟ್ ಮಾಡುತ್ತಿದ್ದೇವೆ, ಈ ಆಸ್ತಿಗಳ ಮೌಲ್ಯವನ್ನು ನಿರ್ಧಾರ ಮಾಡತಕ್ಕಂಥದ್ದು, ಈ ಪ್ರಾಪರ್ಟಿ ಟ್ಯಾಕ್ಸ್‌ಗಳನ್ನು ಕಲೆಕ್ಟ್ ಮಾಡುವುದನ್ನು ಬಹಳ ವರ್ಷಗಳಿಂದ ಬಾಡಿಗೆ ಆಧಾರದ ಮೇಲೆ ಮಾಡಿಕೊಂಡು ಬಂದಿದ್ದೇವೆ. ಇದರಿಂದ ಸರ್ಕಾರಕ್ಕೆ ಬಹಳ ದೊಡ್ಡ ಹಾನಿಯಾಗಿದೆ, ಅಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಏನು ಅಸೆಸ್‌ಮೆಂಟ್ ಮಾಡುತ್ತಾರೆ, ಆ ಅಧಿಕಾರಿಗಳ ಬಹಳ ಅವೈಜ್ಞಾನಿಕವಾಗಿ ಅವರು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅಷ್ಟು ಅವಕಾಶ ಈ ಕಾನೂನು ವ್ಯಾಪ್ತಿಯಲ್ಲಿದೆ, ಪಾರದರ್ಶಕತೆ ಇಲ್ಲ. ಇವತ್ತು ಜನರಿಗೆ ಅನ್ಯಾಯ ಮಾಡುವಂತಹ ಕಾನೂನು ನಮಗೆ ಇರಬಾರದು, ಜನರಿಗೆ ಸಹಾಯವನ್ನು ಮಾಡತಕ್ಕಂತಹ ಕಾನೂನು ತಿದ್ದುಪಡಿಗಳಿಗಿರುವುದರಿಂದ ನಮ್ಮ ಸ್ಥಳೀಯ ಸಂಸ್ಥೆಗಳೂ ಕೂಡ ಹೆಚ್ಚು ಪ್ರಬಲರಾಗಲು ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ನಾವು ವಿಶೇಷವಾಗಿ ರೆಂಟಲ್ ಬೇಸಿಸ್ ಸಿಸ್ಟಮ್ ಏನಿದೆ, ಎ.ಆರ್.ವಿ. ಸಿಸ್ಟಮ್‌ದಿಂದ ಕ್ಯಾಪಿಟಲ್‌ವ್ಯಾಲ್ಯೂ ಎನ್ನತಕ್ಕಂಥದ್ದು ಬಹಳ ವೈಜ್ಞಾನಿಕ ತರತಕ್ಕಂತಹ ಕಾನೂನು ತಿದ್ದುಪಡಿ ಇದರ ಮೂಲಕ ಇವತ್ತು ಆದಾಯವನ್ನು ಹೆಚ್ಚು ಮಾಡುವುದಕ್ಕಿಂತಲೂ ಇವತ್ತು ಬಹಳ ರ್‍ಯಾಷನಲೈಜ್ ಆಗಿ ಮಾಡುವುದರಿಂದ ಇವತ್ತು ಪ್ರತಿಯೊಬ್ಬರಿಗೂ ಹೆರಾಸ್‌ಮೆಂಟ್ ಆಗುವುದನ್ನೂ ಕೂಡ ತಪ್ಪಿಸಬಹುದು. ಅನೇಕ ಯೋಜನೆಗಳನ್ನೂ ಕೂಡ ಮಾಡಲು ಸಾಧ್ಯವಾಗುತ್ತದೆ, ಇವತ್ತು ಬೆಂಗಳೂರು ಪಟ್ಟಣವನ್ನು ತೆಗೆದುಕೊಳ್ಳಿ 200-300 ಕೋಟಿ ರೂಪಾಯಿಗಳನ್ನು ರಸ್ತೆಗಳಿಗಾಗಿ, ಫ್ಲೈ ಓವರ್‌ಗಳಿಗಾಗಿ ಖರ್ಚು ಮಾಡಿದ್ದೇವೆ. ಅದೇ ರೀತಿಯಾಗಿ ಮಂಗಳೂರಿನ ಕೋಸ್ಟಲ್ ಪಟ್ಟಣಗಳಿಗೆ ಸುಮಾರು ಒಂದು ಸಾವಿರದ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದೇ ರೀತಿಯಾಗಿ ಮೈಸೂರು ನಗರಕ್ಕೆ ನಮ್ಮ ಎಡಿಬಿ ಯೋಜನೆಗಳ ಮೂಲಕ ಸುಮಾರು 300 ರಿಂದ 400 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಈ ರೀತಿಯಿಂದ ಕುಡಿಯುವ ನೀರಿಗಾಗಿ ಸುಮಾರು 300 ರಿಂದ 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟೆಲ್ಲಾ ಖರ್ಚು ಮಾಡಿದ ಮೇಲೆ ಇವತ್ತು ನಾವು ಹಣವನ್ನು ಮರುಪಾವತಿ ಮಾಡುವಂತಹ ಸಂದರ್ಭ ಬಂದಾಗ ಇವತ್ತು ಅನೇಕ ತೊಂದರೆಗಳನ್ನು ನಾವು ಎದುರಿಸಬೇಕಾಗಿದೆ. ಇವತ್ತು ರೀಪೇಮೆಂಟ್ ಮಾಡತಕ್ಕಂತಹ ಸ್ವಶಕ್ತಿಗಳು ಆ ಸಂಸ್ಥೆಗಳಿಗೆ ಬರದೆ ಹೋದರೆ ತೊಂದರೆಗಳನ್ನು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ. ಆ ದೃಷ್ಟಿಯಿಂದಾಗಿ ಇವತ್ತು ಯಾರು ಸವಲತ್ತುಗಳನ್ನು ಉಪಯೋಗಿಸುತ್ತಾರೆ, ಯಾರು ಅದನ್ನು ಅನುಭವಿಸುತ್ತಾರೋ ಆ ಸವಲತ್ತನ್ನು ಅನುಭವಿಸತಕ್ಕಂಥವರು ಈ ಪ್ರಾಪರ್ಟಿ ಟ್ಯಾಕ್ಸ್‌ನಿಂದ ಅವರಿಗೆ ಹೊರೆ ಏನು ಆಗುವುದಿಲ್ಲ, ಯಾವುದೇ ರೀತಿಯಿಂದಲೂ ತೊಂದರೆಯಾಗಲಾರದು ಎಂಬ

ದೃಷ್ಟಿಯಿಂದ ಒಂದು ಕ್ರಾಂತಿಕಾರಿ ತಿದ್ದುಪಡಿಗಳನ್ನು ತಂದಿದ್ದೇವೆ, ಈ ಒಂದು ವಿಚಾರವನ್ನು ನಾನು ಹೇಳುವುದರ ಜೊತೆಗೆ ನಾವೀಗ ವೆಹಿಕಲ್ ಸೆಸ್ ಏನು ಹಾಕುತ್ತಿದ್ದೇವೆ, ಅದನ್ನು 500 ರೂಪಾಯಿಗಳು ಎಂದು ಮಾಡಿದ್ದೇವೆ, ಇದು ಗರಿಷ್ಠ ಮೊತ್ತವಾಗಿರುತ್ತದೆ. ಮಿನಿಮಮ್ 100 ರೂಪಾಯಿಗಳನ್ನೂ ಕೂಡ ಮಾಡಬಹುದು, ಹತ್ತು ರೂಪಾಯಿಗಳನ್ನೂ ಕೂಡ ಮಾಡಬಹುದು. ಅವರವರ ಕಾರ್ಪೊರೇಷನ್ ನವರು ರೆಸಲ್ಯೂಷನ್ ಮಾಡಿ ಪಾಸ್ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ಸ್ವಶಕ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ಗಾಗಿ ನಾವೇನು ಸೆಸ್ ವಿಧಿಸುತ್ತಿದ್ದೇವೆ, ಅದನ್ನೂ ಕೂಡ ಕಾರ್ಪೊರೇಷನ್‌ಗಳು ತಮ್ಮ ಒಂದು ಶಕ್ತಿಗನುಗುಣವಾಗಿ ಇವತ್ತು ನಾವೇನು ಪ್ರಾವಿಷನ್ ಮಾಡುತ್ತಿದ್ದೇವೆ ಅದರ ಮೂಲಕ ಸ್ವಶಕ್ತಿಯನ್ನು ಉಪಯೋಗ ಮಾಡಿಕೊಂಡು ಎಷ್ಟರಮಟ್ಟಿಗೆ ಅವರು ಸಹಾಯವನ್ನು ಈ ಕಾನೂನಿನಡಿಯಲ್ಲಿ ತೆಗೆದುಕೊಳ್ಳಬಹುದು ಎನ್ನುವುದನ್ನು ಇದರಲ್ಲಿ ತೋರಿಸಿದ್ದೇವೆ. ನನ್ನ ದೃಷ್ಟಿಯಲ್ಲಿ ಮತ್ತು ನಮ್ಮ ಸರ್ಕಾರದ ದೃಷ್ಟಿಯಲ್ಲಿ ಒಂದು ಪಾರದರ್ಶಕತೆ ದೃಷ್ಟಿಯಿಂದ ಇವತ್ತು ಪಾರದರ್ಶಕತೆ ನಮ್ಮಲ್ಲಿ ಮೂಡಿ ಬರಬೇಕಾದರೆ, ಇವತ್ತು ಕಾನೂನಿನ ಬದಲಾವಣೆಯಿಂದ ತಿಳುವಳಿಕೆಯನ್ನು ಹೇಳತಕ್ಕ ಕೆಲಸ ಕೂಡ ಆಗಬೇಕಾಗಿದೆ. ಸರಳವಾದ ರೀತಿಯಲ್ಲಿ ಕಾನೂನು ತಂದಾಗ ಜನರಿಗೆ ಹೆಚ್ಚು ಉಪಯೋಗವಾಗುತ್ತದೆ. ಆ ದೃಷ್ಟಿಯಿಂದ ಹೆಚ್ಚು ಹೆಚ್ಚು ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಹೆಚ್ಚು ಮಾಡತಕ್ಕ ಕೆಲಸವಾಗಬೇಕು. ಅನೇಕ ಕಾಮಗಾರಿಗಳಿಗೆ ಹೆಚ್ಚು ಹಣ ಬೇಕಾದರೆ ಆ ಸಮಯದಲ್ಲಿ ಕಾನೂನು ತಿದ್ದುಪಡಿಯ ಮೂಲಕ ಹೆಚ್ಚಿನ ಸಹಾಯವಾಗುತ್ತದೆ ಎನ್ನುವುದು ನನ್ನ ಭಾವನೆ. ಇವತ್ತು ಅನೇಕ ತಿದ್ದುಪಡಿಗಳನ್ನು ತಂದಿದ್ದೇವೆ. ಸದನದ ಸದಸ್ಯರೆಲ್ಲರೂ ತಮ್ಮ ಒಪ್ಪಿಗೆಯನ್ನು ನೀಡಿದ್ದಾರೆ. ಅದೇ ರೀತಿ ಈ ಮಸೂದೆಗೂ ತಮ್ಮ ಒಪ್ಪಿಗೆಯನ್ನು ನೀಡಬೇಕೆಂದು ನಾನೂ ಕೂಡ ಧ್ವನಿಗೂಡಿಸುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್): ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಇದು ಬೆಂಗಳೂರು ಮಹಾನಗರ ಪಾಲಿಕೆಗೆ ಮೀಸಲಾಗಿರದೆ, ಕರ್ನಾಟಕದ ಎಲ್ಲಾ ಮಹಾನಗರ ಪಾಲಿಕೆಗಳಿಗೆ ವಿಸ್ತರಣೆಯಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ. ದಂಡವನ್ನು ವಿಧಿಸುವುದರ ಬದಲು 30 ದಿವಸ ಗಡುವು ಕೊಟ್ಟು ನೋಟೀಸು ಕೊಟ್ಟರೆ ಏನಾದರೂ ತಪ್ಪು ಇದ್ದರೆ ಅವನ್ನು ಸರಿಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎರಡು ಪಟ್ಟು ದಂಡವೆಂದು ಹೇಳಿದ್ದಾರೆ. ಅದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಾ?

ಅಧ್ಯಕ್ಷರು: ಚರ್ಚೆ ಅಂದರೆ ಇಬ್ಬರು ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಸದಸ್ಯರು ತಕ್ಷಣ ಎದ್ದು ಮಾತನಾಡಲಿಕ್ಕೆ ಶುರು ಮಾಡಿದರು.

ಶ್ರೀ ವಿಜಯಕುಮಾರ್ ಶೆಟ್ಟಿ: ಮಾನ್ಯ ಸುರೇಶ್‌ಕುಮಾರ್‌ರವರೇ, ಒಂದೇ ನಿಮಿಷ. ನಾವು ಕಳೆದ ಅಧಿವೇಶನದಲ್ಲಿ ಮಹಾನಗರ ಪಾಲಿಕೆಗಳ ನೌಕರರನ್ನು ವರ್ಗಾವಣೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದಾಗ ಮುಂದಿನ ಅಧಿವೇಶನದಲ್ಲಿ ಆ ವಿಚಾರವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದರು. ಬಹುಶಃ ಈ ಅಧಿವೇಶನ ಮುಗಿಯುವುದರೊಳಗೆ ಮಹಾನಗರ ಪಾಲಿಕೆ ನೌಕರರ ಪರಸ್ಪರ ವರ್ಗಾವಣೆ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಇವೊತ್ತು ಕರ್ನಾಟಕ ಮುನಿಸಿಪಾಲಿಟಿಗಳ ತಿದ್ದುಪಡಿ ಮಸೂದೆ ಮತ್ತು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿ ಮಸೂದೆಗಳನ್ನು ಮಂಡಿಸಿ ಸಭೆಯ ಅನುಮೋದನೆಗೆ ಇಡಲಾಗಿದೆ. ಎರಡೂ ಬಿಲ್‌ಗಳ ಅಂಶ ಸಾಮ್ಯವಿರುವುದರಿಂದ ನಾನು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿ ಮಸೂದೆ ಏನಿದೆ ಅದರ ಬಗ್ಗೆ ನನ್ನ ವಿಚಾರಗಳನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಈ ಮಸೂದೆಯ ಉದ್ದೇಶವನ್ನು ತಾವು ತಿಳಿಸಿದ್ದೀರಿ. ಉದ್ದೇಶ ಬಹಳ ಒಳ್ಳೆಯದು ಇದೆ. "... to simplify the procedure, to introduce the system of self-assessment of property tax and provide for...." ಹೀಗೆ ಅನೇಕ ಸಂಗತಿಗಳನ್ನು ಹೇಳಿಕೊಂಡು ಹೋಗಿದ್ದಾರೆ. ಪ್ರಾಯಶಃ ಅನೇಕ ಜನರ ಅನೇಕ ದಿನಗಳ ಬಯಕೆ ಇದು. ನಮ್ಮ ಮನೆಯ ಪ್ರಾಪರ್ಟಿ ಟ್ಯಾಕ್ಸ್‌ನ್ನು ನಾವೇ ಲೆಕ್ಕಾಚಾರ ಮಾಡಬೇಕು. ಯಾವ ರೀತಿಯಲ್ಲಿ ಇನ್‌ಕಂಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಲೆಕ್ಕಾಚಾರ ಮಾಡುತ್ತೇವೆ, ಅದೇ ರೀತಿ ನಮ್ಮ ಮನೆಯ ಟ್ಯಾಕ್ಸ್‌ನ್ನು ನಾವೇ ಲೆಕ್ಕಾಚಾರ ಮಾಡುವುದು. ಇಷ್ಟು ದಿವಸ ಏನಾಗಿದೆ ಅಂದರೆ any tax payer, he was at the mercy of the assessor. ಅಸ್ಸೆಸರ್ ಬಂದು ಏನು ಹೇಳುತ್ತಿದ್ದ ಅದನ್ನು ಅವರು ಕೊಡಬೇಕು. ಇಲ್ಲದಿದ್ದರೆ ಅಸ್ಸೆಸರ್ ಮತ್ತು ಟ್ಯಾಕ್ಸ್‌ಪೇಯರ್ ಹೊಂದಾಣಿಕೆಯಿಂದ ಕೊಡಬೇಕು. ಏನೋ ಒಂದು ಹೊಂದಾಣಿಕೆ ಆಗುತ್ತಿತ್ತು. ಆದರೆ ಕಾರ್ಪೊರೇಷನ್‌ಗೆ ಏನು ಹಣ ಬರಬೇಕಾಗಿತ್ತು ಅದು ಬರುತ್ತಿರಲಿಲ್ಲ. ಕಾರ್ಪೊರೇಷನ್‌ನಲ್ಲಿರುವವರಿಗೆ ಜಾಸ್ತಿ ದುಡ್ಡು ಹೋಗುತ್ತಿತ್ತು. ಇಷ್ಟರಮಟ್ಟಿಗೆ ನಾವು ಈ ಮಸೂದೆಯನ್ನು ಸ್ವಾಗತ ಮಾಡುತ್ತೇವೆ. 1986ನೇ ಇಸವಿಯಿಂದ ಇದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಸೆಲ್ಫ್ ಅಸೆಸ್‌ಮೆಂಟ್ ಆಗಬೇಕು ಫಾರ್ಮೆಟ್‌ನಲ್ಲಿ ಆ ರೀತಿ ಸುಲಭ ಲೆಕ್ಕಚಾರದ ಸೂತ್ರವನ್ನು ಕೊಡಬೇಕೆಂದು ಹೇಳುತ್ತಿದ್ದೆವು. ಈಗ ಅದು ಆಗಿದೆ. ಇವತ್ತು ಈ ಮಸೂದೆಯನ್ನು ತರುವಾಗ ನನಗೊಂದು ಕುತೂಹಲ. ಮಾನ್ಯ ಕಾನೂನು ಸಚಿವರು ಅದನ್ನು ತಣಿಸಲಿಲ್ಲ. ಅವರು ಹೈಕೋರ್ಟ್ ಬಗ್ಗೆ ಎಲ್ಲಾ ಹೇಳಿದ್ದಾರೆ. ಈ ತಿದ್ದುಪಡಿ ಅನುಮೋದನೆ ಆಗುವುದಕ್ಕೆ

ಮುಂಚೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾನೂನಿಗೆ ತಿದ್ದುಪಡಿ ಇಲ್ಲದೆ ಬಹಳ ಬುದ್ಧಿವಂತಿಕೆಯಿಂದ ಯಾವ ಕಾನೂನಿನ ಅಡಿ ಅನುಷ್ಠಾನಕ್ಕೆ ತಂದಿದ್ದಾರೆ? ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಈಗಾಗಲೇ ಬೆಂಗಳೂರಿನಲ್ಲಿ ಅನುಷ್ಠಾನಕ್ಕೆ ತಂದಿದ್ದೀರಿ. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಈಗಾಗಲೇ ಬೆಂಗಳೂರಿನಲ್ಲಿ ಲಾಗು ಆಗಿದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಸುರೇಶ್‌ಕುಮಾರ್ ಒಂದು ನಿಮಿಷ. ಈಗಾಗಲೇ ಬೆಂಗಳೂರಿನಲ್ಲಿ ಜಾರಿಗೆ ತಂದಿರುವ ಕಾನೂನು ಅದನ್ನು ಹುಬ್ಬಳ್ಳಿ ಧಾರವಾಡದಲ್ಲಿ ತರಲಿಕ್ಕೆ ಪ್ರಯತ್ನ ಮಾಡಿದರು. ಅಲ್ಲಿ ಕೋರ್ಟ್‌ನಲ್ಲಿ ಅದು ಕ್ವ್ಯಾಶ್ ಆಯಿತು.

ಶ್ರೀ ಎಸ್.ಸುರೇಶ್‌ಕುಮಾರ್: ಸರಿಯಾಗಿ ವಾದ ಮಾಡಲಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು: ಕಾರ್ಪೊರೇಷನ್‌ರವರು ಕೆಲವು ಗೈಡ್‌ಲೈನ್ಸ್ ಮಾಡಿದ್ದಾರೆ. ಆ ಗೈಡ್ ಲೈನ್ಸ್ ಮೇಲೆ ನಾವೇ ಸೆಲ್ಫ್ ಅಸೆಸ್‌ಮೆಂಟ್ ಮಾಡಿಕೊಳ್ಳುವುದು. ಈಗಲೂ ಕೂಡ ವಾಲೆಂಟರಿ ಆಗಿ ಕಟ್ಟಬಹುದು.

ಶ್ರೀ ಎಸ್.ಸುರೇಶ್‌ಕುಮಾರ್: ಅದು ಇರಲಿ. ಮಂತ್ರಿಗಳು ಉತ್ತರ ಕೊಡಲಿ ಸಾರ್. ಅದು ವಾಲೆಂಟರಿಯಾದರೆ ಅದಕ್ಕೆ ತಿದ್ದುಪಡಿಯನ್ನು ಏಕೆ ತಂದರು? ನಮಗೆ ಭಯ ಏನೆಂದರೆ, ಒಂದೊಂದು ಬಿಲ್‌ಗೆ ಇಬ್ಬರು ಮಿನಿಸ್ಟರ್ ಮಾತನಾಡಿದ್ದಾರೆ. ಇದು ಫಸ್ಟ್‌ಟೈಮ್ ವಿಧಾನಸಭೆಯ ಇತಿಹಾಸದಲ್ಲಿ ಇದು ಮೊದಲ ಬಾರಿ ಈ ರೀತಿಯಾಗಿದೆ. ಮೊದಲು ಕಾನೂನು ಸಚಿವರು ಆಮೇಲೆ ನಗರಾಭಿವೃದ್ಧಿ ಸಚಿವರು ಏಕೋ ಪೌರಾಡಳಿತ ಸಚಿವರು ಎದ್ದು ನಿಂತು ಮಾತನಾಡಲಿಲ್ಲ ಅದು ನಮ್ಮ ಪುಣ್ಯ. ನನ್ನ ಪ್ರಶ್ನೆ ಏನೆಂದರೆ ಈಗಾಗಲೇ ನೀವು ಬೆಂಗಳೂರಿನಲ್ಲಿ ಜಾರಿಗೆ ತಂದಿರುವುದರಿಂದ ಬೆಂಗಳೂರಿನಲ್ಲಿ ಭಾರಿ ಪ್ರಚಾರ ಮಾಡಿ ಜನರೆಲ್ಲರೂ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಮುಂದೆ ಬಂದು ಟ್ಯಾಕ್ಸ್ ಕೊಡುತ್ತಿರುವಾಗ what is the sanctity of this amendment? ಬದಲಾವಣೆ ಮಾಡಿದ್ದಾರೆ. ನೀವು ಹೇಳಬಹುದು ಇದು ಟ್ರಯಲ್ ಎಂದು. ಟ್ರಯಲ್‌ಗೋಸ್ಕರ ಬಲೂನ್ ಬಿಡುತ್ತಾರಲ್ಲಾ ಹಾಗೇನು ಇದು? ಇದು ರಿಚ್ಮಂಡ್ ಸರ್ಕಲ್‌ನಲ್ಲಿರುವ ಫ್ಲೈಓವರ್ ಅಲ್ಲ. ಮೇಖ್ರಿ ಸರ್ಕಲ್‌ನಲ್ಲಿ ಉದ್ಘಾಟನೆಗೆ ಮುಂಚೆ 15 ದಿವಸ ವಾಹನಗಳನ್ನು ಓಡಾಡುವುದಕ್ಕೆ ಬಿಡುತ್ತಾರೆ. ವಾಹನಗಳು ಹೇಗೆ ಹೋಗುತ್ತವೆ ಏನು ತೊಂದರೆಯಿದೆ ಅದನ್ನು ನೋಡುವುದಕ್ಕೆ ಆ ರೀತಿಯ ಸಂಗತಿ ಇದು ಅಲ್ಲ. ಈಗ ಪ್ರಾಪರ್ಟಿಟ್ಯಾಕ್ಸ್ ಬಗ್ಗೆ ಕೆಎಂಸಿ ಆಕ್ಟ್‌ನಲ್ಲಿ ಸೆಕ್ಷನ್ 110ಕ್ಕೆ ತಿದ್ದುಪಡಿಯನ್ನು ತರಬೇಕು. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ದಯವಿಟ್ಟು ನನ್ನ ಈ ಪ್ರಶ್ನೆಗೆ ಉತ್ತರ ಕೊಡಬೇಕು. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ತರಲಿಕ್ಕೆ ನಿಮಗೆ ಯಾವ ಅಧಿಕಾರ ಇದೆ? ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಜಾರಿಗೆ ತಂದು ಅದನ್ನಾದರೂ ತೆಗೆದುಕೊಳ್ಳಬಹುದು ಹಳೆಯದನ್ನಾದರೂ ತೆಗೆದುಕೊಳ್ಳಬಹುದೆಂದು ಹೇಳಿದರೆ ಅದು ಸೂಕ್ತ ಉತ್ತರ

ಆಗಲಿಕ್ಕಿಲ್ಲ. ಯಾವ ಕಾನೂನಿನ ಅಡಿಯಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಬೆಂಗಳೂರಿನಲ್ಲಿ ಜಾರಿಗೆ ತಂದಿದ್ದೀರಿ? ಈಗ ಕಾನೂನಿಗೆ ತಿದ್ದುಪಡಿಯನ್ನು ತರುತ್ತಿದ್ದೀರಿ. ಅದು ಜಾರಿಗೆ ಬಂದು ಒಂದು ವರ್ಷವಾಯಿತು. ಬೆಂಗಳೂರಿನಲ್ಲಿ ಜಾರಿಗೆ ತಂದ ಅನುಭವದ ಅಡಿಯಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಈ ತಿದ್ದುಪಡಿಯಲ್ಲಿ ಏನೇನು ಬದಲಾವಣೆಗಳನ್ನು ತಂದಿದ್ದೀರಿ? ಪ್ರೊ ಪೀಪಲ್, ಪ್ರೊ ಸಿಟಿಜನ್ಸ್, ಪ್ರೊ ಟ್ಯಾಕ್ಸ್‌ಪೇಯರ್ ಎಂದು ಹೇಳುತ್ತಾರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವ್ಯಾವ ಬದಲಾವಣೆ ತಂದಿದ್ದೀರಿ? ಉದಾಹರಣೆಗೆ ಬೆಂಗಳೂರಿನಲ್ಲಿ ಬಹಳ ದೊಡ್ಡ ಗೊಂದಲವಾಗಿತ್ತು. ಅದು ಮಾನ್ಯ ರೋಷನ್ ಬೇಗ್‌ರವರಿಗೆ ಗೊತ್ತಿದೆ. ಜೋನ್‌ಗಳನ್ನು ಮಾಡುವಾಗ ಯಾವರೀತಿ ಮಾಡಿದರು ಅನ್ನುವುದು ಬೆಂಗಳೂರಿನಲ್ಲಿರುವವರಿಗೆ ಗೊತ್ತು. ''ಇ'' ಜೋನ್ ಮಾಡಿದವರಿಗೆ ಎಫ್ ಜೋನ್ ಎಂದು ಮಾಡಿದರು. ''ಎಫ್'' ಜೋನ್ ಮಾಡಲೇಬೇಕಾದವರಿಗೆ ''ಇ'' ಜೋನ್ ಎಂದು ಮಾಡಿದರು. ಒಂದು ರೀತಿ ಪಬ್ಲಿಕ್ ಇಯರಿಂಗ್ ಇರಲಿಲ್ಲ. ಜನರ ನೋಟೀಸ್‌ಗೆ ತಂದು ಅವರ ಅಭಿಪ್ರಾಯಗಳನ್ನು ಅಥವಾ ಅವರ ಆಕ್ಷೇಪಣೆಗಳನ್ನು ತೆಗೆದುಕೊಂಡು ಆಖೈರ್ ಆಗಿ ಪ್ರಕಟಿಸುವ ಯೋಚನೆ ಮಾಡಲಿಲ್ಲ. ಇವತ್ತು ಕೆಳ ಮಧ್ಯಮವರ್ಗದ ಜನ ಇರುವ ಪ್ರದೇಶಗಳನ್ನು ''ಇ'' ಜೋನ್ ಎಂದು ಮಾಡಿದರು. ಮಧ್ಯಮವರ್ಗದ ಜನ ವಾಸಿಸುವ ಕಡೆ ''ಎಫ್'' ಜೋನ್ ಮಾಡಿದ್ದಾರೆ. ಎಫ್ ಜೋನ್‌ನಲ್ಲಿರತಕ್ಕವರು ಟ್ಯಾಕ್ಸ್‌ನ್ನು ಕಡಿಮೆ ಕೊಡುತ್ತಾರೆ ''ಇ'' ಜೋನ್‌ನಲ್ಲಿರತಕ್ಕವರು ಜಾಸ್ತಿ ಕಟ್ಟುತ್ತಾರೆ. ಈ ರೀತಿಯಾಗುವ ಹಿನ್ನಲೆಯಲ್ಲಿ ಏನಾದರೂ ಬದಲಾವಣೆ ಮಾಡಿದ್ದಾರೆಯೇ ಎಂದು ನಾನು ಈ ತಿದ್ದುಪಡಿ ಮಸೂದೆಯಲ್ಲಿ ಹುಡುಕಿದೆ ಆ ರೀತಿ ಏನೂ ಇಲ್ಲ. ಜೋನ್ ಮಾಡುವಾಗ ಏರಿಯಾ ಎಂದು ಹೇಳಿದ್ದಾರೆ. ನೀವು ಏನು ಹೇಳಿದ್ದೀರಿ ಅಂದರೆ "To levy property tax at such percentage of taxable capital value fixed by the corporation with reference to the location, type of construction of the building, nature of the use to which property is put, area of the land,

ಏರಿಯಾ ಆಫ್ ಲ್ಯಾಂಡ್ ಎಂದು ಹೇಳಿದ್ದಾರೆ. ಏರಿಯಾ ಆಫ್ ದಿ ಲ್ಯಾಂಡ್ ಅಂದರೆ ಸೈಜ್ ಆಫ್ ದಿ ಲ್ಯಾಂಡ್ ಎಂದು ಹೇಳುತ್ತೀರೋ? ಅಥವಾ ಯಾವ ಪ್ರದೇಶದಲ್ಲಿದೆ, ಅದನ್ನು ಹೇಳಬೇಕು.

4.50 ಪಿ.ಎಂ

ಇದನ್ನು ಯಾವ ರೀತಿ ನಿಶ್ಚಯ ಮಾಡುತ್ತೀರಿ? ಏನಾದರೂ ಆ ಕ್ಷೇತ್ರದ ಜನರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ? will there be any public hearing? ಇದಕ್ಕೂ ಕೂಡ ಮಾನ್ಯ ಸಚಿವರು ಉತ್ತರ ಕೊಡಬೇಕು. ಮುಂದೆ ಸೆಕ್ಷನ್ 103(ಬಿ)ಯ ಬಗ್ಗೆ ಬಹಳ ಚೆನ್ನಾಗಿ ಮಾನ್ಯ ಚಂದ್ರೇಗೌಡರು ವಿವರಿಸಿದರು.

ಕಾರ್ಪೊರೇಷನ್‌ಗೆ ಬಹಳ ಕಷ್ಟವಾಗುತ್ತಿದೆ, ಅದಕ್ಕೆ ಬದುಕುವುದೇ ಕಷ್ಟವಾಗುತ್ತಿದೆ, ನಾಗರೀಕರೆಲ್ಲಾ ಸೇರಿಕೊಂಡು ಬದುಕಿಸಬೇಕು, ಎಂದರೆ ಅವರು ಕಷ್ಟಪಡಬೇಕು, ಎಂದು ಅವರು ಬಹಳ ಚೆನ್ನಾಗಿ ವಿವರಿಸಿದರು. ಇಲ್ಲಿ ಪ್ರಶ್ನೆ ಇರುವುದು Levy' of Infrastructure & Solid Waste Management Cess, ಎಂದು ಇದೆ. ನಿಜವಾಗಿಯೂ ಚಂದ್ರೇಗೌಡರೇ, ಜನರ ಮೇಲೆ ಇದನ್ನು ಹಾಕಬೇಕು? ಬೆಂಗಳೂರಿನಲ್ಲಿ ಹುಟ್ಟಿದ್ದಕ್ಕೆ ಇದು ಅವನ ಕರ್ಮವೇನು?

SRI D.B.CHANDRE GOWDA:- We need one thousand crore of rupees!

SRI S.SURESH KUMAR:- "Notwithstanding any thing contained in Section 19 of the Karnataka Motor Vehicle Taxation Act, 1957..." ಅಂದರೆ ಅದರಲ್ಲಿ ಲೈಫ್ ಟ್ಯಾಕ್ಸ್ ಹಾಕುವವರು ಹಾಕಿಕೊಳ್ಳುತ್ತಾರೆ. ಅದನ್ನು ಬಿಟ್ಟು ಅಥವಾ ಹೊರತುಪಡಿಸಿ - "The Corporation may in addition to the tax levied under the Act, levy and collect an Infrastructure Cess at such rate not exceeding Rs.500 per annum." ಬೆಂಗಳೂರಿನಲ್ಲಿ ಇವತ್ತು ಲೈಫ್‌ಟ್ಯಾಕ್ಸ್ ಕಟ್ಟುತ್ತಿದ್ದೇವೆ, ಅದರ ಜೊತೆಗೆ ನಮ್ಮ ಮಾನ್ಯ ಸ್ನೇಹಿತರಾದ ಸೋಮಶೇಖರ್ ಅವರ ಸರ್ಕಾರ ಇದ್ದಾಗ ಬೆಂಗಳೂರು ನಗರದ ಜನತೆಯ ಮೇಲೆ ಒಂದು ಜೆಸಿಯಾ ಕಂದಾಯವನ್ನು ಹೇರಿದರು. ಇನ್‌ಫ್ರಾಸ್ಟ್ರಕ್ಚರ್ ಸೆಸ್ ಎಂದು; ಒಂದೊಂದು ಲೀಟರ್ ಪೆಟ್ರೋಲ್ ನಾವು ಹಾಕಿಸಿಕೊಂಡರೆ ದುಡ್ಡು ಕಟ್ಟಬೇಕು. 1995ರಿಂದ ನಾವು ಅದನ್ನು ಕಟ್ಟುತ್ತಲೇ ಬಂದಿದ್ದೇವೆ. ಅದರ ಜೊತೆಗೆ over and above ಇವತ್ತು ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕುತ್ತಿದ್ದಾರೆ. ಒಂದು ರೀತಿ ಬೆಂಗಳೂರು ನಗರವನ್ನು highest taxed city in the country ಮಾಡುವುದಕ್ಕೆ ಹೊರಟಿದ್ದೀರಾ? can the citizens of Bangalore afford?... ನಮ್ಮ ಶ್ರೀ ಬಿ.ಕೆ.ಚಂದ್ರಶೇಖರ್ ಅವರು ಹೇಳುತ್ತಿದ್ದರು - Five hundred is maximum. ಐದುನೂರು ರೂಪಾಯಿಗಿಂತ ಜಾಸ್ತಿಯಾಗುವುದಿಲ್ಲ ಎಂದು. ಮ್ಯಾಕ್ಸಿಮಮ್ ಐದು ನೂರು ರೂಪಾಯಿಯನ್ನೇ ಹಾಕುತ್ತೀರಿ. ಈಗ ಒಬ್ಬ ಲೂನಾ ಇಟ್ಟುಕೊಂಡರೆ ಅಥವಾ ಒಂದು ಟಿ.ವಿ.ಎಸ್. 50 ಇಟ್ಟು ಕೊಂಡಿರುತ್ತಾನೆ. ಅವನಿಗೆ over and above everything, ಐದುನೂರು ರೂಪಾಯಿ ಹೇರಿದರೆ....

ಪ್ರೊ.: ಬಿ.ಕೆ.ಚಂದ್ರಶೇಖರ್: ಅದು ಸೀಲಿಂಗ್ ಎಂದು ಇರುವುದು.

ಶ್ರೀ ಎಸ್.ಸುರೇಶ ಕುಮಾರ್: ಸೀಲಿಂಗ್ ಎಂದರೆ ಹತ್ತು ರೂಪಾಯಿ ಹಾಕಬಹುದು ಎಂದು ಏನಿಲ್ಲ. ನಾವು ಕಾರ್ಪೊರೇಷನ್‌ಗೆ ಅಧಿಕಾರ ಕೊಟ್ಟಾಗ.... Nothing prevents them to levy Rs.500/-.

ಪ್ರೊ. ಬಿ.ಕೆ.ಚಂದ್ರಶೇಖರ್: ನಾವು ಕೊಟ್ಟಿರುವುದು ಮ್ಯಾಕ್ಸಿಮಮ್. ಅದರೊಳಗೆ ಟೆಂಡರ್‌ಬೇಸ್‌ನ್ನು ಮಾಡಬಹುದು, ಐವತ್ತು ರೂಪಾಯಿ ಬೇಕಾದರೂ ಮಾಡಬಹುದು. ಇಲ್ಲದೇ ಹೋದರೆ ದ್ವಿಚಕ್ರ ವಾಹನಗಳು ಭಾರ ಆದರೆ ಅದನ್ನು ಬಿಡಬಹುದು. not compulsory: Not complulsion.

ಶ್ರೀ ಎಸ್.ಸುರೇಶ್ ಕುಮಾರ್: ಈಗ ಇದರ ಜೊತೆಗೆ ಸೆಕ್ಷನ್ 103(ಬಿ)ನಲ್ಲಿ ಸಬ್‌ಸೆಕ್ಷನ್ 2ರಲ್ಲಿ-

"Corporation may in addition to property tax levied under Sec.103, levy a Solid Waste Management Cess at such rate

ಎಂದು ಇದೆ. ಇದನ್ನು ನೆನೆಸಿಕೊಂಡರೆ ಗಾಬರಿಯಾಗುತ್ತದೆ.

"not exceeding Rs.1000 per month as may be prescribed".

ಈಗ ಕೆ.ಎಂ.ಸಿ. ಆಕ್ಟ್ ಇದೆ. ಅದರಲ್ಲಿ ಸೆಕ್ಷನ್ 58 ಬಹಳ ಮುಖ್ಯವಾದದ್ದು. Obligatory functions of the Corporation.

"It shall be incumbent on the Corporation to make reasonable and adequate provision by any means or measures lawfully competent.... for each of the following ಅದರಲ್ಲಿ ಸಬ್‌ಸೆಕ್ಷನ್ (3) ಏನು ಹೇಳುತ್ತದೆ? ಈ ರೀತಿ ಇದೆ.

"Collection, removal, treatment and disposal of sewage, offensive matter and rubbish and preparation of compost manure from such sewage, offensive matter and rubbish..."

It is an obligatory duty on the part of the Corporation. ನೀವು ಏನೂ ಹೊಸದಾಗಿ ಮಾಡುವುದಕ್ಕೆ ಹೊರಟಿಲ್ಲ. ಇವತ್ತು ನಾವು ಪ್ರಾಪರ್ಟಿ ಟ್ಯಾಕ್ಸ್ ಕೊಡುತ್ತಿದ್ದೇವೆ. ಮುಂಚೆ ಅಸೆಸರ್ ಮಾಡುತ್ತಿದ್ದಾಗ ಎಷ್ಟು ಇತ್ತು ಎಂಬುದು ಸೋಮಣ್ಣ ಅವರಿಗೂ ಗೊತ್ತು, ರೋಷನ್‌ಬೇಗ್ ಅವರಿಗೂ ಗೊತ್ತು. ಬೆಂಗಳೂರಿನಲ್ಲಿ ಸರ್ವೆಸಾಮಾನ್ಯವಾಗಿ ಸೆಲ್ಫ್ ಅಸೆಸ್‌ಮೆಂಟ್ ಬಂದ ಮೇಲೆ ಪ್ರತಿ ಮನೆಯ ಕಂದಾಯ ಎರಡೂವರೆ ಪಟ್ಟು ಜಾಸ್ತಿಯಾಗಿದೆ. ನನಗನ್ನಿಸುತ್ತದೆ ಇದು ಸ್ವಯಂ ಘೋಷಿತ ಆಸ್ತಿತೆರಿಗೆ ಪದ್ಧತಿನೋ ಅಥವಾ ಇದು ಸ್ವಯಂ ಶೋಷಿತ ಆಸ್ತಿ ತೆರಿಗೆ ಪದ್ಧತಿನೋ? ಈ ರೀತಿ ಹೆಚ್ಚಿನ ತೆರಿಗೆ ಕೊಟ್ಟು ಈಗ ಮನೆಗಳಿಂದ ಕಸ ತೆಗೆದುಕೊಂಡು ಹೋಗುವುದಕ್ಕೆ ಅಥವಾ ಅಂಗಡಿ ಮುಂಗಟ್ಟಿನಿಂದ ಕಸ ತೆಗೆದುಕೊಂಡು ಹೋಗುವುದಕ್ಕೂ ಕೂಡ -"Levy of solid waste management cess at such rate, not exceeding

Rs.1000/-per month as may be prescribed". ಎಂದರೆ ಏನರ್ಥ? ಒಂದೆ ಹೆಚ್.ಆರ್.ಸಿ. ಕೇಸುಗಳು ಇದ್ದಾಗ ಒಂದು ಗಾದೆ ಇತ್ತು. "Fools build houses, wisemen live there". ಎಂದು ಇವೊತ್ತು ಬೆಂಗಳೂರು ನಗರದಲ್ಲಿ -Fools built Houses, Corporation collects taxes and cesses. ಈ ರೀತಿಯ ಒಂದು ಸ್ಥಿತಿ ಬಂದು ಬಿಟ್ಟಿದೆ. ಯಾವುದೇ ರೀತಿಯಿಂದ ಇದಕ್ಕೆ ನೀವು ಸಮಜಾಯಿಷಿ ಕೊಡಬಹುದಾ? ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು, ಶ್ರೀ ಚಂದ್ರೇಗೌಡರು ಹೇಳಬಹುದು ಇಲ್ಲ, ನಮ್ಮದು ಈ ರೀತಿ ಕಾಸ್ಟ್ ಜಾಸ್ತಿಯಾಗುತ್ತಿದೆ, 960 ರೂಪಾಯಿ ಆಗುತ್ತದೆ ಪರ್ ಟನ್ ಎಂದು. ಆದರೆ ಎಷ್ಟರ ಮಟ್ಟಿಗೆ ಒಬ್ಬ ನಾಗರೀಕ ಈ ಭಾರವನ್ನು ಹೊರುವುದಕ್ಕೆ ಸಾಧ್ಯವಿದೆ? you are asking him to crawl on the road. ಆ ರೀತಿಯ ಒಂದು ಪರಿಸ್ಥಿತಿ ಬರುತ್ತಿದೆ. ಇದನ್ನು ನೀವು ಪುನರ್‌ವಿಮರ್ಶೆ ಮಾಡದೇ ಇದ್ದರೆ - especially this solid waste management cess ಏನಿದೆ ಇದನ್ನು ನಾವು ಮನೆಗಳಿಗೂ ಹಾಕುತ್ತೇವೆ ಎನ್ನುವ ಸ್ಥಿತಿ ಬಂದುಬಿಟ್ಟರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ನೀವು ಇದನ್ನು ಸ್ಪೆಸಿಫೈ ಮಾಡಿಲ್ಲ. ಬರೇ ಅಂಗಡಿಗಳಿಗೆ, ಹೋಟೆಲ್‌ಗಳಿಗೆ ಹಾಕುತ್ತೇವೆ ಎಂದು ಸ್ಪೆಸಿಫೈ ಮಾಡಿಲ್ಲ. ನೀವು ಏನು ಹೇಳಿರುವುದು?

"Levy of solid waste management cess at such rate not exceeding Rs.1000 per month on every owner or occupier of buidlings or lands or both in the City".

ಎಂದು ಹಾಕಿದ್ದೀರಿ. ಆದರೆ ಅದನ್ನು ಸ್ಪೆಸಿಫೈ ಮಾಡಿಲ್ಲ. ಪ್ರೊ: ಚಂದ್ರಶೇಖರ್ ಅವರೇ, ನಾನು ಹೇಳುವುದು ಏನೆಂದರೆ ಎಷ್ಟು ಕಡಿಮೆ ಆಗುತ್ತದೆಯೋ ಅಷ್ಟು ಕನ್‌ಫ್ಯೂಷನ್ ನಾವಿಲ್ಲಿ ಬಿಡಬೇಕು. ನಾವು ಜಾಸ್ತಿ ಜಾಸ್ತಿ ಬಿಟ್ಟಷ್ಟು ತಮಗೆ ಗೊತ್ತು, ಅಲ್ಲಿ ಹೇಗೆ, ಯಾವರೀತಿ ನಡೆಯುತ್ತಿದೆ ಎಂದು ನಿಮಗೂ ಕೂಡ ಅವಕಾಶ ಇದ್ದಾಗ ಇದನ್ನು ಮಾಡಬಹುದಾಗಿತ್ತು ಎಂದು ನಾನು ಹೇಳುವುದು.

ಪ್ರೊ: ಬಿ.ಕೆ.ಚಂದ್ರಶೇಖರ್: ಮಾನ್ಯ ಚಿಮ್ಮನಕಟ್ಟಿಯವರು, ಮತ್ತು ಚಂದ್ರೇಗೌಡರು ಉತ್ತರ ಕೊಡುತ್ತಾರೆ. ನಾನು ಉತ್ತರ ಕೊಡುವುದಕ್ಕೆ ಹೋಗುತ್ತಿಲ್ಲ. ತಮಗೆ ಗೊತ್ತು ಒಂದು -general principle of law-making, statute making, ಇಂತಹ ವಿವರಗಳು ಬರುವುದಕ್ಕೆ ಸಾಧ್ಯವಿಲ್ಲ. ಬಂದರೆ ತುಂಬಾ ತಪ್ಪಾಗುತ್ತದೆ, ತುಂಬಾ ತೊಂದರೆಯಾಗುತ್ತದೆ. ಎರಡನೆಯದು ಟೆಕ್ನಿಕಲ್ ಪಾಯಿಂಟ್. ಇದು ಕಾರ್ಪೊರೇಷನ್ ಕೌನ್ಸಿಲ್‌ಗೆ ಇರುವ ಅಧಿಕಾರ. ಅದನ್ನು ಈ ಕಾನೂನಿನಲ್ಲಿ ಹಾಕುವುದಕ್ಕೆ ಆಗುವುದಿಲ್ಲ. ಇದು ತಮಗೆ ಚೆನ್ನಾಗಿ ಗೊತ್ತು. ಏಕೆಂದರೆ ತಾವು ಕಾರ್ಪೊರೇಷನ್‌ನಲ್ಲಿ ಇದ್ದವರು. ಈ ವಿವರಗಳು ಎಲ್ಲಾ ಅಲ್ಲಿ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಪ್ರೊ: ಚಂದ್ರಶೇಖರ್ ಅವರು ಕ್ಷಮಿಸಬೇಕು. ನೀವು

ಒಂದು ಇಂಚು ಕೊಟ್ಟರೆ ಅವರು ಒಂದು ಅಡಿ ತೆಗೆದುಕೊಳ್ಳುತ್ತಾರೆ. ನಮಗಿಂತ ಅವರ ಕಷ್ಟ ಅವರಿಗೆ ಪಾಪ, ಚೆನ್ನಾಗಿ ಗೊತ್ತು. ನಗರಪಾಲಿಕೆ ಇಂಪ್ರೂವ್ ಆಗಬೇಕು, ಸ್ವಲ್ಪ ಶ್ರೀಮಂತವಾಗಬೇಕು, ಜಾಸ್ತಿ ಸರ್ಪ್ಲಸ್ ಮಾಡಬೇಕು ಎಂದು ಅನ್ನಿಸುತ್ತದೆ. ಅದರ ಬಗ್ಗೆ ಯೋಚನೆ ಮಾಡಿ ಎಂದು ನಾನು ಹೇಳಿದ್ದು. ಅದಾದನಂತರ ಇನ್ನು ಸೆಕ್ಷನ್ 108ರಲ್ಲಿ ಅದರಲ್ಲಿ ಇದನ್ನು ಇನ್ನೂ ಸ್ವಲ್ಪ ಇಂಪ್ರೂವ್ ಮಾಡಬಹುದು.

"Property tax shall be livied at such percentage, not being less than 0.3.% and not more than 0.6%."

ಎಂದು ಇದೆ. ಸ್ವಾಮಿ, ಬೆಂಗಳೂರಿನಲ್ಲಿ ಪಂಚತಾರಾ ಹೋಟೇಲ್‌ಗಳು, ಲಕ್ಸೂರಿಯಸ್ ಬಿಲ್ಡಿಂಗ್‌ಗಳು ಇವೆ. ಅಂತಹ ಕಡೆ, ಅಂತಹ ಕಟ್ಟಡಗಳಿಗೆ ಎಂಟು ಪರ್ಸೆಂಟ್‌ವರೆಗೆ ಹೋಗಬಹುದು. ಇದು ಪಾಯಿಂಟ್ 3 ಪರ್ಸೆಂಟ್ ಎಂದು ಇದೆಯಲ್ಲಾ - I do not think it is right. ಲಕ್ಸೂರಿಯಸ್ ಬಿಲ್ಡಿಂಗ್‌ಗಳಿಗೆ ಇನ್ನೂ ಜಾಸ್ತಿ ಹಾಕಿ, 8ವರೆಗೆ ಹಾಕಿ. ಆಮೇಲೆ ಸೆಕ್ಷನ್ 109ರಲ್ಲಿ ಡಿಪ್ರೀಸಿಯೇಷನ್ ಪ್ರಾವಿಷನ್‌ನ್ನು ನೀವು ಕೊಟ್ಟಿದ್ದೀರಿ. ನನಗೆ ಆತಂಕ ಏನು ಅಂದರೆ ಇದು ಡಿಸ್ಕ್ರಿಷನ್‌ಗೆ ಅವಕಾಶ ಆಗುತ್ತದೆಯೇ? ಎಷ್ಟು ವರ್ಷ ಆಯಿತು ಎಂದು ಯಾರು ಕಂಡುಹಿಡಿಯುವುದು? ಮನೆ ಕಟ್ಟಿದವನು ಹೇಳಿದ ಮಾತನ್ನು ನಾವು ನಂಬುತ್ತೇವೆ. ಅದನ್ನೂ ಕೂಡ ನಾವು ಯೋಚನೆ ಮಾಡಬೇಕು. ಎಷ್ಟು ಕಡಿಮೆಯಾಗುತ್ತದೆ ಅಷ್ಟು ಡಿಸ್ಕ್ರಿಷನ್ ಕೂಡ ಬಿಡಬೇಕು. ಸೆಕ್ಷನ್ 110 ಏನು ತಂದಿದ್ದೀರಿ - It is a very good amendment. ಈ ಸರ್ವಿಸ್ ಚಾರ್ಜಸ್ ಏನು ತಂದಿದ್ದೀರಿ, ಇದರ ಬಗ್ಗೆ ಬಹಳ ದಿವಸದಿಂದ ನಾವು ಹೇಳುತ್ತಿದ್ದೆವು. ಬೆಂಗಳೂರಿನಲ್ಲಿ ಅವರು ಟ್ಯಾಕ್ಸ್ ಕಟ್ಟುವುದಿಲ್ಲ ಮತ್ತು ಸರ್ವಿಸ್ ಚಾರ್ಜಸ್ ಕೊಡುವುದಿಲ್ಲ. ಅನೇಕ ಅನುದಾನರಹಿತ ವಿದ್ಯಾಸಂಸ್ಥೆಗಳು ಏನಿವೆ, ಯಾರು ಡೊನೇಷನ್ ಮೇಲೆ ಬದುಕುತ್ತಿದ್ದಾರೆ, ಅವರು ನಗರಪಾಲಿಕೆಯಿಂದ ಎಲ್ಲಾ ಲಾಭ ತೆಗೆದುಕೊಂಡರೂ ಏನನ್ನು ಕೂಡ ಕೊಡುತ್ತಿರಲಿಲ್ಲ. ಇದು ಒಳ್ಳೆಯದು. ನೀವು ಸರ್ವಿಸ್ ಚಾರ್ಜಸ್ ಏನು ಹಾಕಿದ್ದೀರಿ - It is a step in the right direction. ಆಮೇಲೆ ಸೆಕ್ಷನ್ 112(ಎ)ನಲ್ಲಿ ಅಸೆಸ್‌ಮೆಂಟ್ ಆಫ್ ಪ್ರಾಪರ್ಟಿ ಟ್ಯಾಕ್ಸ್‌ನಲ್ಲಿ ಪೆನಾಲ್ಟಿ ಕ್ಲಾಸ್ ಒಂದಿದೆ.

Penalty clause - "When making an assessment of property tax under sub-section (3) or (4), the Commissioner or the authorised officer may also direct the owner or occupier to pay in addition to the property tax assessed a penalty,-

(a) not exceeding fifty percent of the property tax assessed in the case of failure to submit a return; or

(b) not exceeding two times the amount of difference between the property tax assessed and the property tax paid along with his return in the case of knowingly submitting an incomplete or incorrect return".

ಬಹಳ ಜನ ಕೊಡುವಾಗ ಆತುರದಲ್ಲಿ "ಇನ್ ಕಂಪ್ಲೀಟ್ ರಿಟರ್ನ್" ಕೊಡುತ್ತಾರೆ. ನಿಮ್ಮ ಅಧಿಕಾರಿಗಳು, ಈ ರೀತಿ "ಇನ್ ಕಂಪ್ಲೀಟ್" ಆಗಿದೆ ಎಂದು ಭರ್ತಿ ಮಾಡಿಸುವುದಕ್ಕೆ ಹೋಗುವುದಿಲ್ಲ, ಬಂದರೆ ಸಾಕು ತೆಗೆದುಕೊಂಡು ಫೈಲ್ ಮಾಡುತ್ತಾರೆ. ಅಂತಹ ಸಮಯದಲ್ಲಿ ಬಹಳಷ್ಟು ಜನ ಮನೆಗಳನ್ನು ಕಟ್ಟಿರಬಹುದು. ಆದರೆ, ಅವರು ವಿದ್ಯಾವಂತರಲ್ಲ. ಅವರು ಯಾರದೋ ನೆರವಿನಿಂದ ಫಾರಂನ್ನು ಭರ್ತಿ ಮಾಡಿಕೊಂಡು ತರುತ್ತಾರೆ. ಅಥವಾ ಅವರೇ ಭರ್ತಿ ಮಾಡಿರುತ್ತಾರೆ. ಅದು "ಇನ್ ಕಂಪ್ಲೀಟ್" ಆದರೆ, you are levying a penalty of two times the amount of difference between the property the property tax assessed and the property tax paid. ಇದು ತುಂಬಾ ಹಾರ್ಷ್ ಎಂದು ನನಗನ್ನಿಸುತ್ತದೆ. ಅಂದರೆ ಡಲಿಬರೇಟ್ ಎಂಬುದು ಇಲ್ಲ. ಇನ್ ಕಂಪ್ಲೀಟ್ ಆಗಿರಬಹುದು. ಯಾವುದೋ ಒಂದು ಜೋನ್ ಬರೆಯುವುದನ್ನು ಬಿಟ್ಟಿರಬಹುದು. ಅಥವಾ ಏರಿಯಾ ಬರೆಯುವುದನ್ನು ಬಿಟ್ಟಿರಬಹುದು. ಇದಕ್ಕೆ ಈ ಪನಿಷ್‌ಮೆಂಟ್ ಕೊಡುತ್ತಾ ಇರುವುದು ಬಹಳ ಹಾರ್ಷ್ ಎಂದು ನನ್ನ ವೈಯಕ್ತಿಕ ಅನಿಸಿಕೆ. ಸೆಕ್ಷನ್ 112(ಸಿ) ಬಗ್ಗೆ, it is a good move. Levy of penalty on unlawful building. ಬೆಂಗಳೂರಿನಲ್ಲಿ ಬಿಲ್ಡಿಂಗ್ ಕಟ್ಟಿಬಿಡುತ್ತಾರೆ. ಆದರೆ, ಲೈಸೆನ್ಸ್ ತೆಗೆದುಕೊಳ್ಳುವುದಿಲ್ಲ. ಲೈಸೆನ್ಸ್ ತೆಗೆದುಕೊಳ್ಳದೇ ಬಿಲ್ಡಿಂಗ್ ಕಟ್ಟುವುದಕ್ಕೆ ನಮ್ಮ ಕಾರ್ಪೊರೇಷನ್ ಅಧಿಕಾರಿಗಳು ಬಿಟ್ಟು ಬಿಡುತ್ತಾರೆ. ನೀವು ಪಿ-1 ನೋಟೀಸ್ ಮತ್ತು ಸಿ-1 ನೋಟೀಸ್ ಕೊಡುತ್ತೀರಿ. ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಳ್ಳುತ್ತಾರೆ. There ends the matter. ಅವರು, ಆ ಆಸ್ತಿಯನ್ನು ಅನುಭವಿಸುತ್ತಲೇ ಹೋಗುತ್ತಾರೆ. ಕಾರ್ಪೊರೇಷನ್‌ಗೆ ಏನು ಕೊಡುವುದಕ್ಕೂ ಬರುವುದಿಲ್ಲ. ಕಾರ್ಪೊರೇಷನ್ ಟ್ಯಾಕ್ಸ್ ಕೊಡುವುದಿಲ್ಲ. ಆದರೆ, ಕಾರ್ಪೊರೇಷನ್‌ರವರನ್ನು ಅವರು ನೋಡಿಕೊಳ್ಳುತ್ತಿರುತ್ತಾರೆ. ಅದನ್ನು ತೆಗೆದುಹಾಕಬೇಕೆಂದು ಇವತ್ತೇನು ಮಾಡಿದ್ದೀರಿ, levy of penalty on unlawful building, it is a right move. ಎಂದು ಹೇಳುತ್ತಾ, ಒಟ್ಟಿನಲ್ಲಿ ಇವತ್ತೇನು ಶಾಸನ ತಂದಿದ್ದೀರಿ, ಅದರ ಉದ್ದೇಶ ನಾನು ಹೇಳಿದ ಹಾಗೆ ನಾಗರೀಕರಿಗೆ ಹಿತವಾಗುವಂತಾದ್ದು, ನಾಗರೀಕರು ಸ್ವಂತ ಆಸ್ತಿ ತೆರಿಗೆಯನ್ನು ಕಂಡುಹಿಡಿಯುವ ಉದ್ದೇಶದ ಮೇಲೆ ನೀವು ತಂದಿದ್ದೀರಿ. ಅದರ ಜೊತೆಜೊತೆಗೆ ನೀವು ಎಂಟು ಒಳ್ಳೆಯದನ್ನು ಮಾಡುತ್ತಾ ಆ ಎರಡು ಅಥವಾ ನಾಲ್ಕು ಕೆಟ್ಟದ್ದು ಏನು ಮಾಡುತ್ತೀರಿ, ಅವರ ಮೇಲೆ ಹೊರೆ ಏನು ಹೊರಿಸುತ್ತಿದ್ದೀರಿ, ಅವರ ಮೇಲೆ ಭಯಂಕರ ಶಿಕ್ಷೆಯನ್ನು ಏನು ಕೊಡುವುದಕ್ಕೆ ಹೊರಟಿದ್ದೀರಿ, ಅದು ಯಾವುದೇ ರೀತಿ ನಾಗರೀಕರ ಪರ

ಇಲ್ಲವೆಂದು ಹೇಳುತ್ತಾ, ನಾನು ಸೂಚಿಸಿರುವ ಕೆಲವು ಸಂಗತಿಗಳನ್ನು ನೀವು ಮರುಪರಿಶೀಲಿಸಿ ನಾಗರೀಕರಿಗೆ ಅನುಕೂಲವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಮಸೂದೆಯ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಪ್ರಸ್ತಾಪ ಮಾಡಿದರು. ಇದು ಕಳೆದ ಅಧಿವೇಶನದಲ್ಲೇ ಬರಬೇಕಾಗಿತ್ತು. ಆದರೆ, ಈ ಮಸೂದೆಯನ್ನು ಮುಂದೂಡಿ ಈ ಅಧಿವೇಶನದಲ್ಲಿ ತಂದಿರತಕ್ಕಂಥಾದ್ದು. ಇದರಲ್ಲಿ ಪೌರ ನಿಗಮಗಳು ಮತ್ತು ಪುರಸಭೆಗಳು ಎರಡೂ ಸೇರಿಕೊಂಡು ಕೆಲವು ತಿದ್ದುಪಡಿಗಳನ್ನು ತಂದು, ಮಾಡಿರತಕ್ಕಂಥಾದ್ದು. ಈ ಹೊಸ ಸರ್ಕಾರ ಬಂದ ಮೇಲೆ ಸ್ವಯಂ ಆಸ್ತಿ ಘೋಷಣೆ ಎಂದು, ವೈಜ್ಞಾನಿಕವಾಗಿ ಟ್ಯಾಕ್ಸನ್ನು ಪಡೆಯುವಂತಾದ್ದಕ್ಕೆ ಮಾಡಬೇಕು, ಅವೈಜ್ಞಾನಿಕವಾಗಿರತಕ್ಕಂಥಾದ್ದನ್ನು ತಪ್ಪಿಸಬೇಕು ಮತ್ತು ಬಾಡಿಗೆ ಕೊಡುವ ಆಧಾರದ ಮೇಲೆ ತೆಗೆದುಕೊಳ್ಳುವಂಥ ಟ್ಯಾಕ್ಸ್ ಅಥವಾ ವಾರ್ಷಿಕ ದರದ ಬೆಲೆಯ ಮೇಲೆ ತೆಗೆದುಕೊಳ್ಳುವುದನ್ನು ತಪ್ಪಿಸಬೇಕು ಎಂದು ಒಂದು ವಿಧಾನವನ್ನು ಮಾಡಿ, ಕಾರ್ಪೊರೇಷನ್‌ನ್ನು ಟ್ರಯಲ್ ಮಾಡಿ ಇಲ್ಲಿ ಮಾಡಿರುವಂಥಾದ್ದು. ನಾನು ಕಾರ್ಪೊರೇಷನ್ ಟ್ಯಾಕ್ಸ್ ಪೇಯರ್. ಆಗ ನಾವೆಲ್ಲಾ ಘೋಷಣೆ ಮಾಡಿಕೊಂಡೆವು. ಕಾರ್ಪೊರೇಷನ್‌ನಲ್ಲಿ ಒಂದು ನಿರ್ಣಯ ಮಾಡಿ, ಈ ಟ್ಯಾಕ್ಸನ್ನು ಕಲೆಕ್ಟ್ ಮಾಡಿಕೊಳ್ಳುವಂತಾದ್ದು ಎಂದು ಮಾಡಿದರು. ನನಗೆ ತಿಳಿದ ಹಾಗೆ ಸುಮಾರು ಒಂದು ಲಕ್ಷ ಜನ ಇದನ್ನು ಘೋಷಣೆ ಮಾಡಿಕೊಂಡು ಇವತ್ತು ಟ್ಯಾಕ್ಸನ್ನು ಕಟ್ಟಿದ್ದಾರೆ. ಈ ಮಧ್ಯೆ ಹಿಂದೆ ಇದ್ದಂಥ ಮೇಯರ್ ಶ್ರೀ ನಾರಾಯಣಸ್ವಾಮಿ ಮತ್ತು ಕೆಲವು ಮಿತ್ರರು ಉಚ್ಚ ನ್ಯಾಯಾಲಯದಲ್ಲಿ ಅರ್ಜಿಹಾಕಿ, ಅಲ್ಲಿ ಚರ್ಚೆಯಾಗಿ ಅದು ವಾಪಸ್ ಬಂತು. ಕಾರಣ ಏನೆಂದರೆ, ಅವರು ಏನೂ ಕಡ್ಡಾಯ ಮಾಡಿಲ್ಲ. ಅವರು ಸ್ವಯಂ ಆಸ್ತಿ ಘೋಷಣೆ ಮಾಡಿಕೊಂಡು ಕಟ್ಟಿಕೊಳ್ಳಬಹುದು. ಅದೇನೂ ಮ್ಯಾನ್‌ಡೇಟರಿ ಅಲ್ಲ, ಅದೊಂದು ಆಪ್‌ಶನ್ ಎಂದು ತೀರ್ಮಾನ ತೆಗೆದುಕೊಂಡು ವಾಪಸ್ ಬಂತು. ಆದರೆ, ನಾವು ಕಟ್ಟಿದ್ದೇವೆ. ಈಗ ಸುಮಾರು ಒಂದು ಲಕ್ಷ ಜನ ಕಟ್ಟಿರುತ್ತೇವೆ, ನಮ್ಮ ಪರಿಸ್ಥಿತಿ ಏನು? ಇವತ್ತೇನು ನಾವು ಕ್ಯಾಪಿಟಲ್ ವ್ಯಾಲ್ಯೂ ಎಂದು ಆರ್ಗ್ಯು ಮಾಡಿದಿರಿ, ಮಾರ್ಕೆಟ್ ವ್ಯಾಲ್ಯೂ ಇದೆ, ಕ್ಯಾಪಿಟಲ್ ವ್ಯಾಲ್ಯೂ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಇವತ್ತು ಬಗೆಬಗೆಯ ಕ್ಯಾಪಿಟಲ್ ವ್ಯಾಲ್ಯೂ ಬೇಕಾದಷ್ಟು ಇದೆ. ಇವತ್ತು ಜಯನಗರ ಏರಿಯಾದಲ್ಲಿ ಒಂದು ಕ್ಯಾಪಿಟಲ್ ವ್ಯಾಲ್ಯೂ ಇದೆ ಅಥವಾ ಬಾಣಸವಾಡಿಯಲ್ಲಿ ಒಂದು ತರಹ ಇರಬಹುದು, ರಾಜಾಜಿನಗರದಲ್ಲಿ ಒಂದು ಕ್ಯಾಪಿಟಲ್ ವ್ಯಾಲ್ಯೂ ಇರಬಹುದು. ನಾನಾ ರೀತಿಯ ಕ್ಯಾಪಿಟಲ್ ವ್ಯಾಲ್ಯೂ ಇವತ್ತು ಇದೆ. ಅದೇ ರೀತಿ ಅವತ್ತು ಸ್ವಯಂ ಆಸ್ತಿ ಘೋಷಣೆ ಮಾಡಿದಂಥಾದ್ದು, ಎ.ಬಿ.ಸಿ.ಡಿ. ಜೋನಲ್ ಮೇಲೆ. ಆಗ ಎ ಬಿ ಸಿ ಡಿ ಜೋನ್ಸ್ ಮಾಡಿ 8 ರೂಪಾಯಿ ಕೊಡಿ, 15 ರೂಪಾಯಿ ಕೊಡಿ ಎಂದು ಮಾಡಿದರು.

ಯಾರಿಗೆ ಅದರಲ್ಲಿ ಅನುಕೂಲ ಪಡೆದು, ಜೋನಲ್ ವ್ಯಾಲ್ಯುಯೇಷನ್ ಇತ್ತು, ಅವತ್ತು ಅದನ್ನು ಕಟ್ಟಿಕೊಂಡು ಹೋಗಿದ್ದಾರೆ. ಇವತ್ತು ನಾವು ಬಾಡಿಗೆಗೆ 5 ರೂಪಾಯಿ ಕೊಟ್ಟಿರಬಹುದು, 6 ರೂಪಾಯಿ ಬರುತ್ತಾ ಇರಬಹುದು. 8 ರೂಪಾಯಿ ನೀವು ಹಾಕಿ ಕಮರ್ಷಿಯಲ್ ವ್ಯಾಲ್ಯೂ ಲಾಲ್‌ಬಾಗ್ ರೋಡಿಗೆ, ಮಹಾತ್ಮಗಾಂಧಿ ರೋಡಿಗೆ 20 ರೂಪಾಯಿ ಹಾಕಿ, ಕಮರ್ಷಿಯಲ್ ವ್ಯಾಲ್ಯೂ, ಅವನಿಗೆ 10 ರೂಪಾಯಿ ಬರುತ್ತಾ ಇದ್ದರೂ 20 ರೂಪಾಯಿ ಕಟ್ಟಬೇಕು. ಅಥವಾ 40 ರೂಪಾಯಿ ಬರುತ್ತಿದ್ದರೂ ಅವನು 20 ರೂಪಾಯಿ ಕಟ್ಟಿಕೊಂಡು ಅವನ ಆಸ್ತಿ ಘೋಷಣೆ ಮಾಡಿಕೊಂಡ. ಎಲ್ಲಿ ಅನುಕೂಲವಾಗಿದೆಯೋ, ಯಾವುದು ಡಿಕೆನ್‌ಸನ್ ರೋಡ್ ಇರಬಹುದು, ಕಮರ್ಷಿಯಲ್ ಸ್ಟ್ರೀಟ್ ಇರಬಹುದು, ಯಾರು ಜಾಸ್ತಿ ಬಾಡಿಗೆ ಪಡೆಯುತ್ತಿದ್ದರು, ಕಡಿಮೆ ಬರುತ್ತಾ ಇತ್ತು ಅವರೆಲ್ಲಾ ಡಿಕ್ಲರೇಷನ್ ಮಾಡಿಕೊಂಡರು. ಡಿಕ್ಲರೇಷನ್‌ಗೆ ಲಿಮಿಟ್ ಇಟ್ಟಿದ್ದರು. ಈ ರಸ್ತೆಗೆ ಈ ವ್ಯಾಲ್ಯು ಇವೊತ್ತು ಕಮರ್ಷಿಯಲ್ ಬಿಲ್ಡಿಂಗ್‌ಗೆ 20 ರೂಪಾಯಿ ಕೊಡಬೇಕು. 40 ರೂಪಾಯಿ ಬರುತ್ತಿದ್ದವನು 20 ರೂಪಾಯಿಗೆ ಘೋಷಣೆ ಮಾಡಿಕೊಳ್ಳುತ್ತಾನೆ. ಅವನಿಗೆ ಕಡಿಮೆಯಾಗಿ 20 ರೂಪಾಯಿ ಸೇವಿಂಗ್ಸ್ ಆಯಿತು. ಇವೊತ್ತು ಆ ಹಣ ಕಾರ್ಪೊರೇಷನ್‌ನಲ್ಲಿ ಇದೆ. ಇವತ್ತು ತಂದಿರುವ ಕ್ಯಾಪಿಟಲ್ ವ್ಯಾಲ್ಯು ಏನಿದೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದಕ್ಕೆ ಏನಾದರೊಂದು ಮಾನದಂಡ ಬೇಕು. ಯಾರೋ ಒಬ್ಬ ಅಸೆಸ್‌ಮೆಂಟ್ ಆಫೀಸರ್ ಅದಕ್ಕೆ ಹಾಕುವಂಥ ರೆಂಟ್ ಮೇಲೆ ಮತ್ತು ಅವರು ಹಾಕುವಂಥ ಅಸೆಸ್‌ಮೆಂಟ್ ನಾವು ಪ್ರಾಪರ್ಟಿ ಕಲೆಕ್ಷನ್ ಮಾಡಿಕೊಂಡು ಮುಂದೆ ನಾವು ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲವೆಂದು, ಇವತ್ತು ಕ್ಯಾಪಿಟಲ್ ವ್ಯಾಲ್ಯು ಎಂದು ಬೇಸ್ ಮಾಡಿಕೊಂಡು, ಆ ಆಧಾರದ ಮೇಲೆ ಮಾಡುವಂಥ ವಿಧಾನಕ್ಕೆ ವಿಧೇಯಕವನ್ನು ತಂದಿದ್ದಾರೆ. ಇದು ಪೌರ ನಿಗಮಗಳು ಮತ್ತು ಪುರಸಭೆಗಳು ಈ ಎರಡೂ ಸೇರಿ, ತಿದ್ದುಪಡಿಗಳನ್ನು ತಂದಿರತಕ್ಕಂತಾದ್ದು. ಈ ಕ್ಯಾಪಿಟಲ್ ವ್ಯಾಲ್ಯುನಲ್ಲಿ ಇವತ್ತೇನು ಮಾಡಿದ್ದಾರೆ ಪಾರದರ್ಶಕ ಎಂದು ಮಾನ್ಯಮಂತ್ರಿಗಳೇನು ತಿಳಿಸಿದರು, ಅದು ಪಾರದರ್ಶಕತೆ ಇರುವುದಿಲ್ಲ. ಇವೊತ್ತು ಬಿಲ್ಡಿಂಗ್ ವ್ಯಾಲ್ಯು ಅಥವಾ ಸೈಟ್ ವ್ಯಾಲ್ಯು ಏನಿದೆ ಎಂದು ನೋಡಬೇಕು. ಉದಾಹರಣೆಗೆ 55 ಲಕ್ಷ ಸೈಟ್ ವ್ಯಾಲ್ಯು ಇದೆ ಅದರಲ್ಲಿ 50 ಲಕ್ಷಕ್ಕೆ ಬಿಲ್ಡಿಂಗ್ ಕಟ್ಟಿರುತ್ತಾನೆ. 20 ಲಕ್ಷ ಆಯಿತು. ಈ 20 ಲಕ್ಷಕ್ಕೆ 0.3 ಎಂದು ಏನು ಶ್ರೀ ಚಂದ್ರೇಗೌಡರು ತಿಳಿಸಿದರು, ಇದು 0.3ಯಿಂದ 0.6 ಎಂದು ಹೇಳಿದರೆ, 20 ಲಕ್ಷವಾಯಿತು. ಅಂದರೆ, 6 ಸಾವಿರ ರೂಪಾಯಿ ಆಯಿತು. 6 ಸಾವಿರ ರೂಪಾಯಿ ರೆಂಟ್‌ಗೆ ಅವನು ಅಸೆಸ್ ಆಗುತ್ತಾನೆ. ಅವನ ಸ್ವಂತ ಮನೆಯಾದರೆ, ಅದು 3 ಸಾವಿರಕ್ಕೆ ಬರುತ್ತದೆ. ಅಂದರೆ, 50 ಪರ್ಸೆಂಟ್ ಡಿಪ್ರಿಸಿಯೇಷನ್ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಇದನ್ನು ಫಿಕ್ಸ್ ಮಾಡುವಂಥ ವ್ಯಾಲ್ಯುಯರ್ಸ್ ಯಾರು? ಅವರಿಗೆ ಯಾವಾಗ ಸಮಯ ಮತ್ತು ಗುರಿಯನ್ನು ನಿಗದಿ ಮಾಡುತ್ತೀರಿ. ಯಾರು ಬಂದು ಈ ಲಕ್ಷಾಂತರ ಮನೆಗಳ ವ್ಯಾಲ್ಯು ತೆಗೆದುಕೊಂಡು ಅಸೆಸ್ ಮಾಡುತ್ತಾರೆ? ಮತ್ತು ಇವತ್ತೇನು ಸ್ಟಾಂಪ್ಸ್ ಡ್ಯೂಟೀಸ್, ಸಬ್ ರಿಜಿಸ್ಟ್ರಾರ್ ವ್ಯಾಲ್ಯೂಸ್ ಇದೆ, ಈ ವ್ಯಾಲ್ಯು ತಿಳಿಸುವಂಥ

ಪ್ರಧಾನವೇನು? ಆ ಬಗ್ಗೆ ನಾವು ಘೋಷಣೆ ಮಾಡಿಕೊಳ್ಳುವುದು ಹೇಗೆ? ಇವಕ್ಕೆ ಏನು ನೀತಿನಿಯಮಗಳನ್ನು ರೂಪಿಸುತ್ತೀರಿ ಎಂಬ ಪ್ರಶ್ನೆ ಮುಖ್ಯವಾಗಿ ಆಗುವಂಥಾದ್ದು. ಇನ್ನೊಂದು ಪ್ರಶ್ನೆ, appurtenant to that house or building vacant land..... 30 ಪರ್ಸೆಂಟ್ 20 ಪರ್ಸೆಂಟ್ ಏನು ಏರಿಯಾ ಇರುತ್ತದೆ, ಆ ಏರಿಯಾಗೆ ನೀವೇನು ಚಾರ್ಜ್ ಮಾಡುತ್ತೀರಿ? Whether it is exempted from that enjoyment of the building? That should be there. ಅದು ಕ್ಲಿಯರ್ ಆಗಿಲ್ಲ. ಎಷ್ಟು ಅವಧಿಯವರೆಗೆ ತಾವು ಅದಕ್ಕೆ ವಿನಾಯಿತಿ(ಎಕ್ಸಂಪ್‌ಷನ್) ಕೊಡುತ್ತೀರಿ? ನನ್ನ ಮನೆಗೆ ಪಾರ್ಕಿಂಗ್ ಮತ್ತೊಂದು ವ್ಯವಸ್ಥೆಯನ್ನು ಇಟ್ಟುಕೊಂಡಿರುತ್ತೇನೆ. ಇವೊತ್ತು ತಾವು ಆ ವ್ಯಾಲ್ಯು ಏನು ಹಾಕಿ ನೀವು ನಮ್ಮ ಮೇಲೆ ಹಾಕುವುದಾದರೆ ಯಾರು ಇವೊತ್ತು ವಾಸ ಮಾಡುತ್ತಿದ್ದಾನೆ ಅಥವಾ ಯಾರಿಗೆ ಬಾಡಿಗೆಗೆ ಕೊಟ್ಟಿದ್ದಾನೆ ಅದನ್ನು ತಾವು ಯಾವ ರೀತಿ ಅಸ್ಸೆಸ್‌ಮೆಂಟ್ ಮಾಡುತ್ತೀರಿ ಎನ್ನುವ ಬಗ್ಗೆ ತೀರ್ಮಾನವಾಗಬೇಕು. ಜೊತೆಗೆ ಮಾನ್ಯ ಸುರೇಶ್‌ಕುಮಾರ್ ಅವರು ಸೆಸ್ ಬಗ್ಗೆ ಹೇಳಿದರು. ಇವತ್ತು ನಾವು ಮೋಟಾರು ವಾಹನಗಳಿಗೆ ಲೈಫ್ ಟೈಮ್ ಟ್ಯಾಕ್ಸ್ ಏನು ಕೊಟ್ಟು, ಬೇರೆ ಟ್ಯಾಕ್ಸ್‌ಗಳನ್ನು ಏನು ಕೊಡುತ್ತಿದ್ದೇವೆ ಅದಕ್ಕೆ ಮಾನ್ಯ ಸಚಿವರು ತಿಳಿಸಿದ ಹಾಗೆ 12 ಲಕ್ಷ ವಾಹನ ಅಥವಾ 15 ಲಕ್ಷ ವಾಹನ ಇದೆ ಇದಕ್ಕೆ ನಾವು 500 ರೂಪಾಯಿಗಳನ್ನು ವರ್ಷಕ್ಕೆ ಅವರವರ ಪುರಸಭೆಗಳು ಮತ್ತು ನಗರಸಭೆಗಳು ಮತ್ತು ಕಾರ್ಪೊರೇಷನ್‌ಗಳಲ್ಲಿ ಹಾಕುವಂಥಾದ್ದು ಏನಿದೆ, ಇದರಿಂದ ಮತ್ತಷ್ಟು ಹೊರೆಯಾಗುತ್ತದೆ. ಈಗಾಗಲೇ ನಾವು ಅವರಿಗೆ ಮತ್ತಷ್ಟು ಚಾರ್ಜ್ ಮಾಡಿದ್ದೇವೆ. ಹೊರೆ ಹಾಕಿದ್ದೇವೆ. ಅದರಲ್ಲಿ ಇದೂ ಕವರ್ ಆಗುತ್ತದೆ. ಈಗ ನಾವು ಏನು ಮೋಟಾರ್ ಟ್ಯಾಕ್ಸ್ ಕೊಡುತ್ತೇವೆ ಅದರಲ್ಲಿ ಇದೆಲ್ಲಾ ಕವರ್ ಆಗುತ್ತದೆ. ಮತ್ತೆ ಅವರಿಗೆ ಟ್ಯಾಕ್ಸ್ ಹಾಕುವಂತಹ ಪ್ರಧಾನ ತಪ್ಪಿಸಬೇಕು. ಮತ್ತು ತ್ಯಾಜ್ಯ ವಸ್ತುಗಳನ್ನು ನಾವು ಇವತ್ತು ಏನು ತೆಗೆದುಕೊಂಡು ಹೋಗುತ್ತಿದ್ದೇವೆ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಅದು ಬಹಳ ಜಾಸ್ತಿ. ತಾವು ಒಂದು ಸಾವಿರ ರೂಪಾಯಿಗಳವರೆಗೂ ಹಾಕಬಹುದು ಎಂದು ಏನು ಹೇಳುತ್ತಿದ್ದೀರಿ ಅದು ಬಹಳ ಜಾಸ್ತಿಯಾಗುತ್ತದೆ. ಇದು ಟ್ಯಾಕ್ಸ್‌ನಲ್ಲಿಯೇ ಕವರ್ ಆಗುತ್ತದೆ. ನಾವು ಕೊಡುವಂತಹ ಕ್ಯಾಪಿಟಲ್ ಟ್ಯಾಕ್ಸ್‌ನಲ್ಲಿಯೇ ಮತ್ತು ನಮ್ಮ ಹೌಸ್ ಟ್ಯಾಕ್ಸ್ ಎಂದು ಏನು ಕಲೆಕ್ಟ್ ಮಾಡುತ್ತಾರೆ ಅದರಲ್ಲಿಯೇ ಇದು ಕವರ್ ಆಗುತ್ತಿದೆ. ಆದ್ದರಿಂದ ಅದನ್ನು ತಪ್ಪಿಸಬೇಕು. The Government is all set to levy infrastructure fee to mop up several crores of rupees. ಇದನ್ನು ಮೋಪ್ ಅಪ್ ಮಾಡಬೇಕೆಂದು ಹೇಳಿ ಇವೊತ್ತು ಎಜ್ಯುಕೇಷನ್ ಸೆಸ್ ಎಂದು ಹೇಳಿ 10 ಪರ್ಸೆಂಟ್ ಹಾಕುವಂಥಾದ್ದು ಹೆಲ್ತ್ ಸೆಸ್ ಎಂದು ಹೇಳಿ 15 ಪರ್ಸೆಂಟ್ ಹಾಕುವಂಥಾದ್ದು, ಬೇಗ ರೀಸ್ ಸೆಸ್ ಎಂದು 5 ಪರ್ಸೆಂಟ್ ಹಾಕುವಂಥಾದ್ದು, ಲೈಬ್ರರಿ ಸೆಸ್ ಎಂದು 6 ಪರ್ಸೆಂಟ್ ಹಾಕುವಂಥಾದ್ದು, ಒಟ್ಟು ನಾವೀಗ 34 ಪರ್ಸೆಂಟ್ ಸೆಸ್ ಹಾಕುತ್ತಿದ್ದೀರಿ. ನಮ್ಮ ಮೇಲೆ ತಾವು ಇವತ್ತು ಏನು ಪ್ರಾಪರ್ಟಿ ಟ್ಯಾಕ್ಸ್ ಹಾಕುತ್ತಿದ್ದೀರಿ

ಅದರ ಜೊತೆಗೆ 34 ಪರ್ಸೆಂಟ್ ಸೆಸ್ ಹಾಕುತ್ತಿದ್ದೀರಿ. ಇವೊತ್ತು ತಾವು ಸೆಸ್ ಹಾಕುವಂಥಾದ್ದು, ನಾವು ಯಾವುದು ಕಾರು ಉಪಯೋಗ ಮಾಡುತ್ತೇವೆ, ವೆಹಿಕಲ್ಸ್ ಉಪಯೋಗ ಮಾಡುತ್ತೇವೆ ಅದಕ್ಕೆ ಸೆಸ್ ಹಾಕುವಂಥಾದ್ದು, in addition to that again infrastructure cess, ಅದರ ಜೊತೆಗೆ ಇವತ್ತು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಸೆಸ್ ಎಂದು ಹೇಳಿ ಅದನ್ನು ಒಂದು ಸಾವಿರ ರೂಪಾಯಿಗಳಿಗೆ ಮೀರದಂತೆ ಹಾಕುವಂತಾದ್ದು ಸರಿಯಲ್ಲ. ದೊಡ್ಡ ದೊಡ್ಡ ಹೋಟೆಲ್ಸ್ ಅವರಿಂದ ಬೇಕಾದಷ್ಟು ತ್ಯಾಜ್ಯ ವಸ್ತುಗಳು ಬರುತ್ತವೆ ಅದನ್ನು ತೆಗೆದುಕೊಂಡು ಹೋಗಿ ಡಿಸ್‌ಪೋಸಲ್ ಮಾಡಬೇಕು. ಮಾನ್ಯ ಸಚಿವರು ಆಸ್ಪತ್ರೆಗಳಿಂದ ಬರುವಂತಹ ತ್ಯಾಜ್ಯ ವಸ್ತುಗಳನ್ನು ತೆಗೆದುಕೊಂಡು ಹೋಗುವಂತಾದ್ದು ಎಂದು ಹೇಳಿದರು. ಅದು ಸುಮಾರು 2200 ಟನ್ ಕಲ್ಯಾಣ ಮಂಟಪದವರು ಅವರು ಹಣ ತೆಗೆದುಕೊಳ್ಳುತ್ತಿದ್ದಾರೆ ಅವರಿಗೆ ಲೆವಿ ಮಾಡಲಿ. ಅವರಿಗೆ ಬಿಡುವಂಥಾದ್ದು ಸರಿಯಲ್ಲ. ಪ್ರೈವೇಟ್ ಆಸ್ಪತ್ರೆಗಳು ಇವೆ. ಹಣ ಸಾರ್ವಜನಿಕರಿಂದ ವಸೂಲಿ ಮಾಡುವವರಿಗೆ ಟ್ಯಾಕ್ಸ್ ಹಾಕುವಂಥಾದ್ದು ಏನಿದೆ ಅದನ್ನು ಮಾಡಲಿ. ಇವತ್ತು ಟ್ಯಾಕ್ಸ್ ಪೇಯರ್‌ಗೆ ಸಾಕಷ್ಟು ಬರ್ಡನ್ ಆಗಿದೆ. ಮತ್ತೆ ಅವನಿಗೆ ಅಡಿಶನಲ್ ಬರ್ಡನ್ ಆಗುವಂಥಾದ್ದು ಬೇಡ ಎಂದು ನಾನು ಹೇಳುತ್ತಿದ್ದೇನೆ. ಮತ್ತೆ ಪೆನಾಲ್ಟಿ ಆನ್ ಅನ್‌ಲಾ ಫುಲ್ ಬಿಲ್ಡಿಂಗ್ಸ್, ಇದನ್ನು ಮಾನ್ಯ ಸುರೇಶ್‌ಕುಮಾರ್ ಅವರು ಸ್ವಾಗತ ಮಾಡಿದರು. ಆದರೆ ಇದು ಸಾಕಷ್ಟು ಗೊಂದಲಕ್ಕೆ ಮತ್ತು ಸಂಶಯಕ್ಕೆ ಎಡೆ ಕೊಡುವಂಥಾದ್ದು, ಇವತ್ತು ಅನ್ ಲಾ ಫುಲ್ ಆಗಿ ಕಟ್ಟಿಕೊಳ್ಳುವುದಕ್ಕೆ ಏಕೆ ಅವಕಾಶ ಕೊಡಬೇಕು? ನಾಳೆ ಎಲ್ಲಾ ಪ್ರಾರಂಭ ಮಾಡುತ್ತಾರೆ. ಅನ್ ಲಾಫುಲ್ ಆಗಿ ಲೈಸೆನ್ಸ್ ಇಲ್ಲದೇ ಇದ್ದರೂ ಕಟ್ಟಿಕೊಳ್ಳುತ್ತಾರೆ. ಹೇಗಿದ್ದರೂ ಕಾರ್ಪೊರೇಷನ್‌ನವರು ನಮ್ಮ ಮೇಲೆ ಒನ್ ಟು ಡಬ್ಬಲ್ ಟ್ಯಾಕ್ಸ್ ಹಾಕುತ್ತಾರೆ ನಾವು ಕೊಡೋಣ ಬಿಡಿ ಎಂದು ಹೇಳುತ್ತಾರೆ. ಇದಕ್ಕೆ ಏನು ಇದೆ ಅಂದರೆ ಡೀವಿಯೇಷನ್ ಕ್ಲಾಸ್ ತೆಗೆದುಕೊಂಡು ಬಂದು regularisation ಮಾಡಿಕೊಡುವಂತಹ ವ್ಯವಸ್ಥೆ ಇದರಿಂದ ಸಿಟಿಯಲ್ಲಿ ಆಗುತ್ತದೆ. ಇವತ್ತು ಸಾಮಾನ್ಯವಾಗಿ ಕಟ್ಟಿರತಕ್ಕಂಥ ಅನೇಕ ಬಿಲ್ಡಿಂಗ್ಸ್ ಡೀವಿಯೇಷನ್ಸ್ ಆಗಿವೆ. ಇದಕ್ಕೆ ಈ ಬಿಲ್‌ನಲ್ಲಿ ಏನು ಅವಕಾಶ ಮಾಡಿ ಕೊಡುತ್ತಾರೆ......

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅವುಗಳನ್ನು ನಾವು ರೆಗ್ಯುಲರೈಸ್ ಮಾಡುವುದಿಲ್ಲ. ಅವರ ಹೆಸರಿನಲ್ಲಿ ಓನರ್‌ಶಿಪ್ ಏನೂ ಕೊಡುವುದಿಲ್ಲ. ಅವರ ಸ್ವಂತ ಜಾಗದಲ್ಲಿ ಕಟ್ಟಡ ಏನು ಕಟ್ಟಿಕೊಂಡಿರುತ್ತಾರೆ ಪರ್ಮಿಷನ್ ತೆಗೆದುಕೊಳ್ಳದೆ ಮತ್ತು ಬಿಲ್ಡಿಂಗ್ ಬೈಲಾಸ್ ಅಪ್ಲೈ ಮಾಡದೆ ಏನು ಮನೆಕಟ್ಟಿಸಿಕೊಂಡಿರುತ್ತಾರೆ ಅಂತಹ ಕಟ್ಟಡಗಳಿಗೆ ಮಾತ್ರ violation of zonal Regulations or Building By Laws ಗೆ ಮಾತ್ರ ಇದು ಅಪ್ಲೈ ಆಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಅದಕ್ಕೆ ಬೇರೆ ಡೆಫನೆಷನ್ ಕೊಡಬೇಕಾಗುತ್ತದೆ. ಅವರು ಕಟ್ಟಿಕೊಂಡಿರುವ ಬಿಲ್ಡಿಂಗ್ ವೈಲೇಷನ್ ಮಾಡಿ

ಕಟ್ಟಿಕೊಂಡಿದ್ದರೆ ಅದು ಸೆಪರೇಟ್ ಇಶ್ಯೂ ಡಿಪಿಯೇಶನ್ ಆಫ್ ದಿ ಪ್ಲಾನ್ ಅದು ಸೆಪರೇಟ್. ಅಥವಾ ಅನ್ ಲಾ ಫುಲ್ ಆಗಿ ಟೋಟಲಿ ಕಟ್ಟಿಕೊಂಡಿರತಕ್ಕಂಥಾದ್ದು. ಅವನ ಸ್ವಂತ ಆಸ್ತಿಯಲ್ಲಿ ಅನ್ ಲಾ ಫುಲ್ ಆಗಿ ಟೋಟಲಿ ಕಟ್ಟಿಕೊಂಡಿರತಕ್ಕಂಥಾದ್ದಕ್ಕೆ ತಾವು ಸೆಪರೇಟ್ ಡೆಫನೇಶನ್ ಕೊಡಬೇಕು. ಅದು ಏನು ಎಂದು. ತಾವು ಕೊಡುತ್ತಿರುವ ಉತ್ತರ ಅದು ಸರಿ ಇಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅನ್ ಲಾ ಫುಲ್ ಬಿಲ್ಡಿಂಗ್ಸ್ ಏನು ಕಟ್ಟಿಕೊಂಡಿರುತ್ತಾರೆ ಅವರಿಗೆ ನಾವು ಪೆನಾಲ್ಟಿ ಹಾಕುತ್ತೇವೆ ಅಷ್ಟೇ. ಅವರಿಗೆ ನಾವು ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆ. ಅವರಿಗೆ ನೀರು, ರಸ್ತೆ, ಲೈಟ್ ಎಲ್ಲಾ ಕೊಟ್ಟ ಮೇಲೆ ಅವರಿಂದ ನಮ್ಮ ಸಂಸ್ಥೆಗಳಿಗೆ ಏನೂ ಹಣ ಬರುವುದಿಲ್ಲ. ಕೊನೆ ಪಕ್ಷ ಪೆನಾಲ್ಟಿಯಿಂದ ಆದರೂ ದುಡ್ಡು ಬರಲಿ. ಆಮೇಲೆ ತಾವು ರೆಗ್ಯುಲರೈಸ್ ಬಗ್ಗೆ ಏನು ಹೇಳುತ್ತಿದ್ದೀರಿ ಅದರ ಬಗ್ಗೆ ಪ್ರತ್ಯೇಕವಾದ ಕಾನೂನು ತರಬೇಕಾಗುತ್ತದೆ. ಅದನ್ನು ತರೋಣ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಕಾರ್ಪೊರೇಷನ್ ಬೈಲಾ ಪ್ರಕಾರ ಅವರು ಕಟ್ಟಡ ಕಟ್ಟದೆ ವೈಲೇಟ್ ಮಾಡಿ ಕಟ್ಟಿದ್ದರೆ ಅದಕ್ಕೆ ಏನು ಮಾಡುತ್ತೀರಿ. ಫೆನಾಲ್ಟಿ ಹಾಕಿ ರೆಗ್ಯುಲರೈಸ್ ಮಾಡುವುದು prescribed norms ಪ್ರಕಾರ ಕಟ್ಟಿದ್ದರೆ, ಅವರು ಅದನ್ನೂ ಮೀರಿ ಕಟ್ಟಿದ್ದರೆ ಏನು ಮಾಡುತ್ತೀರಿ? ಫ್ಲೋರ್ ಏರಿಯಾ ರೇಷಿಯೋ ಮೀರಿ ಕಟ್ಟಿದ್ದರೆ ಏನು ಮಾಡುತ್ತೀರಿ?

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೇ, ಅದಕ್ಕೆ ಇನ್ನೊಂದು ತಿದ್ದುಪಡಿ ಬಂದಿದೆ. ಈಗ ಇರುವುದು ಈಗಾಗಲೇ ಯಾರು ಮನೆಕಟ್ಟಿ ಆಕ್ಯುಪೆನ್ಸಿ ಮಾಡಿಕೊಂಡು ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡಿರುತ್ತಾರೋ ಅಂತಹವರಿಗೆ ಈ ಟ್ಯಾಕ್ಸ್‌ಡಬ್ಬಲ್ ಹಾಕುತ್ತಿರುವುದು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಇದರ ಹಿಂದೆ ದುರುದ್ದೇಶ ಇದೆ. ಅದಕ್ಕೆ ನಾನು ಹೇಳಿದೆ. ಅನ್ ಲಾ ಫುಲ್ ಡೆಫನೇಷನ್‌ನಲ್ಲಿ ಮಾನ್ಯ ಮಂತ್ರಿಗಳು ಕ್ಲಿಯರ್ ಮಾಡಬೇಕಾಗುತ್ತದೆ. ಅನ್ ಲಾ ಫುಲ್ ಆಗಿ ಅಲೋ ಮಾಡುವುದೇ ತಪ್ಪಾಗುತ್ತದೆ. How could you raise any unlawful building? He should obtain the licence, permission etc., ಅದು ಸಿಡಿಪಿ ಒ.ಡಿ.ಪಿ.ನಲ್ಲಿ ಕವರ್ ಆಗಬೇಕು ಇವೆಲ್ಲಾ ಬರುತ್ತವೆ. ಅದಕ್ಕೆ ಅವರು ಡೆಮಾಲಿಷನ್, ಮಾಡಬೇಕೇ ವಿನಹ ಅವರಿಗೆ ನಾವು ಫೆನಾಲ್ಟಿ ಹಾಕುತ್ತೇವೆ, ಅಂದರೆ ಅವರು ಫೆನಾಲ್ಟಿ ಹಾಕಿಸಿಕೊಂಡು ಇರುತ್ತಾನೆ. ಅಧಿಕಾರಿಗಳನ್ನು ಒಳಪಡಿಸಿಕೊಂಡು ಫೆನಾಲ್ಟಿ ಹಾಕಿಸಿಕೊಂಡು ಮುಂದುವರಿಯುತ್ತಾನೆ. ಅಲ್ಲಿಗೆ ಅದು ಡೆಮಾಲಿಷನ್ ಎಲ್ಲಿ ಬಂತು? ಆ ಕ್ಲಾಸ್ ಅನ್ನು ತಾವು ಸರಿ ಮಾಡಬೇಕು. ಮತ್ತೆ ಸರ್ವೀಸ್ ಚಾರ್ಜಸ್ ಏನು ಹಾಕುತ್ತಿದ್ದಾರೆ ಅದು ಎಜ್ಯುಕೇಷನ್ ಸಂಸ್ಥೆಗಳಿಗೆ ಏನು ಹಾಕುತ್ತಿದ್ದಾರೆ ಅದು ಸ್ವಾಗತಾರ್ಹ. ಅನೇಕ ವಿದ್ಯಾಸಂಸ್ಥೆಗಳು ಬಹಳಷ್ಟು ದುಡ್ಡು

ಮಾಡಿಕೊಳ್ಳುತ್ತಿದ್ದಾರೆ. ಅವರು ಡೊನೇಷನ್ಸ್ ಕಲೆಕ್ಟ್ ಮಾಡಿಕೊಂಡು ಚೆನ್ನಾಗಿದ್ದಾರೆ. ಅವರಿಗೆ ನಾವು ಸರ್ಫೇಸ್ ಚಾರ್ಜಸ್ ಬರೀ ನಾಮಿನಲ್ ಆಗಿ ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಯಾವುದೋ ಕನ್ನಡ ಸ್ಕೂಲ್ಸ್, ಉರ್ದುಸ್ಕೂಲ್ಸ್ ನಮ್ಮ ಸರ್ಕಾರಿ ಸ್ಕೂಲ್ಸ್ ಇಂಥಾದ್ದಕ್ಕೆ ಸರ್ಫೇಸ್ ಚಾರ್ಜಸ್ ಬೇಡ. ಆದರೆ ಬೇರೆ ವಿದ್ಯಾ ಸಂಸ್ಥೆಗಳಿಗೆ ನಾಮಿನಲ್ ಚಾರ್ಜಸ್ ಮಾಡಿದರೆ ಆಗುವುದಿಲ್ಲ. ಅವರು ಚೆನ್ನಾಗಿದ್ದಾರೆ. ಅವರಿಗೆ ನಾವು ಸರ್ಫೇಸ್ ಚಾರ್ಜಸ್ ಹಾಕಿದರೆ ಕೋಟ್ಯಾಂತರ ರೂಪಾಯಿಗಳು ಬರುತ್ತದೆ. ಅದಕೋಸ್ಕರ ಇದನ್ನು ನಾವು ಸರಿ ಮಾಡಿಕೊಂಡು ಮಾಡಬೇಕು. ಅವರು ಲಕ್ಷಾಂತರ ರೂಪಾಯಿಗಳ ಡೊನೇಷನ್ಸ್ ಅನ್ನು ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ ಹೆಸರು ಹೇಳಿಕೊಂಡು ಗ್ರಾಬ್ ಮಾಡುತ್ತಿದ್ದಾರೆ. ಅಂತಹವರಿಗೆ ಜಾಸ್ತಿ ಸರ್ಫೇಸ್ ಚಾರ್ಜ್ ಹಾಕಬೇಕು. ಅದು ಬಿಟ್ಟು ಯಾವುದೋ ತ್ಯಾಜ್ಯ ವಸ್ತುಗಳಿಗೆ ಚಾರ್ಜ್ ಮಾಡುತ್ತೇವೆ. ಯಾರೋ ಒಬ್ಬ ದ್ವಿಚಕ್ರ ವಾಹನ ಇಟ್ಟುಕೊಂಡಿರುವವರಿಗೆ ವಾಹನ ಸೆಸ್ ಹಾಕುತ್ತೇವೆ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕುತ್ತೇವೆ ಎನ್ನುವ ಬದಲು ಇಂತಹವರ ಮೇಲೆ ಸೆಸ್ ಹಾಕಿ ಅವರಿಂದ ವಸೂಲಿ ಮಾಡುವಂತಹ ಕೆಲಸವನ್ನು ಮಾಡಬೇಕು. ಮಾನ್ಯ ಸಚಿವರು ಇವತ್ತು ಏನು ಈ ಬಿಲ್ ಮಂಡಿಸಿದ್ದಾರೆ. ಅದರಲ್ಲಿ ಕೆಲವು ಅಂಶಗಳು ಮುಖ್ಯವಾಗಿ ಆಗಬೇಕು. ಇದರಿಂದ ಹೆಚ್ಚು ಸಂಪನ್ಮೂಲಗಳನ್ನು ಅವರು ರೂಢಿಸಿಕೊಂಡು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಕಾರ್ಪೊರೇಷನ್ಸ್, ನಗರಸಭೆಗಳು ಮತ್ತು ಪುರಸಭೆಗಳು ಇವೆ ಈ ಸಂಸ್ಥೆಗಳಿಗೆ ಹೆಚ್ಚು ಹಣ ಬರುವ ವ್ಯವಸ್ಥೆ ಆಗಬೇಕಾಗುತ್ತದೆ.

5.20 ಪಿಎಂ

ಇದರ ಜೊತೆಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಸ್ವಯಂ ಆಸ್ತಿ ಘೋಷಣೆಯಡಿ ತೆರಿಗೆ ಘೋಷಣೆ ಮಾಡಿಕೊಂಡಿರುವ ನಾವೆಲ್ಲ ಹಣ ತುಂಬಿ ಬಿಟ್ಟಿದ್ದೇವೆ. ಶ್ರೀ ಸುರೇಶಕುಮಾರ್ ಹೇಳಿದಂತೆ ಒಂದಕ್ಕೆ ಎರಡು ಪಟ್ಟು ನಾವು ಹಣ ತುಂಬಿದ್ದೇವೆ. ಕೆಲವರಿಗೆ ಲಾಭ ಆಗಿದೆ. ಹಾಗೆ ಲಕ್ಷ ಜನ ಆಸ್ತಿ ಘೋಷಣೆ ಮಾಡಿಕೊಂಡಿರುವವರಿಗೆ, ಇದಕ್ಕೇನು ಕ್ಯಾಪಿಟಲ್‌ವ್ಯಾಲ್ಯೂ ಮೇಲೆ ತಂದು ಅದಕ್ಕೆ ಯಾವರೀತಿ ಸೇರಿಸುವ ವ್ಯವಸ್ಥೆಯಾಗಬೇಕು ಅದನ್ನು ಸಚಿವರು ಈಗ ಕ್ಲಾರಿಫೈ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಹೆಚ್ಚಿನ ಹೊರೆಯನ್ನು ನಾಗರೀಕರಿಗೆ ಹೊರಿಸದೆ, ಇನ್‌ಫ್ರಾಸ್ಟ್ರಕ್ಚರ್ ಸೆಸ್ ಇರಬಹುದು, ತ್ಯಾಜ್ಯವಸ್ತುಗಳ ಮೇಲೆ ತೆರಿಗೆ ಕೊಡುವುದು ಇರಬಹುದು ಅವುಗಳಿಗೆ ಬದಲಿ ವ್ಯವಸ್ಥೆ ಮಾಡಬೇಕೆಂಬುದರ ಜೊತೆಗೆ ಇವತ್ತು ತೆರಿಗೆ ನಿರ್ವಹಣೆ ಬಗ್ಗೆ ಕ್ಯಾಪಿಟಲ್ ವ್ಯಾಲ್ಯೂಗೆ ಯಾವುದನ್ನು ಆಧಾರ ಮಾಡಿಕೊಳ್ಳಬೇಕು? ಅದನ್ನು ಸರಳೀಕರಣ ಮಾಡುವುದು ಬಹಳ ಉತ್ತಮವೆಂದು ತಿಳಿಸಿ ಇವತ್ತು ಏಪ್ರಿಲ್ ತಿಂಗಳಲ್ಲೇ ಕಟ್ಟಿದರೆ ಅವರಿಗೆ ರಿಯಾಯ್ತಿ ಐದು ಪರ್ಸೆಂಟ್ ಕೊಡುವುದು ಪೂರಾ ಮೊಬಲಗು ಕಟ್ಟಿದರೆ ರಿಬೇಟ್ ಆಫರ್ ಮಾಡುವುದು, ಅಥವಾ ಎಷ್ಟು ತಿಂಗಳಲ್ಲಿ ಅವನು ಹಣ ತುಂಬದೇ ಇದ್ದರೆ ಫೆನಾಲ್ಟಿ ಕ್ಲಾಜನ್ನು ಇಂಪೋಜ್ ಮಾಡಿ

ಯಾವ ಅಥಾರಿಟಿ ಮುಂದೆ ಅವನು ಹೋಗಬೇಕು ಇವುಗಳನ್ನೆಲ್ಲಾ ಸಾಕಷ್ಟು ಇದರಲ್ಲಿ ತಿಳಿಸಬೇಕಾಗುತ್ತದೆ. ಇದನ್ನು ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಅಧ್ಯಕ್ಷರೇ, ಇವತ್ತೇನು ಮುನಿಸಿಪಾಲಿಟಿಗಳು ಮತ್ತು ಮಹಾನಗರಪಾಲಿಕೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು, ಅವುಗಳು ತಮ್ಮದೇ ಆದ ಆರ್ಥಿಕ ಸಬಲತೆ ಕಾಣಿಸುವುದಕ್ಕೆ ಕೆಲವು ಮಾರ್ಪಾಟುಗಳನ್ನು ಮಾಡುವ ಕೆಲಸವನ್ನು ಸರ್ಕಾರ ತಂದಿರುವ ಈ ತಿದ್ದುಪಡಿ ಎನಿಸಿದೆ ನಿಜವಾಗಲೂ ರಾಜ್ಯದ ಪಟ್ಟಣಗಳಲ್ಲಿ ನಗರಗಳಲ್ಲಿ ವಾಸಿಸುವ ಪ್ರಜೆಗಳಿಗೆ ಕೆಲವು ಅತಿಮುಖ್ಯ ಅವಶ್ಯಕತೆಗಳನ್ನು ಒದಗಿಸುವುದಕ್ಕೆ ಅತ್ಯಂತ ಅವಶ್ಯಕವೆಂದು ಹೇಳುತ್ತಾ, ಏನು ಅನೇಕ ಸನ್ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ಅದೆಲ್ಲದರ ಬಗ್ಗೆ ನಾನು ಚರ್ಚೆ ಮಾಡಲು ಹೋಗದೆ ಅನೇಕ ನಗರಪಾಲಿಕೆಗಳಲ್ಲಿ ಜನಸಂಖ್ಯೆ ಯಾವರೀತಿ ಹೆಚ್ಚಳವಾಗುತ್ತಿದೆ ಎಂದು ತಾವು ಗಮನಿಸಿದ್ದೀರಿ ಎಂದು ಕಾಣುತ್ತದೆ. ವಿಶೇಷವಾಗಿ ಬೆಂಗಳೂರಿನಲ್ಲಿ 1991ರ ಮತ್ತು 2001ರ ಜನಗಣತಿಗೂ ನಾವು ಹೋಲಿಸಿದರೆ ಇಲ್ಲಿ 14 ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆ ಜಾಸ್ತಿಯಾಗಿದೆ. ಇವತ್ತೇನು ರಸ್ತೆಗಳಿವೆ, ಮೂಲಭೂತ ಸೌಕರ್ಯಗಳಿವೆ, ಇನ್‌ಫ್ರಾಸ್ಟ್ರಕ್ಚರನ್ನು ಒದಗಿಸಬೇಕಾಗಿದ್ದರೆ ಆ ಸಂಸ್ಥೆಗಳು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕಾದರೆ ಕೆಲವು ಆಮೂಲಾಗ್ರ ಬದಲಾವಣೆಗಳನ್ನು ಪಟ್ಟಣ ಮತ್ತು ನಗರಪ್ರದೇಶಗಳ ಅಭಿವೃದ್ಧಿಗೋಸ್ಕರವಾಗಿ ಮಾಡಬೇಕಾಗುತ್ತದೆ. ಸಣ್ಣಪುಟ್ಟ ಲೋಪಗಳನ್ನು ಆಯಾ ಮಹಾನಗರಪಾಲಿಕೆಗಳು ಪುರಸಭೆಗಳು ಅಲ್ಲಿಯ ವ್ಯವಸ್ಥೆಗನುಗುಣವಾಗಿ ಬದಲಾವಣೆ ಮಾಡಿಕೊಳ್ಳಲೂ ಈ ತಿದ್ದುಪಡಿಯಲ್ಲಿ ಅವಕಾಶವಿದೆಯೆಂಬುದು ನನಗೆ ಮನವರಿಕೆ ಆಗಿದೆ. ಆದರೂ ಇವತ್ತು ಅನೇಕ ವಿಚಾರಗಳನ್ನು, ವಿಶೇಷವಾಗಿ ಸೆಕ್ಷನ್ 103(ಬಿ)ಯಲ್ಲಿ ಇನ್ನಿತರೆಯಲ್ಲಿ ಸೂಚಿಸಿರುವ ಸಲಹೆಗಳೇನಿವೆ ಅವನ್ನು ನಾವು ಒಪ್ಪಿಕೊಳ್ಳುವ ಮೂಲಕ ಸೆಲ್ಫ್ ಅಸೆಸ್‌ಮೆಂಟ್ ಎಂದು ಏನಿದೆ ಅದರಲ್ಲಿ ಸಮಗ್ರ ಅವೇರ್‌ನೆಸ್ ತರುವುದಕ್ಕೆ, ನಗರ ಪಟ್ಟಣಗಳಲ್ಲಿ ವಾಸಿಸುವ ಜನರಿಗೆ ನನ್ನ ಆಸ್ತಿಗೆ ಇಂತಿಷ್ಟು ಕಂದಾಯ ಕಟ್ಟಬೇಕೆಂದು ಕಾನೂನಿನಲ್ಲಿ ಅವಕಾಶವಿದೆಯೆಂದು ಒಂದು ರೀತಿಯ ತಿಳಿವಳಿಕೆ ನೀಡುವ ಕೆಲಸವನ್ನು ಬೆಂಗಳೂರು ಮಹಾನಗರಪಾಲಿಕೆ ಶುರುಮಾಡಿದ ಪ್ರಯುಕ್ತ ಇವತ್ತು ರಾಜ್ಯದ ಮೂಲೆಮೂಲೆಗಳಲ್ಲೂ ಇಂತಹ ವ್ಯವಸ್ಥೆ ಆಗಲು ಸಹಕಾರಿಯಾಗಿದೆ. ಅದರಲ್ಲಿ ಎಷ್ಟು ಪರ್ಸೆಂಟ್ ಹೋಗುತ್ತದೆಂದು ಮಾನ್ಯ ಸದಸ್ಯರುಗಳಾದ ಬಚ್ಚೇಗೌಡರು ಹಾಗೂ ಸುರೇಶಕುಮಾರರು ಮಾತನಾಡಿದ್ದಾರೆ. ಅನೇಕ ಮಿತ್ರರ ಜೊತೆ ನಾನೂ ಸಹ ನಗರಪಾಲಿಕೆ ಸದಸ್ಯತ್ವದಿಂದ ಈ ವಿಧಾನಸಭೆಗೆ ಬಂದವರು. ಅಲ್ಲಿಯ ಆರ್ಥಿಕ ಅವ್ಯವಸ್ಥೆ ನೋಡಿದಾಗ ನಾವೇನಾದರೂ ಒಂದು ಮಾಡಬೇಕಾಗುತ್ತದೆ. ಸೆಲ್ಫ್ ಅಸೆಸ್‌ಮೆಂಟ್‌ನಲ್ಲಿ ಕೆಲವು ಜೋನ್‌ಗಳು ಮಾಡಿರುವುದು ಹಾಗೆ ಸ್ಲಾಬ್ ಪದ್ಧತಿ ಮಾಡುವಾಗ ಆತುರಾತುರವಾಗಿ ಕೆಲವನ್ನು ಮಾಡಿದ್ದಾರೆ. ಆದ್ದರಿಂದ ನಾನು ಮಾನ್ಯ ಸಚಿವರ ಗಮನಕ್ಕೆ ತರುವುದು, ಮಾನ್ಯ

ಬಚ್ಚೇಗೌಡರು ಇದನ್ನು ತುಂಬಾ ಚೆನ್ನಾಗಿ ಹೇಳಿ ಮಧ್ಯಕ್ಕೆ ನಿಲ್ಲಿಸಿದರು, ಯಾವ್ಯಾವ ರಸ್ತೆಗಳಿವೆ ಸರ್ಕಾರದ ರೇಟ್ ಏನಿದೆ ಇದನ್ನು ತರುವ ಸಂದರ್ಭದಲ್ಲಿ ಅನೇಕ ವರ್ಷಗಳಿಂದ ಹಳೇ ಕಟ್ಟಡಗಳಿವೆ, ಅವುಗಳಿಗೆ ನಿಗದಿಪಡಿಸುವ ಮಾನದಂಡ ಏನಿದೆ ಅದು ಸಂಬಂಧಪಟ್ಟ ನಗರಪಾಲಿಕೆಯ ಅಧಿಕಾರಿಗಳ ಕೈಯಲ್ಲಿರುತ್ತದೆ. ಅಂಥ ಕಡೆ ಸ್ವಲ್ಪ ಭ್ರಷ್ಟಾಚಾರ ಸಾಧ್ಯವಿದೆಯೆಂದು ಮಾನ್ಯ ಸುರೇಶಕುಮಾರ್‌ರವರು ಹೇಳಿದರು. ನಾವು ಸ್ಲಾಬ್‌ಸಿಸ್ಟಂ ಮಾಡುವಾಗ ಜೋನ್‌ಗಳನ್ನು ಮಾಡುವಾಗ ಯಾವುದೇ ಎರಡುಮೂರು ರಸ್ತೆಗಳನ್ನು ಎಲ್ಲಾ ಬಡಾವಣೆಗೆ ವಿಸ್ತಾರ ಮಾಡತಕ್ಕದ್ದಾಗಲಿ, ಯಾವ ಯಾವ ರಸ್ತೆಗಳು ಯಾವ ಪರಿಸ್ಥಿತಿಯಲ್ಲಿವೆ ಎಂದು ತಿಳಿದು ಅಲ್ಪಸ್ವಲ್ಪ ಬದಲಾವಣೆ ಮಾಡಲು ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತಿದ್ದೇನೆ. ಸಂಬಂಧಪಟ್ಟ ಹಿರಿಯ ಅಧಿಕಾರಿಗಳೇನಿದ್ದಾರೆ ಅವರಿಗೆ ಸೂಚನೆ ನೀಡಿ ಪಿಡಬ್ಲ್ಯುಡಿ ಕೋಡ್ ಅನ್ವಯ ಮಾಡುತ್ತೇವೆಂದು ಏನು ತಂದಿದ್ದೀರಿ ಇದು ಸೂಕ್ತವಾಗಿದೆ. ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ಮತ್ತೆ ಕೆಲವು ಘನ ತ್ಯಾಜ್ಯವಸ್ತುಗಳ ಸಂಗ್ರಹಣೆ ಮೇಲೆ ಟ್ಯಾಕ್ಸ್ ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಇವತ್ತು ಬೆಂಗಳೂರು ನಗರಕ್ಕಾಗಿ ಸರ್ಕಾರ ಗ್ಯಾರಂಟಿ ನೀಡಿ 600 ಕೋಟಿ ರೂಪಾಯಿ ಸಾಲ ತರುತ್ತಿದೆ. ಬೇರೆ ರಾಜ್ಯಗಳ ಹೆದ್ದಾರಿಗಳಿಗೆ ಹೋದರೆ ಒಂದು ರಸ್ತೆಯಲ್ಲಿ ಒಂದು ಸೇತುವೆ ಕಟ್ಟಿರುತ್ತಾರೆ, ಅಲ್ಲಿ ಟೋಲ್ ಸಂಗ್ರಹ ಮಾಡಿ ಮುಂದೆ ವಾಹನಗಳನ್ನು ಬಿಡುತ್ತಾರೆ. ಆದರೆ ಬೆಂಗಳೂರಿನಲ್ಲಿ ಅಂಥ ವ್ಯವಸ್ಥೆ ಮಾಡುವುದಕ್ಕಾಗಲೀ, ಹುಬ್ಬಳಿ-ಧಾರವಾಡ ಮೈಸೂರುಗಳಲ್ಲಿ ಅಂಥ ವ್ಯವಸ್ಥೆ ಮಾಡಲು ಆಗುವುದಿಲ್ಲ. ಬೆಂಗಳೂರು ನಗರವೊಂದರಲ್ಲೇ 14 ಲಕ್ಷ ವಾಹನಗಳಿವೆ ಎನ್ನಲಾಗಿದೆ. ಒಂದು ವರ್ಷಕ್ಕೆ ಇಲ್ಲ ಎಂದರೆ ಒಂದು ಲಕ್ಷ ವಾಹನಗಳ ರಿಜಿಸ್ಟ್ರೇಷನ್ ಆಗುತ್ತಿದೆ. ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ ಸಚಿವರು ಹೇಳಿದರು, ನೀವು ಯಾವುದನ್ನು ಬೇಕಾದರೂ ಬಿಟ್ಟುಬಿಡಬಹುದು ಎಂದು. ದ್ವಿಚಕ್ರವಾಹನಗಳು ಮತ್ತು ಆಟೋರಿಕ್ಷಾ ಮುಂತಾದ ಸಣ್ಣಪುಟ್ಟ ವಾಹನಗಳನ್ನು ಇದರಿಂದ ಹೊರತುಪಡಿಸುವುದು ಸಮಂಜಸ. ಯಾಕೆಂದರೆ ಪ್ರತಿಯೊಬ್ಬ ನಾಗರೀಕನೂ ದ್ವಿಚಕ್ರ ಉಪಯೋಗಿಸುತ್ತಾನೆ. ಬೇರೆ ವಾಹನಗಳಿಗೆ ನಾವು ಹಣ ನಿಗದಿಪಡಿಸುವುದು ಸೂಕ್ತ. ಹಾಗೆ ಮಾಡುವಾಗ ಆಯಾ ನಗರಪಾಲಿಕೆಗಳಿಗೇನು ತಾವು ಅಧಿಕಾರ ಕೊಟ್ಟಿದ್ದೀರಿ ಅಲ್ಲೂ ಕೂಡ ಚುನಾಯಿತ ಪ್ರತಿನಿಧಿಗಳಿರುವುದರಿಂದ ಈ ತರಹ ಮಾಡಿಕೊಳ್ಳಲು ಅವರಿಗೆ ಸಹಕಾರಿಯಾಗುತ್ತದೆ. ಇವತ್ತು ಘನತ್ಯಾಜ್ಯವಸ್ತು ನಿರ್ವಹಣೆಯಲ್ಲಿ ಸರಿಯಾದ ಮ್ಯಾನೇಜ್‌ಮೆಂಟಿಲ್ಲ, ಎಲ್ಲರ ಮೇಲೂ ನಾವು ಟ್ಯಾಕ್ಸ್ ಹಾಕುತ್ತೇವೆ, ನನಗೆ ತಿಳಿದ ಮಟ್ಟಿಗೆ ನಾನೂ ಕೂಡ ಕೆಲವಾರು ದಿವಸ ಸಚಿವನಾಗಿ ಕೆಲಸ ಮಾಡಿರುವುದರಿಂದ ಎಲ್ಲರ ಮೇಲೂ ಈ ಹೊರೆ ಬರುವುದಿಲ್ಲ. ಈ ಹೊರೆ ಬೀಳುವುದು ಕೇವಲ ಘನತ್ಯಾಜ್ಯವಸ್ತು, ಹೊಲಸುಪದಾರ್ಥ, ಕಸ, ಕಾರ್ಖಾನೆಗಳ ಕಲ್ಮಶವನ್ನು ಕಾರ್ಖಾನೆಗಳಲ್ಲದೆ ಹೋಟೆಲ್‌ಗಳು ಸಮುದಾಯ ಭವನಗಳು, ನರ್ಸಿಂಗ್ ಹೋಂಗಳು ಗಲೀಜನ್ನು ತೆಗೆದು ಎಲ್ಲೋ ಒಂದು ಕಡೆ ಬಿಸಾಕುತ್ತಾರೆ ಅದನ್ನು ಸರಿಯಾಗಿ ಸಾಗಿಸುವ ವ್ಯವಸ್ಥೆ ಆಗುತ್ತಿಲ್ಲ. ನಾನೇ ಸಚಿವನಾಗಿದ್ದಾಗ ಹೋಟೆಲ್ ಮ್ಯಾನೇಜ್‌ಮೆಂಟಿನವರನ್ನು

ಕರೆದು ಮಾತನಾಡಿ ನೀವೇ ಈ ಕಸ ಸಾಗಿಸಿ ಎಂದು ಹೇಳಿದಾಗ ಒಂದು ತಿಂಗಳು ಮಾಡಿದರು ಆಮೇಲೆ ಬಿಟ್ಟುಬಿಟ್ಟರು. ಮೂರು-ನಾಲ್ಕು ಹೋಟೆಲ್‌ಗಳಿಗೆ ಕನಿಷ್ಟ ಒಂದು ಲೋಡು ಗಲೀಜು ಸಿಗುತ್ತದೆ. ಅಂಥವರ ಮೇಲೆ ಇಂಥ ಹೊರೆ ಹಾಕುವುದರಿಂದ ಬೆಂಗಳೂರಿನ ಸಾಮಾನ್ಯರ ಮೇಲೆ ಈ ಹೊರೆ ಬೀಳುವುದಿಲ್ಲ. ಇದು ಬೀಳುವುದು ಯಾರು ಇಂಥವನ್ನು ಮಾರುತ್ತಿದ್ದಾರೆ, ರಸ್ತೆಗಳಲ್ಲಿ ಸುರಿಯುವುದನ್ನು ಸಾಗಿಸಲು ಅವರೇ ವ್ಯವಸ್ಥೆ ಮಾಡುವ ಸಾಧ್ಯತೆ ಇದೆ. ನಮ್ಮವರೂ ವಾಹನಗಳಲ್ಲಿ ಒಯ್ಯುವಾಗ ಎಲ್ಲವೂ ರಸ್ತೆಗೆ ಹಾರುತ್ತಿರುತ್ತದೆ. ಅದಕ್ಕೆ ಬೇಕಾದ ಸರಿಯಾದ ವಾಹನ, ಡಂಪಿಂಗ್ ಯಾರ್ಡ್‌ಗಳು, ಮತ್ತಿತರೆ ಏರ್ಪಾಡು ಮಾಡುವುದಕ್ಕೆ ಈ ಘನತ್ಯಾಜ್ಯವಸ್ತು ಪಿನಡಿ ಸಹಕಾರಿಯಾಗುತ್ತದೆ. ಇದರಿಂದ ಬೆಂಗಳೂರಿನ ಎಲ್ಲರೂ ಇದಕ್ಕೆ ಹಣ ಕಟ್ಟಲು ಬರುವುದಿಲ್ಲ ಕೆಲವೇ ಕೆಲವು ಮುಂದಿಗೆ ಇದು ಬರುತ್ತದೆ. ಆದ್ದರಿಂದ ಇದನ್ನು ಮಾಡುವಾಗ ಸಚಿವರು ದಯಮಾಡಿ ಸಾಮಾನ್ಯರಿಗೆ ಹೊರೆಯಾಗದಂತೆ ಯಾರು ಇವೊತ್ತು ಉಳ್ಳವರಿಂದ ಹಣ ಸಂಪಾದನೆ ಮಾಡುತ್ತಿದ್ದಾರೆ. ಅಂಥವರಿಂದ ನಗರದ ಅಭಿವೃದ್ಧಿಗಾಗಿ ಕೆಲವಾರು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳದೇ ಹೋದರೆ, ಬೆಂಗಳೂರು ನಗರ ಇರಬಹುದು, ಬೇರೆ ಬೇರೆ ನಗರ ಇರಬಹುದು. ಪಟ್ಟಣ ಪ್ರದೇಶಗಳು ಇವೊತ್ತು ಬೆಳವಣಿಗೆ ಆಗತಕ್ಕದ್ದಕ್ಕೆ ಸ್ವಲ್ಪ ಕಷ್ಟ ಆಗುತ್ತದೆ. ಆದ್ದರಿಂದ ಇದನ್ನು ತರತಕ್ಕ ಸಂದರ್ಭದಲ್ಲಿ ಯೋಚಿಸಬೇಕು. ಇವೊತ್ತು ನಮಗೆ ಗೊತ್ತಿದೆ. ಬೆಂಗಳೂರು ನಗರ ಇಷ್ಟೆಲ್ಲಾ ಬೆಳೆದಿದ್ದರೂ ಕೂಡ ಬಹುತೇಕ ಮೂಲ ಭೂತ ಸೌಕರ್ಯಗಳನ್ನು ಹಳೆ ನಗರಗಳಿಗೆ ಮಾಡಿಲ್ಲ. ಇನ್ನೂ ಕೂಡ ನಾವು ಸರಿಯಾದ ವ್ಯವಸ್ಥೆ ಮಾಡಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಆಗುತ್ತಿಲ್ಲ. 400 ಕೊಳಚೆ ಪ್ರದೇಶಗಳಿವೆ. ಇಂತಹ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾದರೆ ಮತ್ತೆ ಈ ರೀತಿಯಾಗಿ ಇರತಕ್ಕ ಹಳೆಯ ನಗರಗಳನ್ನು ಸರಿಯಾದ, ಸುವ್ಯವಸ್ಥಿತವಾಗಿ ಮಾಡಬೇಕಾದರೆ ನಾವು ಯಾವುದಾದರೂ ಒಂದು ರೂಪದಲ್ಲಿ ಬೇರೆ ಬೇರೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಬೇಕು. ಕಂಡು ಹಿಡಿದು ಇಂತಹವಕ್ಕೆ ಎಲ್ಲೋ ಒಂದು ಕಡೆ ಕಾನೂನು ಚೌಕಟ್ಟಿನಲ್ಲಿ ಸಾರ್ವಜನಿಕರಿಗೆ ಹೊರೆ ಆಗದ ಹಾಗೆ ಯಾರ್‍ಯಾರು ದೊಡ್ಡವರು, ಬಹುಮಹಡಿ ಕಟ್ಟಡಗಳನ್ನು ಕಟ್ಟಿರುತ್ತಾರೆ, ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳು ಮತ್ತು ಹೋಟೆಲ್‌ಗಳು ಇನ್ನೂ ಅನೇಕ ಸಂಸ್ಥೆಗಳಿಂದ ನಾವು ಇಂತಹದನ್ನು ಪಡೆಯುವುದಕ್ಕೆ ಸಹಕಾರಿ ಆಗುತ್ತದೆ. ದಯಮಾಡಿ ಇದನ್ನು ಮಾಡಿಕೊಳ್ಳತಕ್ಕದ್ದು ಸಮಂಜಸ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತೇನು ಮೂರು ಪರ್ಸೆಂಟ್ ಮತ್ತು ಆರು ಪರ್ಸೆಂಟ್ ಇದೆ. ಸನ್ಮಾನ್ಯ ಸುರೇಶ್ ಕುಮಾರ್ ಅವರು ಈ ಬಗ್ಗೆ ಈಗಾಗಲೇ ಹೇಳಿದ್ದಾರೆ. 3 ರಿಂದ 6 ಹಾಕಿದರೂ ಕೂಡ 8 ಮಾಡಿದರೂ ಕೂಡ ಮತ್ತು ಅದಕ್ಕಿಂತ ಹೆಚ್ಚು ಮಾಡತಕ್ಕ ಬಹುತೇಕ ಕಟ್ಟಡಗಳು ಇವೊತ್ತು ಬೆಂಗಳೂರಿನಂತಹ ದೊಡ್ಡ ನಗರದಲ್ಲಿವೆ. ನೀವು ಇದನ್ನು ಕೇವಲ 3 ರಿಂದ 6 ಮಾಡಿರತಕ್ಕದ್ದಾಗಲೀ, ಇದು ಮಾಡಿ ಎಂದಾಗ ಅಧಿಕಾರಿಗಳು ಎಲ್ಲೋ ಒಂದು ಕಡೆ ಅದು ಎಲ್ಲರಿಗೂ ಅನ್ವಯ ಆಗುತ್ತದೆ ಎಂದು ಹೇಳಿ ಬರೆ ಎಳೆಯತಕ್ಕದ್ದಕ್ಕೆ ಎಚ್ಚರಿಕೆಯನ್ನೂ ಕೂಡ ನಾವು

ವಹಿಸಬೇಕಾಗುತ್ತದೆ. ಇದನ್ನು ಮಾಡತಕ್ಕದ್ದು ಕೇವಲ ಯಾರಿಗೆ ಲಕ್ಷಾಂತರ ರೂಪಾಯಿ ಇವೊತ್ತು ವರಮಾನ ಇದೆ ಅವರಿಗೆ ಮಾಡಬೇಕು. ಬೆಳಿಗ್ಗೆ ನಾನು ನನ್ನ ಕ್ಷೇತ್ರದ ಕೆಲಸ ಮುಗಿಸಿ ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಆ ಕಟ್ಟಡದ ಮಾಲೀಕನಿಗೆ ನಾನು ಎಷ್ಟು ಬಾಡಿಗೆ ಬರುತ್ತದೆ ಎಂದು ಕೇಳಿದೆ. ಆತ ಹೇಳಿದ ಎಂಟು ಲಕ್ಷ ರೂಪಾಯಿ ಬಾಡಿಗೆ ಬರುತ್ತದೆ ಎಂದು ಹೇಳಿದ. ಆತ ಎಷ್ಟು ಟ್ಯಾಕ್ಸ್ ಕಟ್ಟುತ್ತಿದ್ದಾನೆಂದು ಹೇಳಿದರೆ ಈಗ ಸರಿಯಾಗಲಾರದು. ಇಷ್ಟೆಲ್ಲಾ ಮಾಡಿದರೂ ಕೂಡ ಜನರಿಗೆ ಆ ವ್ಯವಸ್ಥೆ ತಂದರೂ ಕೂಡ ಮಧ್ಯಮ ವರ್ಗದವರು ಯಾವುದೇ ಎಸ್ಕೇಪ್‌ನಲ್ಲಿಲ್ಲ. ಎಸ್ಕೇಪ್ ಪಡೆಯತಕ್ಕಂಥಹವರು ತುಂಬಾ ಬಹು ಜನ. ಯಾರ್‍ಯಾರು ದೊಡ್ಡವರು ಇದ್ದಾರೆ, ಇಂಥವರೆಲ್ಲಾ ಇಂಥಹ ಕಾನೂನು ಚೌಕಟ್ಟಿನಿಂದ ತಪ್ಪಿಸಿಕೊಳ್ಳಬಹುದು. ನಾನು ಏಕೆ ಆತ ಎಷ್ಟು ಟ್ಯಾಕ್ಸ್ ಕಟ್ಟುತ್ತಾನೆ, ಅವನು ನನ್ನ ಸ್ನೇಹಿತ ಎಂದಲ್ಲ, ನಾನು ಆ ನಂತರ ಕಮೀಷನರ್ ಅವರಿಗೆ ಹೇಳುತ್ತೇನೆ. ಇವೊತ್ತು ಪರಿಸ್ಥಿತಿ ಹೇಗಿದೆ ಎಂದರೆ ಇಷ್ಟೆಲ್ಲಾ ಸೆಲ್ಫ್ ಅಸೆಸ್‌ಮೆಂಟ್ ಪದ್ಧತಿ ಮಾಡಿದ್ದರೂ ಕೂಡ ಸಾರ್ವಜನಿಕವಾಗಿ ನಾವು ಏನೆಲ್ಲಾ ವಿಚಾರಗಳನ್ನು ಗಮನಕ್ಕೆ ತಂದಿದ್ದರೂ ಕೂಡ ಇನ್ನೂ ಕೆಲವು ಕಡೆ ಇಂತಹ ಎಸ್ಕೇಪ್‌ಗಳು ಮತ್ತೊಂದು ಮಗದೊಂದು ಆಗುವುದರಿಂದ ಈ ತರಹದ ಕಾನೂನಿನಿಂದ ನಾವು ಎಲ್ಲೋ ಒಂದು ಕಡೆ ಒಡಂಬಡಿಕೆಯನ್ನು ಮಾಡಬೇಕಾದಂತಹ ವ್ಯವಸ್ಥೆ ಇರುತ್ತದೆ. ತಾವು ಇನ್ನೊಂದು ವಿಚಾರ ಹೇಳಿರತಕ್ಕದ್ದು, ಬಿಲ್ಡಿಂಗ್ ಡಿಪ್ರಿಸಿಯೇಷನ್ ಮಾಡಿರತಕ್ಕದ್ದು. ಈಗಾಗಲೇ ಇದನ್ನು ಮಾಡಿದ್ದೀರಿ. ಈ ಸರ್ವೀಸ್ ಛಾರ್ಜಸ್ ಮಾಡುವ ಬಗ್ಗೆ ಮಾನ್ಯ ಬಚ್ಚೇಗೌಡರು ಹಾಗೂ ಮಾನ್ಯ ಸುರೇಶ್ ಕುಮಾರ್ ಅವರುಗಳು ಹೇಳಿದರು. ಸರ್ಕಾರಿ ಶಾಲೆಗಳು ಇವತ್ತು ಬೇರೆ ಬೇರೆ ಕನ್ನಡ ಶಾಲೆಗಳು ಏನು ಇವೆ, ಇಂತಹ ಶಾಲೆಗಳನ್ನು ಹೊರತುಪಡಿಸಿ ಉಳಿದಿರತಕ್ಕವರಿಗೆ ತಾವು ಮಾಡುವಾಗ ನಿಮಗೆ ಯಾವ ರೀತಿ ಇನ್‌ಫ್ಲೂಯೆನ್ಸ್ ಬರುತ್ತದೆ? ಅದನ್ನು ತಡೆದುಕೊಳ್ಳುವ ಶಕ್ತಿ ಇದ್ದರೆ ಇದನ್ನು ಮಾಡಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇವತ್ತು ಬಹುತೇಕ ಜನರು ಕಮರ್ಷಿಯಲ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದನ್ನು ಮಾಡುವುದರಿಂದ ಬರೀ ಸರ್ವೀಸ್ ಛಾರ್ಜಸ್‌ನಲ್ಲಿ ಹತ್ತಾರು ಕೋಟಿ ರೂಪಾಯಿಗಳನ್ನು ನಾವು ಸಂಗ್ರಹಣೆ ಮಾಡಬಹುದು. ಬರೀ ಸರ್ವೀಸ್ ಛಾರ್ಜ್ ಅಲ್ಲ ಅವರಿಗೆ ಆಕ್ಚುಯಲ್ ಟ್ಯಾಕ್ಸ್ ಹಾಕಿದರೂ ಏನೂ ತಪ್ಪಿಲ್ಲ. ಅವರು ತಿಂಗಳಿಗೆ 500 ರೂಪಾಯಿ ಫೀಸ್ ತೆಗೆದುಕೊಳ್ಳುತ್ತಾರೆ. 800 ರೂಪಾಯಿ ಫೀಸ್ ತೆಗೆದುಕೊಳ್ಳುತ್ತಾರೆ. ಇಂಥವರಿಗೆ ನೀವು ಎಷ್ಟು ಪಟ್ಟು ಹಾಕಿದರೂ ಅದಕ್ಕೆ ಅಡ್ಡಿ ಬರುವುದಿಲ್ಲ. ಅದನ್ನು ಮಾಡತಕ್ಕದ್ದು ಸಮಂಜಸ. ಇವೊತ್ತು ಈ ಬಿಲ್ಡಿಂಗ್‌ಗಳಿಗೆ ಟ್ಯಾಕ್ಸ್ ಹಾಕುತ್ತಿದ್ದೀರಿ. ಅನ್‌ಆಥರೈಸ್ಡ್ ಮತ್ತೆ ಡೀವಿಯೇಷನ್ ಇರತಕ್ಕದ್ದಕ್ಕೆ ತಮ್ಮ ಭಾವನೆ ಏನು ಎಂದರೆ ನಾವು ಕೆಲವರಿಗೆ ಇವತ್ತು ಫೆನಾಲ್ಟಿ ಹಾಕುತ್ತಿದ್ದೇವೆ. ಫೆನಾಲ್ಟಿ ಹಾಕುವುದರಿಂದ ನಮಗೆ ಡಬಲ್ ಛಾರ್ಜ್ ಆಗುತ್ತದೆ. ಹಣ ಬರುತ್ತದೆ ಎಂಬ ಅಭಿಪ್ರಾಯ. ಇದರ ಜೊತೆಗೆ ಇದನ್ನು ಮಾಡುವಾಗ ಈ ಕಾನೂನು ಮಾಡುವಾಗ ಸ್ವಲ್ಪ ದಯಮಾಡಿ ಯೋಚನೆ ಮಾಡಬೇಕು. ಈ ಕಾನೂನನ್ನು

ಮಾಡುವುದರಿಂದ ಪೆನಾಲ್ಟಿ ಹಾಕುವುದರಿಂದ ಎಲ್ಲೋ ಒಂದು ಕಡೆ ಆದರೂ ಕೂಡ ಪೆನಾಲ್ಟಿ ಹಾಕಬೇಕಾಗುತ್ತದೆ. ಇದರ ಅವಶ್ಯಕತೆ ಇದೆ. ಇದರ ಜೊತೆಗೆ ಈಗಾಗಲೇ ಅನ್‌ಆಥರೈಸ್ಡ್ ಮತ್ತು ಡೀವಿಯೇಷನ್ ಇರತಕ್ಕಂಥಹ ನೂರಾರು ಕಡತಗಳು ಎಲ್ಲಾ ಮಹಾ ನಗರಪಾಲಿಕೆಗಳಲ್ಲೂ ಕೂಡ ಇದೆ. ಈ ತಿದ್ದುಪಡಿಯನ್ನು ಕೂಡ ಸಾಧ್ಯವಾದರೆ ಈ ಅಧಿವೇಶನದಲ್ಲಿ ತಂದು ಮಾಡುವುದರಿಂದ ಆಯಾಯ ನಗರಪಾಲಿಕೆಗಳಿಗೆ ಹಣ ಬರುತ್ತದೆ. ಇದನ್ನು ಮಾಡುವಾಗ ನಾವು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದು ಇದೇ ರೀತಿ ಬೆಳೆದುಕೊಂಡು ಹೋದರೆ ಒಂದು ಬಿಳಿ ಆನೆ ಆಗಿ ಇಡೀ ನಗರದ ಸೌಂದರ್ಯ ಹಾಳಾಗುತ್ತದೆ. ಇದಕ್ಕೆ ಒಂದು ಕಟಾಫ್ ಡೇಟ್‌ನ್ನು ಕೊಟ್ಟು ಇನ್ನು ಮುಂದೆ ಈ ರೀತಿ ಯಾವುದಾದರೂ ಅನ್‌ಆಥರೈಸ್ಡ್ ಇರಬಹುದು ಡೀವಿಯೇಷನ್ ಇರಬಹುದು ಇಂಥಹವು ಆಗದ ಹಾಗೆ ನೋಡಿಕೊಳ್ಳಬೇಕು. ನೋಡಿಕೊಳ್ಳತಕ್ಕದ್ದು ಬೆಂಗಳೂರಿನ ಹಾಗೂ ಇನ್ನಿತರ ಮಹಾ ನಗರಪಾಲಿಕೆಗಳ ಆದ್ಯ ಕರ್ತವ್ಯ. ದಯಮಾಡಿ ಈಗಾಗಲೇ ಆಗಿ ಎಲ್ಲಾ ತರಹದ ಸವಲತ್ತುಗಳನ್ನು ಪಡೆದು ಅವರು ಟ್ಯಾಕ್ಸನ್ನು ಕಟ್ಟದೇ ಅವರು ಎಲ್ಲಾ ಸೌಕರ್ಯಗಳನ್ನು ಉಪಯೋಗಿಸುತ್ತಿದ್ದಾರೆ, ಇಂಥವರಿಗೆ ಮಾಡಿ. ಜೊತೆಗೆ ಅನ್‌ಆಥರೈಸ್ಡ್ ಇದ್ದು ಮತ್ತು ಡೀವಿಯೇಷನ್ ಇರತಕ್ಕ ಎಲ್ಲಾ ಬಿಲ್ಡಿಂಗ್‌ಗಳನ್ನು ಗುರುತು ಮಾಡಿ ಒಂದು ದಿನಾಂಕವನ್ನು ಗೊತ್ತುಪಡಿಸಿ. ಗೊತ್ತುಪಡಿಸಿದ ಮೇಲೆ ಅಲ್ಲಿಂದ ಮುಂದೆ ಆಗತಕ್ಕ ಯಾವುದೇ ಕಟ್ಟಡಗಳು ಇದ್ದರೂ ಕೂಡ ನಿರ್ದಾಕ್ಷಿಣ್ಯವಾಗಿ ಕಾನೂನು ಪ್ರಕಾರ ಒಡೆದು ಹಾಕುತ್ತೇವೆ ಎಂದು ಹೇಳದೇ ಹೋದರೆ ಬೆಂಗಳೂರು ನಗರದಲ್ಲಿ ಎಲ್ಲಾ ಕಡೆಯಲ್ಲೂ ಕೂಡ ಡೀವಿಯೇಷನ್ ಇದ್ದರೂ ಸಹ ಇದನ್ನು ಮಾಡಿ ಬಿಡುತ್ತಾರೆ. ಕಾನೂನು ಜಾರಿ ಇರುವುದಿಲ್ಲ ಎನ್ನುವ ಭಾವನೆ ಬರುತ್ತದೆ. ಇದರ ಬಗ್ಗೆ ತಾವು ತುಂಬಾ ಚಿಂತನೆ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ನಾನು ಕೆಲವು ಮಾರ್ಪಾಟು ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ವಿನಂತಿ ಮಾಡುವುದು ಇಷ್ಟೇ. ತಾವೇನು ಇವೆಲ್ಲವನ್ನೂ ಮಾಡಿದ್ದೀರಿ. ಈಗ ನಮ್ಮಲ್ಲಿರತಕ್ಕದ್ದು ಆನ್ಯುಯಲ್ ರೆಂಟಲ್ ವ್ಯಾಲ್ಯೂ ಮೇಲೆ ನಾವು ತೆಗೆದುಕೊಳ್ಳುವ ಬದಲಾಗಿ ಇವತ್ತು ಕ್ಯಾಪಿಟಲ್ ವ್ಯಾಲ್ಯೂ ಮೇಲೆ ತೆಗೆದುಕೊಳ್ಳಬೇಕೆಂದು ಇದ್ದೀರಿ, ಈ ಕ್ಯಾಪಿಟಲ್ ವ್ಯಾಲ್ಯೂ ಮೇಲೆ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಒಂದೇ ಒಂದು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಈ ಎಚ್ಚರಿಕೆ ಯಾವುದು ಎಂದರೆ ಜನಸಾಮಾನ್ಯರಿಗೆ ಆ ಅಧಿಕಾರಿಗಳಿಂದ ಮತ್ತು ಸಣ್ಣ ಪುಟ್ಟ ಸಿಬ್ಬಂದಿಯಿಂದ ಅಂದರೆ ರೆವಿನ್ಯೂ ಇನ್‌ಸ್ಪೆಕ್ಟರ್ ಟ್ಯಾಕ್ಸ್ ಇನ್‌ಸ್ಪೆಕ್ಟರ್, ಅಸೆಸರ್‌ಗಳು, ಎಆರ್‌ಓಗಳು, ಡಿಆರ್‌ಓಗಳು, ಆರ್‌ಓಗಳು ಇದ್ದಾರೆ. ಅವರಿಂದ ಆಗತಕ್ಕಂಥ ತೊಂದರೆ ಬಗ್ಗೆ ಕೂಡ ನಾವು ನಿಗಾ ವಹಿಸಬೇಕಾಗುತ್ತದೆ. ಇಂತಹ ಕೆಲವಾರು ಬದಲಾವಣೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಸುಮಾರು ವರ್ಷಗಳಿಂದ ಬೇರೂರಿಕೊಂಡಿರತಕ್ಕಂಥ ಆ ಕೆಲವು ಅಧಿಕಾರಿಗಳಿಗೆ ಏನು ಆಗುತ್ತದೆ ಎಂದರೆ ಒಂದುರ ರೀತಿಯ ಮುಜುಗರ ಆಗುತ್ತದೆ. ಈ ಮುಜುಗರವನ್ನು ನಿವಾರಣೆ ಮಾಡತಕ್ಕ ಸಂದರ್ಭದಲ್ಲಿ ಕಟ್ಟುನಿಟ್ಟಿನ ಕೆಲವು

ಕ್ರಮಗಳನ್ನು ಕೂಡ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುವುದಕ್ಕೆ ಸಹ ನಾವು ಹಿಂಜರಿಯಬಾರದು. ಈ ಕ್ರಮ ಮಾಡುವುದರಿಂದ ಅನುಕೂಲ ಆಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ 170 ಕೋಟಿ ರೂಪಾಯಿಗಳನ್ನು ಬರೇ ಸಂಬಳ ಸಾರಿಗೆಗಳಿಗೆ ಕೊಡಬೇಕಾಗಿದೆ. ನಮಗೆ ಬರತಕ್ಕ ಟ್ಯಾಕ್ಸ್ 180 ರಿಂದ 200 ಕೋಟಿ ರೂಪಾಯಿ. ಇದನ್ನು ಮಾಡುವುದರಿಂದ ಸ್ವಲ್ಪ ಟ್ಯಾಕ್ಸ್ ಜಾಸ್ತಿ ಬರಬಹುದು. ಈ ನಗರದ ಸೌಂದರ್ಯೀಕರಣಕ್ಕೆ, ಸರ್ವಾಂಗೀಣ ಅಭಿವೃದ್ಧಿಗೆ ಕೆಲವು ಮಾರ್ಪಾಡುಗಳನ್ನು ಕೆಲವೊಂದು ತಿದ್ದುಪಡಿಗಳನ್ನು ತರುತ್ತಿದ್ದೀರಿ, ಇದರಿಂದ ಜನ ಸಾಮಾನ್ಯರಿಗೆ, ಮಧ್ಯಮ ವರ್ಗದವರಿಗೆ, ಬಡವರಿಗೆ ತೊಂದರೆ ಆಗದ ಹಾಗೆ ನಿಗಾ ವಹಿಸತಕ್ಕದ್ದಕ್ಕೆ ಕೂಡ ಈ ಕಾನೂನಿನಲ್ಲಿ ಅವಕಾಶ ಇದೆ. ಇದನ್ನು ತಾವು ವ್ಯವಸ್ಥಿತವಾಗಿ ಗೈಡ್ ಮಾಡಿ ತಂದಿರತಕ್ಕ ಈ ತಿದ್ದುಪಡಿಗಳನ್ನು ಜಾರಿಗೆ ತರತಕ್ಕ ಸಂದರ್ಭದಲ್ಲಿ ಆಯಾಯ ನಗರಪಾಲಿಕೆಗಳು, ಮುನಿಸಿಪಾಲಿಟಿಗಳಿಗೆ ಒಂದು ಕಟ್ಟುನಿಟ್ಟಿನ ಸಂದೇಶವನ್ನು ಕೂಡ ಕೊಡಬೇಕಾಗುತ್ತದೆ. ಆ ಸಂದೇಶದ ಮುಖೇನ ಮಧ್ಯಮ ವರ್ಗದವರಿಗೆ ತೊಂದರೆ ಆಗದ ಹಾಗೆ ಮಾಡಿದರೆ ನಿಜವಾಗಿಯೂ ಕೂಡ ಇದೊಂದು ವ್ಯವಸ್ಥಿತವಾದ ತಿದ್ದುಪಡಿ ಆಗುತ್ತದೆ ಎಂಬುದು ನನ್ನ ಭಾವನೆ. ಇಷ್ಟು ಹೇಳಿ, ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ಒಂದು ಅಂಶವನ್ನು ಹೇಳುತ್ತೇನೆ. ವಿಶೇಷವಾಗಿ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿಯನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಸನ್ಮಾನ್ಯ ಕಾನೂನು ಮಂತ್ರಿಗಳು ಪ್ರತಿ ಒಂದು ಹೆಜ್ಜೆಯಲ್ಲೂ ಕೂಡ ಬೆಂಗಳೂರು ಮಹಾ ನಗರವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಅದರ ಉದಾಹರಣೆಗಳನ್ನು ಕೊಟ್ಟುಕೊಂಡು ಬಹಳ ಭವ್ಯವಾದಂತಹ ನಗರ, ಆ ದೃಷ್ಟಿಯನ್ನು ಇಟ್ಟುಕೊಂಡು, ಈ ವಿಚಾರಗಳನ್ನು ಮುಂದಿಡುತ್ತಿದ್ದರು. ಆದರೆ ಬೆಂಗಳೂರು ಮಹಾ ನಗರದ ಜೊತೆಯಲ್ಲಿಯೇ ಇನ್ನುಳಿದಂತಹ ನಗರಪಾಲಿಕೆಗಳ ಪರಿಸ್ಥಿತಿ ಏನು ಎನ್ನುವಂತಹ ಚಿಂತನೆ ಮಾಡಿಕೊಂಡು ಈ ಬಿಲ್‌ಗಳನ್ನು ಮಾಡಿಲ್ಲ ಎಂದು ನನಗೆ ಅನಿಸುತ್ತಿದೆ. ಇದರಲ್ಲಿ ವಿಶೇಷವಾಗಿ ಪ್ರಮುಖವಾದ ಒಂದು ಅಂಶ, ಇಡೀ ಇದರ ಸಾರ ಒಂದು ಸಿಸ್ಟಂನ ಬದಲಾವಣೆಗೆ ಹೋಗಿರುವಂತಹದು. ಅದು ಇಲ್ಲಿಯವರೆಗೆ ಇದ್ದಂತಹ ಯಾವ ಫಿಕ್ಸ್ಡ್ ರೆಂಟಿನ ಆಧಾರದ ಮೇಲೆ ಒಂದು ಕಂದಾಯವನ್ನು ನಿಶ್ಚಯ ಮಾಡುವಂತಹ ಪದ್ಧತಿ ಇತ್ತು. ಆಕ್ಚುಯಲ್ ರೆಂಟ್ ಆಧಾರದ ಮೇಲೆ ಕಂದಾಯ ನಿಗದಿ ಮಾಡುವಂತಹ ಪದ್ಧತಿ ಇವತ್ತಿನವರೆಗೆ ಇತ್ತು. ಅದನ್ನು ಹತ್ತು ಹಲವು ನ್ಯಾಯಾಲಯಗಳಲ್ಲಿ, ಅದು ರಾಜ್ಯದ ಉಚ್ಚ ನ್ಯಾಯಾಲಯದಿಂದ ಹಿಡಿದು ಸರ್ವೋಚ್ಚ ನ್ಯಾಯಾಲಯದವರೆಗೂ ಕೂಡ ನೂರಾರು ಕೇಸುಗಳು ಇದಕ್ಕೆ ಸಂಬಂಧಪಟ್ಟ ಹಾಗೆ ಇದ್ದಂತಹ ಒಂದು ವಿಚಾರವನ್ನು ತೆಗೆದು ಹಾಕಲಿಕ್ಕೋಸ್ಕರವಾಗಿ ಈ ರೆಂಟ್ ಆಕ್ಟನ್ನು ಸ್ಟಾಂಪ್ ಆಕ್ಟ್‌ನ ಅಡಿಯಲ್ಲಿ ಇದರಲ್ಲಿ ತರುವಂತಹ ವ್ಯವಸ್ಥೆ ಮಾಡಲಾಗಿದೆ. ಮಾಡುವಂತಹ ಸಂದರ್ಭದಲ್ಲಿ ಇದರಲ್ಲಿ ಪ್ರಮುಖವಾಗಿ ಪ್ರಕರಣ 2ನೇ ತಿದ್ದುಪಡಿಯಲ್ಲಿ,

1ನೇ ಅಂಶದಲ್ಲಿ 32ನೇ ಖಂಡವನ್ನು ಬಿಟ್ಟು ಬಿಡತಕ್ಕದ್ದು ಎಂದರು. ಅಂದರೆ ಈ ಖಂಡದಲ್ಲಿ ಪ್ರಮುಖವಾಗಿರುವ ಒಂದು ಅಂಶ ಎಂದರೆ 'ಪ್ರಾಪರ್ಟಿ ಏನು' ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಉದಾಹರಣೆಗೆ, ಒಂದು ಮನೆಯನ್ನು ಕಟ್ಟಿಲ್ಲ ಎಂದರೆ ಅದು ಭೂಮಿ ಅಥವಾ ನಿವೇಶನ. ಮನೆಯನ್ನು ಕಟ್ಟಿದ್ದರೆ ಮನೆ ಮತ್ತು ನಿವೇಶನ ಎರಡೂ ಸೇರಿ ಅದು ಪ್ರಾಪರ್ಟಿ ಆಗುತ್ತದೆ. ಆದರೆ ಇಲ್ಲಿ ಮನೆ ಮತ್ತು ನಿವೇಶನ ಎರಡೂ ಸೇರಿ ಪ್ರಾಪರ್ಟಿ ಆಗುವುದನ್ನು ಕೈಬಿಡುತ್ತಾ ಮನೆ ಬೇರೆ, ನಿವೇಶನ ಬೇರೆ ಎನ್ನುವಂತಹ ವಿಚಾರಕ್ಕೋಸ್ಕರವಾಗಿ ಇದನ್ನು ಕೈಬಿಡುವಂತಹ ವ್ಯವಸ್ಥೆ ಆಗಿದೆ. ಏಕೆ? ಇಲ್ಲಿ ಯಾವುದೇ ಪ್ರಾಪರ್ಟಿಯನ್ನು ನಾವು ಅಸೆಸ್‌ಮೆಂಟ್ ಮಾಡುವಾಗಲೂ ಕೂಡ ನೀವು ಸ್ಟ್ಯಾಂಪ್ ಆ್ಯಕ್ಟ್‌ನ ಅಡಿಯಲ್ಲಿ ಪ್ರಾಪರ್ಟಿಯನ್ನು ಅಸೆಸ್‌ಮೆಂಟ್ ಮಾಡುವಂತಹ ಸಂದರ್ಭದಲ್ಲೂ ಕೂಡ ನಿವೇಶನ ಮತ್ತು ಮನೆ ಎರಡನ್ನೂ ಕೂಡ ಸೇರಿಸಿ ಅದನ್ನು ಪ್ರಾಪರ್ಟಿ ಎಂದು ಮಾಡುತ್ತಾರೆ. ಹಾಗಾಗಿ ಇದನ್ನು ಕೈಬಿಡುವಂತಹ ಅವಶ್ಯಕತೆ ಇರಲಿಲ್ಲ ಎನ್ನುವಂತಹದ್ದು ನನ್ನ ಅಂಶ. ಎರಡನೆಯದಾಗಿ, ಸೆಕ್ಷನ್ 103(ಬಿ) ಪ್ರಕರಣದ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಸುರೇಶ ಕುಮಾರ್ ಪ್ರಸ್ತಾಪಿಸಿದ್ದಾರೆ. ಪ್ರತಿಯೊಂದು ನಗರಪಾಲಿಕೆ ಇರಬಹುದು, ಮುನಿಸಿಪಾಲಿಟಿ ಇರಬಹುದು, ವಾಹನಗಳಿಂದ ಸರ್ಕಾರ ಸಂಗ್ರಹಿಸುವ ಪ್ರತಿವರ್ಷ ತೆರಿಗೆ, ಅಥವಾ ಲೈಫ್ ಟ್ಯಾಕ್ಸ್ ಇರಬಹುದು. ಅದರಲ್ಲಿ ಒಂದು ಅಂಶವನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿದೆ. ಇದು ಫಾದರ್ ಜೇಕಬ್‌ರವರ ವರದಿಯಿಂದ ಹಿಡಿದು ವಾಸುದೇವ್‌ರವರ ವರದಿಯವರೆಗೂ ನಡೆದುಕೊಂಡು ಬಂದಿದ್ದು, ಶೇಕಡವಾರಿನಲ್ಲಿ ವ್ಯತ್ಯಾಸವಾಗಿರಬಹುದು, ಆದರೆ, ಒಟ್ಟಾರೆಯಾಗಿ ಇಡೀ ರಾಜ್ಯದಲ್ಲಿ ಎಲ್ಲಿಯೇ ವಾಹನವಿರಲಿ, ಆ ವಾಹನ ಎಲ್ಲಿಗೋ ಹೋಗಿ ಬರಬಹುದು. ಅಂತಹ ಸಂದರ್ಭದಲ್ಲಿ ಎಲ್ಲಿಯೇ ಸರ್ಕಾರ ತೆರಿಗೆ ವಿಧಿಸಿದರೂ ಆ ಪ್ರದೇಶದಲ್ಲಿ ಸಂಗ್ರಹವಾಗುವ ತೆರಿಗೆ ಏನಿದೆ, ಅದರ ಒಂದು ಅಂಶದಷ್ಟು ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ನೀಡುವ ವ್ಯವಸ್ಥೆ ಇದೆ. ಈ ರೀತಿ ಸರ್ಕಾರಕ್ಕೆ ಬಂದಂಥ ತೆರಿಗೆ ಹಣದಲ್ಲಿ ಒಂದು ಅಂಶದಷ್ಟು ಹಣವನ್ನು ಕೊಡುವುದರ ಜೊತೆಗೆ ಆಯಾ ಪ್ರದೇಶದಲ್ಲಿನ ವಾಹನಗಳ ಮೇಲೆ ಸರ್ಕಾರ ಐದು ನೂರು ರೂಪಾಯಿಗಳವರೆಗೆ ತೆರಿಗೆ ವಿಧಿಸಬಹುದು ಎನ್ನುವುದಾದರೆ, ಅದು ಸರಿಯಲ್ಲ, ಉದಾಹರಣೆಗೆ ಮೈಸೂರು ನಗರವನ್ನೇ ತೆಗೆದುಕೊಂಡಾಗ ಅಲ್ಲಿನ ದ್ವಿಚಕ್ರ, ತ್ರಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನಗಳಿಗೆ ಗರಿಷ್ಠ ಮಿತಿಯಲ್ಲಿ ಐದು ನೂರು ರೂಪಾಯಿಗಳ ತೆರಿಗೆ ವಿಧಿಸಿರಬಹುದು. ಇದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಆದರೆ, ಸರ್ಕಾರ ವಿಧಿಸುತ್ತಿರುವ ತೆರಿಗೆಯಲ್ಲಿನ ಒಂದಂಶದಷ್ಟು ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಒದಗಿಸುತ್ತಿರುವುದು ಸಾಕೇ ಹೊರತು ಈ ಅಂಶವನ್ನು ಕೈಬಿಡಬೇಕೆಂದು ಪ್ರಾರ್ಥಿಸುತ್ತೇನೆ. ಆಟೋರಿಕ್ಷಾಗೆ ತಿಂಗಳಿಗೆ ಐದು ನೂರು ರೂಪಾಯಿಗಳಂತೆ ತೆರಿಗೆ ವಿಧಿಸುತ್ತೀರಿ. ಆಗ 'ನಮಗೆ ವಿಧಿಸಿರುವ ತೆರಿಗೆ ಜಾಸ್ತಿಯಾಗಿರುವುದರಿಂದ, ಆಟೋರಿಕ್ಷಾ ಪ್ರಯಾಣ ದರವನ್ನೂ ಸಹ ಜಾಸ್ತಿ ಮಾಡಬೇಕು' ಎಂದು ತಕ್ಷಣದಲ್ಲಿಯೇ ಆಟೋರಿಕ್ಷಾ

ಸಂಘಟನೆಗಳವರು ಮುಷ್ಕರ ಹೂಡುತ್ತಾರೆ. ಇದರ ಅಂತಿಮ ಪರಿಣಾಮ ಜನಸಾಮಾನ್ಯರ ಮೇಲುಂಟಾಗುತ್ತದೆ. ಆದಕಾರಣ, ಆ ದೃಷ್ಟಿಯಿಂದ ಈ ವಿಚಾರವನ್ನು ಸರ್ಕಾರ ಕೈಬಿಡಬೇಕು. ಮೂರನೆಯದಾಗಿ, ನಗರಪಾಲಿಕೆ ಎಂದಾಕ್ಷಣ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಗೂ ತಿಳಿದಿರುವುದೇನೆಂದರೆ, ನಗರದ ಸ್ವಚ್ಛತೆ ಕಾಪಾಡುವ ಸಲುವಾಗಿ ಕಸ ಗುಡಿಸಿ ಒಂದೆಡೆ ಸಂಗ್ರಹವಾದ ಕಸ-ಕಡ್ಡಿಗಳನ್ನು ವಿಲೇವಾರಿ ಮಾಡುವುದು. ಈ ಕೆಲಸಗಳಿಗೋಸ್ಕರವೇ ಕಂದಾಯದ ಜೊತೆಯಲ್ಲಿ ಹೆಲ್ತ್ ಸೆಸ್‌ನ್ನೂ ನೀಡುತ್ತಿದ್ದೇವೆ. ಇದರ ಜೊತೆಯಲ್ಲಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಸೆಸ್ ಅನ್ನು ಯಾರ ಮೇಲೆ ವಿಧಿಸುತ್ತಿದ್ದೀರಿ? ಅದು ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ! ಇದಕ್ಕೆ ಯಾವುದೇ ಒಂದು ಗ್ರೂಪನ್ನು ಮಾಡಿಲ್ಲ ಹಾಗೂ ಇದನ್ನು ಯಾರು ಮಾಡಬೇಕು ಮತ್ತು ಯಾರು ಕೊಡಬೇಕೆಂಬ ವಿಚಾರವನ್ನೂ ಸಹ ತಿಳಿಸಿರುವುದಿಲ್ಲ. ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ. ಯಾರು ದೊಡ್ಡ ದೊಡ್ಡ ನರ್ಸಿಂಗ್ ಹೋಂಗಳನ್ನು, ಹೋಟೆಲ್‌ಗಳನ್ನು ಇಟ್ಟುಕೊಂಡಿರುತ್ತಾರೆ ಹಾಗೂ ಪ್ರತಿನಿತ್ಯವೂ ಲಾರಿಗಟ್ಟಳೆ ಎಲ್ಲಿ ಕಸ ಬರುತ್ತದೆ ಅಂತಹ ಪ್ರದೇಶಗಳಲ್ಲಿ ಸದರಿ ಸೆಸ್ ಅನ್ನು ವಿಧಿಸುವ ಕುರಿತು ನಿರ್ದಿಷ್ಟವಾದ ಕಾನೂನು ತರಬೇಕು. ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿ ಏರಿಯಾಗಳಲ್ಲಿ ಯಾರು ಲೈಸೆನ್ಸ್ ಹೊಂದಿರುತ್ತಾರೋ ಅಂತಹವರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ನ ತೆರಿಗೆ ಕೊಡಬೇಕೆನ್ನುವಂಥ ಪದ್ಧತಿ ಜಾರಿಗೆ ತಂದಾಗ ಅರ್ಥವಿರುತ್ತದೆ. ಈಗ ತಾವು ತಂದಿರುವಂಥ ಕಾನೂನಿನಲ್ಲಿ 'ಮನೆಗಳನ್ನು ಹೊಂದಿರುವಂಥ, ಆಸ್ತಿಯನ್ನು ಹೊಂದಿರುವಂಥ ಪ್ರತಿಯೊಬ್ಬ ವ್ಯಕ್ತಿ' ಎಂದು ಇದೆ. "The Corporation may in addition to property tax levied under Section 103, levy a Solid Waste Management cess at such rate not exceeding one thousand rupees per month as may be prescribed, on every owner or occupier of buildings or lands or both in the city, for the purpose of collection, transportation and disposal of solid waste and different rates may be prescribed in respect of different classes of lands or buildings or in different area." ಒಂದು ಸಣ್ಣ ಮನೆ ಹೊಂದಿರುವ ಒಬ್ಬ ವ್ಯಕ್ತಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳಷ್ಟು ತೆರಿಗೆ ವಿಧಿಸುತ್ತೀರಾ? ಮೈಸೂರಿನಲ್ಲಿ ಈ ಕಾನೂನು ಜಾರಿಗೆ ಬಂದಲ್ಲಿ 'ಕಂದಾಯ ಹೆಲ್ತ್ ಸೆಸ್ ಹಾಗೂ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಸೆಸ್, ಇಷ್ಟನ್ನೂ ನೀವೇ ಕಟ್ಟಿಕೊಂಡು, ಆ ಮನೆಗೆ ಬಾಡಿಗೆ ಎಷ್ಟು ಕೊಡಬೇಕೆಂದು ಹೇಳಿಬಿಡಿ ಅದನ್ನು ನಾವು ಕೊಡುತ್ತೇವೆ ಎಂದು ಅಲ್ಲಿನ ಶಾಸಕರುಗಳಾದ ನಾವೆಲ್ಲರೂ ಹೇಳಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ, ಆಕ್ಟ್ ತರುವ ಮುನ್ನ ಇದರ ಸಾಧಕ-ಬಾಧಕಗಳನ್ನೊಮ್ಮೆ ಪರಿಶೀಲಿಸುವ ಅವಶ್ಯಕತೆ ಇದೆ. ಬಾಡಿಗೆ ಕೊಟ್ಟಂಥವನು ತಿಂಗಳಿಗೆ ಒಂದು ಸಾವಿರ ರೂಪಾಯಿ ಹೆಲ್ತ್ ಸೆಸ್ ಜೊತೆಗೆ ಇನ್ನಿತರ ಸೆಸ್, ಟ್ಯಾಕ್ಸ್ ಎಲ್ಲಾ ಸೇರಿ ಶೇಕಡ 34ರಷ್ಟು ಸೆಸ್ ಕೊಡಬೇಕೆಂದರೆ ಆತನ ಪರಿಸ್ಥಿತಿ ಹೇಗಾಗಿರಬೇಡ? ವಿಷನ್

ಅಭಿವೃದ್ಧಿ ಬ್ಯಾಂಕ್‌ನಿಂದ ಹಾಗೂ ಇನ್ನಿತರ ಕಡೆಗಳಿಂದ ಸಾಲ ತಂದಿದ್ದೇವೆಂದು, ಸಾಲ ತೀರಿಸಲೆಂದು ಅದರ ಹೊರೆಯನ್ನು ಜನಸಾಮಾನ್ಯರ ಮೇಲೆ ಈ ರೀತಿ ಹೊರಿಸುವುದು ಬೇಡ. ಆದುದರಿಂದ ಯಾರು ಹೆಲ್ತ್ ಲೈಸೆನ್ಸ್ ಹೊಂದಿರುತ್ತಾರೆ, ಅವರ ಮೇಲೆ ನಿಗದಿತ ತೆರಿಗೆ ವಿಧಿಸುವಂಥ ವ್ಯವಸ್ಥೆಯಾಗಬೇಕೇ ಹೊರತು ಇಲ್ಲದಿದ್ದರೆ ವ್ಯವಸ್ಥೆಯನ್ನು ತೆಗೆದು ಹಾಕಬೇಕು. ಮತ್ತೊಂದು ಪ್ರಮುಖವಾದ ಅಂಶವನ್ನು ಸೆಕ್ಷನ್ 13(ಬಿ) (4)ರ ಕುರಿತು ಹೇಳುವುದಾದರೆ, ಈ ಮುಂಚೆ ಕಂದಾಯವನ್ನು ನಿಶ್ಚಯಿಸಿದ ಬಳಿಕ ಅವರ ಪರಿಶೀಲನೆಗಾಗಿ ಪರಿಶೀಲನಾ ಸಮಿತಿ ಅಥವಾ ಮೇಲ್ಮನವಿ ಪ್ರಾಧಿಕಾರ (ಅಪಲೇಟ್ ಟ್ರಿಬ್ಯೂನಲ್) ಇರುತ್ತಿತ್ತು. ನನಗೆ ಆಶ್ಚರ್ಯವಾಗುವುದೇನೆಂದರೆ, ಕಾನೂನಿನ ಕುರಿತು ತಾವು ಯೋಚಿಸುವುದಾದರೆ, ಯಾರು ಕಂದಾಯವನ್ನು ನಿಷ್ಕರ್ಷಿಸುತ್ತಾರೆ, ಅವರನ್ನು ಅಥಾರಿಟಿ ಎಂದು (ಕಮಿಷನರ್‌ರವರನ್ನು) ಎಂದು ಕರೆದಿದ್ದೀರಿ. ಆದರೆ, ಕಂದಾಯ ನಿಷ್ಕರ್ಷಿಸುವ ಯಾವ ಅಧಿಕಾರಿ ನಮಗೆ ನೋಟಿಸ್ ಕಳುಹಿಸಿರುತ್ತಾರೋ, ಅದು ಸಾಧಕವಲ್ಲ, ತಪ್ಪು ಎಂದು ನಾವು ಯಾರಲ್ಲಿಗೆ ಹೋಗಬೇಕು? ಪುನಃ ಅದೇ ಅಥಾರಿಟಿ ಮುಂದೆ ಅದೇ ವ್ಯಕ್ತಿಯ ಮುಂದೆ ಹೋಗುವಂಥ ವ್ಯವಸ್ಥೆ ಇಲ್ಲಿದೆ. ಆದಕಾರಣ, ಏಕ ಸದಸ್ಯತ್ವದ ಅಪಲೇಟ್ ಟ್ರಿಬ್ಯೂನಲ್‌ನಲ್ಲಿ ಅರ್ಥವಿರುವುದಿಲ್ಲ. ಯಾರು ತಪ್ಪೆಸಗಿದ್ದಾರೋ ಅವರ ಮುಂದೆ ಹೋಗಿ ಹೇಳುವಂಥ ವ್ಯವಸ್ಥೆಯಾಗಬಾರದು. ಇದಕ್ಕೊಂದು ಪ್ರಾವಿಷನ್ ಇರಬೇಕಾಗುತ್ತದೆ. ಸೆಲ್ಫ್ ಅಸೆಸ್‌ಮೆಂಟ್‌ನಲ್ಲಾಗಿರುವ ತಪ್ಪುಗಳನ್ನೆಲ್ಲಾ ನಾವು ಯಾರ ಮುಂದೆ ಹೋಗಿ ಹೇಳಬೇಕು? ಆದುದರಿಂದ, ಚುನಾಯಿತ ಪ್ರತಿನಿಧಿಯನ್ನೊಳಗೊಂಡಂತೆ 3-4 ಜನರ ಒಂದು ಟ್ರಿಬ್ಯೂನಲ್ ರಚಿಸುವ ಅವಶ್ಯಕತೆ ಇದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ನಾವು ರೂಲ್ಸ್ ಮಾಡಿಕೊಳ್ಳುವಾಗ ನಿವೃತ್ತ ನ್ಯಾಯಾಧೀಶರನ್ನು ಮಾಡಬಹುದು ಇಲ್ಲವೇ ಅಪಲೇಟ್ ಅಥಾರಿಟಿ ಎಂತಲೂ ಮಾಡಿಕೊಳ್ಳಬಹುದು. ಆದರೆ, ಅವರು ಕಮೀಷನರ್ ಅಲ್ಲ.

ಶ್ರೀ ಎ.ರಾಮದಾಸ್: ಕಾರ್ಪೊರೇಷನ್ ಕಮೀಷನರ್ ಯಾರಿದ್ದಾರೆ, ಈ ಆಕ್ಟ್ ಬಂದ ನಂತರ ಅವರನ್ನು ಅಥಾರಿಟಿ ಎಂದು ಕನ್ಸಿಡರ್ ಮಾಡಲಾಗುತ್ತದೆ. ಇಲ್ಲಿ ಬೇರೆಯವರನ್ನು ನೇಮಿಸುವ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸಿಲ್ಲ. ಯಾರನ್ನೋ ನೇಮಿಸುವುದಕ್ಕೆ ಅಥವಾ ನಿವೃತ್ತ ನ್ಯಾಯಾಧೀಶ ಎಂಬ ಅಂಶವೇ ಇಲ್ಲಿಲ್ಲ. ಅಥಾರಿಟಿ ಎಂದರೇನು? ತಮ್ಮ ತಿದ್ದುಪಡಿಯಾದ ಬಳಿಕ the executive head of the Corporation is the Authority. ಹಾಗಾಗಿ, ನಮಗೆ ಯಾರು ತಪ್ಪು ಅಥವಾ ಸರಿ ಎಂದು ಏನು ಕೊಟ್ಟಿರುತ್ತಾರೆ, ಅವರ ಮುಂದೆಯೇ ಹೋಗುವಂಥ ವ್ಯವಸ್ಥೆಯಾಗಬಾರದು. ಕೊನೇ ಪಕ್ಷ ಸಾಧಕ-ಬಾಧಕಗಳನ್ನು ಪರಿಶೀಲಿಸಲು 2-3 ಜನರಿರುವ ಹಾಗೂ ಒಬ್ಬ ಜನಪ್ರತಿನಿಧಿಯನ್ನೊಳಗೊಂಡ ಒಂದು ಟ್ರಿಬ್ಯೂನಲ್ ರಚಿಸುವ ವ್ಯವಸ್ಥೆಯಾಗಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಇವೊತ್ತು ನಾವು ಒಟ್ಟು ಮೂರು ವಿಧೇಯಕಗಳನ್ನು ಅಂಗೀಕರಿಸಿಕೊಡಲು ಒಪ್ಪಿದ್ದೇವೆ. ಈ ವಿಧೇಯಕದ ಮೇಲೆ ಚರ್ಚೆ ಮುಗಿದ ಬಳಿಕ ಒಂದು ಗಂಟೆ ಕಾಲ 'ನೀರಾ' ಕುರಿತಂತೆ ಚರ್ಚಿಸೋಣ ಹಾಗೂ ಸದನವನ್ನು ನಾಳೆಗೆ ಮುಂದೂಡೋಣ. 'ನೀರಾ' ಪ್ರಮುಖ ವಿಚಾರವಾಗಿದ್ದು, ಸರ್ಕಾರದ ನಿಲುವು ಏನೆಂಬುದು ನಮಗೆ ಗೊತ್ತಾಗುತ್ತಿಲ್ಲ. ಈ ಬಗ್ಗೆ ನಾವು ಚರ್ಚಿಸಿ ನಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗುತ್ತದೆ. ಇದಕ್ಕಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಬೆಂಗಳೂರು ನಗರದಲ್ಲಿ ನಾನು 1964ರಿಂದ ಇದ್ದೇನೆ. ಟ್ಯಾಕ್ಸ್‌ಗಳು ಇವೆಲ್ಲಾ ನಮಗೆ ಗೊತ್ತಿರೋದಿಲ್ಲ. ಕಾರ್ಪೊರೇಟರ್ ಆಗಿ ಕೆಲಸ ಮಾಡಿರುವ ಸದಸ್ಯರುಗಳಿದ್ದಾರೆ ಮಾಜಿ ಮಂತ್ರಿಗಳಿದ್ದಾರೆ. ಅವರ ಅನುಭವಗಳೆಲ್ಲವನ್ನೂ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ವಿಧೇಯಕದ ಮೇಲಿನ ಚರ್ಚೆ ಇನ್ನೂ ಮುಗಿದಿಲ್ಲ.

5.50 ಪಿಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಸದಸ್ಯರುಗಳು ಮಾತನಾಡುವಾಗ ಭಾಷಣವನ್ನು ರಿಪೀಟ್ ಮಾಡಬೇಡಿ ಎಂದು ತಾವು ಆದೇಶ ಕೊಡಿ. ಆದರೆ ಬಿಲ್ ಬಗ್ಗೆ ಚರ್ಚೆಯನ್ನು ಮಾಡಲು ನಮ್ಮ ಹಕ್ಕನ್ನು ಕಂಟ್ರೋಲ್ ಮಾಡುವುದು ಸರಿಯಲ್ಲ. Ultimately the political leadership is hollow ಎಂದು ಆಗುತ್ತದೆ. ಯಾರೋ ಆಫೀಸರ್ಸ್ ಬಿಲ್ ಡ್ರಾಫ್ಟ್ ಮಾಡಿರುತ್ತಾರೆ, ರೆವಿನ್ಯೂ ಇನ್ಸ್‌ಪೆಕ್ಟರ್ ಹೇಳಿದಂತೆ ಇದು ಕಾರ್ಪೊರೇಷನ್ ಲಾ ಆಗುತ್ತದೆಯೇ ಹೊರತು ನಮ್ಮ ಒಂದು ಅನುಭವ ಏನು ಇದೆ ಅದನ್ನು ಇದರಲ್ಲಿ ಅಳವಡಿಸಲು ಆಗುವುದಿಲ್ಲ. ಕಾನೂನುಗಳನ್ನು ತೆಗೆದುಕೊಂಡು ಬರುವವರು, ಕಾಸು ಜಾಸ್ತಿ ವಸೂಲಿ ಮಾಡಿಕೊಳ್ಳಬೇಕೆಂದು ಇರುವವರು ಅದನ್ನು ಹೇಳಬೇಕಾಗುತ್ತದೆ. ಎಷ್ಟು ದಿವಸ ನಡೆಸಬೇಕು ಏನು ಮಾಡಬೇಕೆಂದು ಹೇಳಿ. ಎಷ್ಟು ದಿವಸ ಸದನವನ್ನು ನಡೆಸಿದ್ದೀರಿ? ಏನು ನೂರು ದಿನ ನಡೆಸಿದ್ದೀರಾ? ತಾವು ನಡೆಸಿರುವುದು 25-30 ದಿವಸ. ಕೆಲಸಕ್ಕೆ ಬಾರದ ವಿಚಾರಗಳ ಬಗ್ಗೆ ಬೇಕಾದಷ್ಟು ಚರ್ಚೆಗಳಾಗುತ್ತವೆ ಇದರ ಬಗ್ಗೆ ಚರ್ಚೆ ಬೇಡ ಅಂದರೆ ಹೇಗೆ? ಆಡಳಿತ ನಡೆಸತಕ್ಕಂಥವರು ವಿರೋಧ ಪಕ್ಷದಲ್ಲಿದ್ದಾಗ ಯಾವ ರೀತಿ ನಡೆದುಕೊಂಡಿರುತ್ತಾರೋ ಅದರ ರಿಫ್ಲೆಕ್ಷನ್ ಇವೆಲ್ಲಾ. ಅವರು ಬಹಳ ಸುಲಭವಾಗಿ ಅದೆಲ್ಲವನ್ನೂ ಮರೆತು ಹೋಗುತ್ತಾರೆ. ನಾವು ಇದ್ದಾಗ ಎರಡು ರೂಪಾಯಿ ಟ್ಯಾಕ್ಸ್ ಜಾಸ್ತಿ ಮಾಡಬೇಕೆಂದರೆ ಬಾಯಿ ಬಿಡುವುದಕ್ಕೆ ಆಗುತ್ತಿರಲಿಲ್ಲ. ಬಹಳ ಭಯಂಕರವಾಗಿರುತ್ತಿತ್ತು. ನಾವಾದರೂ ಬಾಯಿ ಮುಚ್ಚಿಕೊಂಡು ಕುಳಿತಿದ್ದೇವೆ.

ಶ್ರೀ ಎ.ರಾಮದಾಸ್: ಇದು ಬಿಲ್ ಮೇಲೆ ಮಾತನಾಡುವಂಥಾದ್ದು. ಈ ಮಸೂದೆ ನೂರಾರು ವರ್ಷಗಳ ಕಾಲ ಇರುವಂಥಾದ್ದು. ತಾವು ಈ ಬಗ್ಗೆ ಮಾತನಾಡುವುದು ಬೇಡ ಅಂದರೆ ನಾನು ಕುಳಿತುಕೊಳ್ಳುತ್ತೇನೆ. ಈ ಬಿಲ್‌ನಲ್ಲಿರುವ ಲಕ್ಷುನಾ ಏನು ಇವೆ

ಅವುಗಳನ್ನು ಸರಿ ಮಾಡಿ ಎಂದು ಹೇಳುತ್ತೇವೆ. ಬೇರೆ ವಿಷಯಗಳ ಮೇಲೆ ಅನಾವಶ್ಯಕವಾಗಿ ಗಂಟೆಗಟ್ಟಲೆ ಮಾತನಾಡುವುದಾದರೆ ಹೌದು ಎಂದು ಹೇಳುವುದು ಸರಿ. ದಿನೇ ದಿನೇ ಶಾಸಕರುಗಳು ಬಿಲ್‌ಗಳ ಮೇಲೆ ಮಾತನಾಡುವುದು ಕಡಿಮೆಯಾಗುತ್ತಿದೆ ಎಂದು ಹೇಳುವಂತಹ ಸಂದರ್ಭದಲ್ಲಿ ತಾವು ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ಸೆಕ್ಷನ್ 103(ಬಿ)ನಲ್ಲಿ ಸಬ್ ಸೆಕ್ಷನ್ (6)ರಲ್ಲಿ ಒಂದು ವಿಚಾರವನ್ನು ಹೇಳಿದ್ದೀರಿ. ಪ್ರಾಪರ್ಟಿ ರಿಜಿಸ್ಟರ್‌ನ್ನು ಮೇನ್‌ಟೇನ್ ಮಾಡಬೇಕು. ಅದಕ್ಕೆ ಸಂಬಂಧಪಟ್ಟ ಹಾಗೆ ಪ್ರಾಪರ್ಟಿ ರಿಜಿಸ್ಟರ್‌ನ್ನು ನೋಡಬೇಕು ಎನ್ನುವ ವಿಚಾರವನ್ನು ಮುಂದೆ ಹೇಳಿದ್ದೀರಿ. ಆದರೆ ಇಲ್ಲಿ ಅದಕ್ಕೆ ಸೂಚಕವಾದ ಒಂದು ವಿಚಾರವನ್ನು ಹೇಳಿದ್ದೀರಿ. ಈಗಾಗಲೇ ಮಾನ್ಯ ಸದಸ್ಯರಾದ ಸೋಮಣ್ಣನವರು ಹೇಳಿದ ಹಾಗೆ 160 ಲಕ್ಷ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೇವೆ ಎನ್ನುವ ವಿಚಾರವನ್ನು ಹೇಳಿದರು. ಇದೂ ಅಲ್ಲದೆ ನಗರಪಾಲಿಕೆಯಲ್ಲಿರುವ ಪ್ರಾಪರ್ಟಿ ರಿಜಿಸ್ಟರ್ ಬರೆಯುವುದಕ್ಕೋಸ್ಕರವಾಗಿ, ನಗರಪಾಲಿಕೆಯಲ್ಲಿರುವ ಪ್ರಾಪರ್ಟಿ ರಿಜಿಸ್ಟರ್‌ಗಳನ್ನು ಬರೆದ ನಂತರದಲ್ಲಿ ಆ ಪ್ರಾಪರ್ಟಿ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದಕ್ಕೋಸ್ಕರವಾಗಿ ಖಾಸಗಿ ಸಂಸ್ಥೆಗೆ ವಹಿಸಲು ಒಂದು ಪ್ರಾವಿಷನ್ ಮಾಡಿದ್ದೀರಿ. ಅಂದರೆ ಆ ಪ್ರಾಪರ್ಟಿ ರಿಜಿಸ್ಟರ್ ಬರೆಯುವಂಥಾದ್ದು ಮತ್ತು ಟ್ಯಾಕ್ಸನ್ನು ಕಲೆಕ್ಟ್ ಮಾಡುವುದು ಇದಕ್ಕೆ ಒಂದು ಏಜನ್ಸಿ ಮೂಲಕ ಮಾಡಿಸಬಹುದು. ಅಂದರೆ ಖಾಸಗಿ ಸಂಸ್ಥೆಗಳಿಗೆ ಇದನ್ನು ವಹಿಸುವಂಥಾದ್ದು ಎಷ್ಟು ಯುಕ್ತ ಎನ್ನುವಂಥಾದ್ದನ್ನು ನಾವು ತುಂಬಾ ಚಿಂತನೆ ಮಾಡುವ ಅವಶ್ಯಕತೆ ಇದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಪ್ರಾಪರ್ಟಿಗಳ ಬಗ್ಗೆ ಸರ್ವೆ ಇಲ್ಲ. ಒಂದು ಪಟ್ಟಣದಲ್ಲಿ ಎಷ್ಟು ಆಸ್ತಿ ಇದೆ ಎನ್ನುವುದನ್ನು ಇದುವರೆಗೂ ಲೆಕ್ಕ ಮಾಡುವುದಕ್ಕೆ ಆಗಲಿಲ್ಲ. ಎಷ್ಟು ಜಾಗ ಇದೆ, ಎಷ್ಟು ಮನೆಗಳು ಇವೆ, ಎಷ್ಟು ರಸ್ತೆಗಳು ಇವೆ ಎನ್ನುವ ಲೆಕ್ಕ ನಮ್ಮಲ್ಲಿ ಇಲ್ಲ. ಕೊನೆಯ ಪಕ್ಷ ನಾವು ಸರ್ವೆ ಮಾಡಿದರೆ ಒಳ್ಳೆಯದು. ಸರ್ವೆ ಮಾಡಲು ಸಾಕಷ್ಟು ಏಜನ್ಸಿಗಳು ಇವೆ. ಆ ಏಜನ್ಸಿಗಳಿಗೆ ಕೊಟ್ಟರೆ ನಮಗೆ ಬಹಳ ಬೇಗ ಒಂದು ಅಸೆಸ್‌ಮೆಂಟ್ ಮಾಡಿ ಕೊಡುತ್ತಾರೆ. ಆ ಅಸೆಸ್‌ಮೆಂಟ್ ಮೇಲೆ ನಾವು ಪ್ರಾಪರ್ಟಿ ಟ್ಯಾಕ್ಸನ್ನು ನಿಗದಿ ಮಾಡಬಹುದು.

ಶ್ರೀ ಎ.ರಾಮದಾಸ್: ಮಾನ್ಯ ಮಂತ್ರಿಗಳೇ ಇವತ್ತು ಅಪ್‌ಡೇಟ್ ಮಾಡಬೇಕು ಅಷ್ಟೇ. ಇವತ್ತು ಎಷ್ಟು ಮನೆ ಇವೆ, ಎಷ್ಟು ನಿವೇಶನ ಇವೆ ಎನ್ನುವುದು ಇದೆ. ನಾವು ಕಂದಾಯವನ್ನು ಏನು ತೆಗೆದುಕೊಳ್ಳುತ್ತಿದ್ದೇವೆ ಅದು ಆ ರಿಜಿಸ್ಟರ್ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದೇವೆ. ಆ ಪ್ರಾಪರ್ಟಿ ರಿಜಿಸ್ಟರ್‌ನಲ್ಲಿ ಖಾತೆ ಏನು ಇದೆ ಅದರ ಆಧಾರದ ಮೇಲೆ ನಾವು ಇವತ್ತು ಕಂದಾಯ ತೆಗೆದುಕೊಳ್ಳುತ್ತಿದ್ದೇವೆ. ಆದರೆ ಅದನ್ನು ಅಪ್‌ಡೇಟ್ ಮಾಡುವಂತಹ ಕೆಲಸ ಮಾತ್ರ ಅತ್ಯಾವಶ್ಯಕವಾಗಿ ಆಗಬೇಕು. ದಯವಿಟ್ಟು ಅಂಥಾದ್ದನ್ನು ಮಾಡುವಾಗ ಲೀಗಲ್ ಆಸ್ಪೆಕ್ಟ್ ಇರುವಂತಹ ಸಂದರ್ಭದಲ್ಲಿ ಇದನ್ನು ಅವರಿಗೆ ಕೊಡುವುದು ಎಷ್ಟು ಯುಕ್ತ ಎನ್ನುವಂಥಾದ್ದು ಪ್ರಮುಖವಾದ ಅಂಶ. ಅನಂತರ ಒಂದು

ಪ್ರಮುಖವಾದ ಅಂಶ ಅಂದರೆ ಸೆಕ್ಷನ್ 108ರಲ್ಲಿ 0.3 ರಿಂದ 0.6ವರೆಗೂ ಎನ್ನುವಂತಹ ಒಂದು ಅಂಶ ಕೊಟ್ಟಿದ್ದೀರಿ. ಆದರೆ 3 ಪರ್ಸೆಂಟ್‌ನಿಂದ 6 ಪರ್ಸೆಂಟ್‌ವರೆಗೆ ಯಾರು ಅಧಿಕಾರಿ ಡಿಕ್ಲೇರೇಷನ್ ಕೊಟ್ಟಿರುತ್ತಾರೆ ಅವರಿಗೆ ಆಪ್‌ಷನ್ಸ್ ಇರುತ್ತದೆ. ಅವನು 3 ಪರ್ಸೆಂಟ್ ಮಾಡಬಹುದು, 4 ಪರ್ಸೆಂಟ್ ಮಾಡಬಹುದು, ಅವರು ಎಲ್ಲರಿಗೂ ಹೇಳಬಹುದು. 6 ಪರ್ಸೆಂಟ್ ಮಾಡುತ್ತೇನೆಂದು ಹೇಳಿ ಕೊನೆಗೆ ತನಗೆ ಬರಬೇಕಾದ್ದು ಬಂದ ನಂತರದಲ್ಲಿ 3 ಪರ್ಸೆಂಟ್‌ಗೆ ನಿಲ್ಲಿಸಬಹುದು. ತಾವು ಯಾವುದೇ ಒಂದು ಕಾನೂನು ಮಾಡಬೇಕಾದರೆ ಪ್ರಾಪರ್ಟಿ ವ್ಯಾಲ್ಯುಯೇಷನ್ ಅನ್ನು ಮಾರುಕಟ್ಟೆ ಆಧಾರದ ಮೇಲೆ ಹೇಗೆ ಜಾಸ್ತಿ ಮಾಡುತ್ತಿದ್ದೀರಿ ಹಾಗೆಯೇ ಇಲ್ಲಿ ಎರಡು ಕೆಟಗರಿ ಮಾಡಿ. ಒಂದು ವಾಸ ಮಾಡುತ್ತಿರುವಂತಹ ಮನೆಗಳಿಗೆ 3 ಪರ್ಸೆಂಟ್. ಕಮರ್ಷಿಯಲ್ ಇದಕ್ಕೆ 6 ಪರ್ಸೆಂಟ್. ಆಗ ಏನಾಗುತ್ತದೆ ಯಾವುದೇ ಅಧಿಕಾರಿಗೂ ಕೂಡ 3 ರಿಂದ 6 ಪರ್ಸೆಂಟ್‌ನಲ್ಲಿ ಹೆಚ್ಚು ಕಡಿಮೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ದುಡ್ಡು ಕೊಟ್ಟರೆ 3 ಪರ್ಸೆಂಟ್ ಮಾಡುತ್ತಾನೆ. ಇಲ್ಲದಿದ್ದರೆ 4 ಪರ್ಸೆಂಟ್ 6 ಪರ್ಸೆಂಟ್ ಮಾಡುತ್ತಾನೆ. ಆದ್ದರಿಂದ ಸ್ಪಷ್ಟವಾಗಿ ಇರಬೇಕು. ಈ ತರಹದ ಕಾನೂನುಗಳು ಇರುವುದರಿಂದಲೇ ಇವೊತ್ತು ನ್ಯಾಯಾಲಯದಲ್ಲಿ ನೂರಾರು ಕೇಸ್‌ಗಳು ಇರುವಂತಾದ್ದು. ಆಮೇಲೆ ಸೆಕ್ಷನ್ 109ರಲ್ಲಿ ಸೆಸ್ ಹಾಕುವ ಬಗ್ಗೆ ಹೇಳಿದ್ದೀರಿ. ಸ್ಟ್ಯಾಂಪ್ ಆಕ್ಟ್ 1957ರ ಸೆಕ್ಷನ್ 45(ಬಿ) ಪ್ರಕಾರದಲ್ಲಿ ಮಾರುಕಟ್ಟೆ ವ್ಯಾಲ್ಯುವನ್ನು ನಿಶ್ಚಯ ಮಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಸುರೇಶ್‌ಕುಮಾರ್‌ರವರು ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಸ್ವಾಗತ ಮಾಡಿದರು. ಇಲ್ಲಿ ಪ್ರಮುಖವಾಗಿರುವಂತಾದ್ದು, ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಬೇರೆ, ಆದರೆ ಇಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ಗೆ ಆದರೂ ಅಷ್ಟೇ, ಬೇರೆ ಯಾವುದಕ್ಕಾದರೂ ಅಷ್ಟೆ. ಬೆಂಗಳೂರು ಮಹಾನಗರದಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ತಂದಿರುವಂಥಾದ್ದು ಯಾವ ವಿಚಾರದ ಮೇಲೆ? ಅವರು ಅಲ್ಲಿ ಡಿಕ್ಲರೇಷನ್ ಕೊಡುತ್ತಾರೆ. ಆದರೆ ಯಾವ ಆಧಾರದ ಮೇಲೆ ಟ್ಯಾಕ್ಸ್‌ನ್ನು ಫಿಕ್ಸ್ ಮಾಡಿದ್ದಾರೆಂದರೆ ಅದು ಪೇಚಬಲ್ ರೆಂಟ್‌ನ ಆಧಾರದ ಮೇಲೆ. ಇವತ್ತು ಕಾನೂನಿನ ಪ್ರಕಾರದಲ್ಲಿ ಮಾರುಕಟ್ಟೆ ಆಧಾರದ ಮೇಲೆ ಎಂದು ನೀವು ಏನು ಹೇಳಿದ್ದೀರಿ ಸ್ಟ್ಯಾಂಪ್ ಆಕ್ಟ್ 1957, ಸೆಕ್ಷನ್ 45(ಬಿ) ದರದಲ್ಲಿ ತಾವು ತರುತ್ತಿರುವಂಥಾದ್ದು ಸ್ವಾಗತಾರ್ಹ. ಆದರೆ ಇನ್ನು ಮುಂದೆ ಈಗ ಆಗಿರುವ ಅಸೆಸ್‌ಮೆಂಟ್ ಕೂಡ ಸ್ಟ್ಯಾಂಪ್ ಆಕ್ಟ್ ಅಡಿಯಲ್ಲಿಯೇ ಆಗಬೇಕಾದಂತಹ ಅವಶ್ಯಕತೆ ಇದೆ. ಹಾಗಾಗಿ ಅದನ್ನೂ ಕೂಡ ಅಪ್‌ಡೇಟ್ ಮಾಡುವಂತಹ ಅವಶ್ಯಕತೆ ಇದೆ. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಜಾರಿಗೆ ತಂದಿರುವಂಥಾದ್ದು ಈಗ ಆಕ್ಚುಯಲ್ ರೇಟ್ ಮತ್ತು ಪೇಚಬಲ್ ರೇಟ್ ಆಧಾರದ ಮೇಲೆ, ಹಾಗಾಗಿ ಪ್ರತಿಯೊಂದು ಮನೆಗಳನ್ನೂ ಕೂಡ ಮಾರುಕಟ್ಟೆ ರೇಟ್ ಆಧಾರದ ಮೇಲೆ ಮಾಡುವಂತಹ ಅವಶ್ಯಕತೆ ಇದೆ. ಅದೂ ಸಬ್ ರಿಜಿಸ್ಟ್ರಾರ್ ವ್ಯಾಲ್ಯೂ ಮೇಲೆ ಮಾಡುವಂತಾದ್ದು ಈ ಒಂದು ಆಕ್ಟ್‌ನಲ್ಲಿ ಬಂದಿರುವಂತಾದ್ದು. ಈಗ ಪ್ರಮುಖವಾಗಿ ನಾನು ಒಂದು ವಿಚಾರವನ್ನು ತಮ್ಮ ಮುಂದೆ ಇಡುತ್ತೇನೆ. ಈ ಬಿಲ್‌ನ್ನು ಕಳೆದ ಭಾರಿ ತಂದಿದ್ದೀರಿ. ಆಗ ನಾನು ಚರ್ಚೆ ಮಾಡಿದೆ.

ದಯಮಾಡಿ ನಗರಪಾಲಿಕೆಗಳಿಗೆ ಒಂದು ಆದೇಶವನ್ನು ಕೊಡಿ ತಾವು ಒಳ್ಳೆಯ ಬಿಲ್ ತರುತ್ತಿದ್ದೀರಿ, ಸ್ಟ್ಯಾಂಪ್ ಆಧಾರದ ಮೇಲೆ ಯಾವುದೇ ಒಬ್ಬ ಅಧಿಕಾರಿ ಹೆಚ್ಚು ಕಡಿಮೆ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ಮೈಸೂರು ನಗರದಲ್ಲಿ ಕಂದಾಯ ಪರಿಷ್ಕರಣೆ ಪ್ರಾರಂಭವಾಗಿದೆ. ಬೆಂಗಳೂರಿಗಿಂತ ಮೊದಲು ಮೈಸೂರಿನಲ್ಲಿ ಒಂದು ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನ್ನು ಜಾರಿಗೆ ತಂದು ಪುಸ್ತಕಗಳನ್ನು 15 ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ. ಇದರ ಜೊತೆ ಡಿಕ್ಲರೇಷನ್ ಕೊಡಲಾಗಿದೆ. ಆಗ ಸರ್ಕಾರದ ಆದೇಶವನ್ನು ತೆಗೆದುಕೊಂಡಿದ್ದೇವೆಂದು ಹೇಳಿ ನಗರಪಾಲಿಕೆ ತಮ್ಮದೇ ಆದ ರೀತಿಯಲ್ಲಿ ಇದ್ದಂತಹ ಕಂದಾಯವನ್ನು ಕಡಿಮೆ ಮಾಡಿರುವಂತಹ ನಿದರ್ಶನ ಇದೆ. ಕೇವಲ 150 ರೂಪಾಯಿಗಳು ಇದ್ದ ಕಂದಾಯವನ್ನು 15,000 ರೂಪಾಯಿ ಮಾಡಿದ ಪ್ರಕರಣಗಳನ್ನು ನಾನು ಕೊಟ್ಟಿದ್ದೇನೆ. ಅವೈಜ್ಞಾನಿಕವಾದ ಕಂದಾಯ ಪರಿಷ್ಕರಣೆ ಏನು ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ ಎಂದು ಹೇಳಿದ್ದೆ, ಆಗ ಮಾನ್ಯ ಮಂತ್ರಿಗಳು ಇಲ್ಲಿ ಹೇಳಿದ್ದರು ಈ ಬಿಲ್ ಬರುವವರೆಗೂ ಕೂಡ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಅಸೆಸ್‌ಮೆಂಟ್ ಮಾಡುವುದಿಲ್ಲ ಎಂದು ತಡೆಯಾಜ್ಞೆ ಕೊಟ್ಟಿದ್ದರು. ಈಗ ಇರುವ ಹಳೆಯ ಪದ್ಧತಿಯ ಆಧಾರದ ಮೇಲೆ ನೋಟೀಸ್ ಕೊಡುವುದಕ್ಕೋಸ್ಕರವಾಗಿ 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ತಾವು ತಡೆಯಾಜ್ಞೆ ಕೊಟ್ಟಮೇಲೆ ಈ ರೀತಿ ಮಾಡುವುದಾದರೆ ಈಗ ಈ ಸೆಲ್ಫ್ ಅಸೆಸ್‌ಮೆಂಟ್ ವಿಚಾರ ಏನು? ನಾಳೆ ಈ ಬಿಲ್ ಆಕ್ಟ್ ಆಗುತ್ತದೆ ನಾವು ಸ್ವಾಗತ ಮಾಡುತ್ತೇವೆ. ನಾಳೆ ಅವರ ಪರಿಸ್ಥಿತಿ ಏನು? ದಯಮಾಡಿ ಇದುವರೆಗೂ ಯಾವುದೇ ಪದ್ಧತಿ ಇರಲಿ ಇದು ಪ್ರಾಸ್‌ಪೆಕ್ಟೀವ್ ಎಫೆಕ್ಟ್ ಆದರೂ ಕೂಡ ಈ ಆಕ್ಟ್‌ನ ಅಡಿಯಲ್ಲಿಯೇ ಬರಬೇಕು. ಹಳೆಯ ಆಕ್ಟ್‌ನ್ನು ಅಡಿಯಲ್ಲಿರುವಂಥಾದ್ದನ್ನು ಇವತ್ತೆ ಬಿಡುವಂಥಾದ್ದು ಆಗಬೇಕು. ಸೆಕ್ಷನ್ 112ಎ(3)ರ ಪ್ರಕಾರ ಡಿಕ್ಲರೇಷನ್ ಅನ್ನು ಕೊಡಲಿಕ್ಕೆ ಅವಕಾಶ ಮಾಡಿಕೊಡಲಾಗಿದೆ. ಡಿಕ್ಲರೇಷನ್ ಅನ್ನು ಕೊಟ್ಟ ಮೇಲೆ ಒಂದು ವರ್ಷ ಅವರಿಗೆ ಅವಕಾಶವನ್ನು ಕೊಡುತ್ತೀರಿ. ಅಂದರೆ ಜನವರಿ 1ನೇ ತಾರೀಖಿನಿಂದ ಒಂದು ತಿಂಗಳೊಳಗಾಗಿ ಅವನು ಡಿಕ್ಲರೇಷನ್ ಅನ್ನು ಕೊಡಬೇಕು. ಅದನ್ನು ಕೊಟ್ಟ ನಂತರ ಒಂದು ವರ್ಷದವರೆಗೆ ಅವನಿಗೆ ಕಾಲಮಿತಿ ಇರುತ್ತದೆ. ಕೊಟ್ಟಿರುವ ಕಂದಾಯದ ಪರಿಷ್ಕರಣೆ ಮಾಡಲು ಅಥಾರಿಟಿಯವರಿಗೆ ಒಂದು ವರ್ಷ ಅವಕಾಶ ಇರುತ್ತದೆ. ಆದರೆ ನೀವೇನು ಹೇಳುತ್ತಿದ್ದೀರಿ ಎಂದರೆ, ಹಳೆಯ ಕಂದಾಯವನ್ನು ಅಂದರೆ ಈಗೇನು ಅವನು ನಿಶ್ಚಯ ಮಾಡಿರುತ್ತಾನೋ ಆ ಕಂದಾಯವನ್ನು ಪೂರ್ಣವಾಗಿ ಕಟ್ಟಿದ ನಂತರದಲ್ಲಿ ಮಾತ್ರ ಅಪೀಲ್ ತೆಗೆದುಕೊಳ್ಳುತ್ತೇವೆ ಎಂದು ನೀವು ಹೇಳುತ್ತೀರಿ. ಅಂದರೆ ನೀವು ಮಾಡಿರುವುದು ಸರಿ ಎಂದು ಒಪ್ಪಿಕೊಂಡು ನಂತರ ತಾವು ಅಪೀಲ್ ತೆಗೆದುಕೊಳ್ಳುವುದು ಸರಿಯಲ್ಲ. ದಯಮಾಡಿ ಹಿಂದಿನ ಕಂದಾಯ ಯಾವುದು ಇದೆಯೋ ಅದನ್ನು ಸ್ವೀಕಾರ ಮಾಡಿ. ಡಿಕ್ಲರೇಷನ್ ಅನ್ನು ಅವನು ಏನು ಕೊಡುತ್ತಾನೋ ಅದನ್ನು ತೆಗೆದುಕೊಳ್ಳಿ, ತಾವು ಅದರ ಬಗ್ಗೆ ಏನು ನಿರ್ಧಾರ ಮಾಡುತ್ತೀರೋ 20 ಪರ್ಸೆಂಟೋ, 30 ಪರ್ಸೆಂಟೋ, ಆ ಮೊತ್ತವನ್ನು ಮುಂದಿನ ವರ್ಷಕ್ಕೆ ಕಲೆಕ್ಟ್ ಮಾಡುವಂತಹ

ವ್ಯವಸ್ಥೆಯಾಗಬೇಕು. ಅದರ ಬದಲಾಗಿ ಯಾರು ಕಂದಾಯ ಅಧಿಕಾರಿ ನಿಶ್ಚಯವನ್ನು ಮಾಡುತ್ತಾನೋ ಅದನ್ನು ಪೂರ್ಣ ಕಟ್ಟಿ ಅನಂತರದಲ್ಲಿ ಡಿಕ್ಲರೇಷನ್ ಕೊಡಿ ಎನ್ನುವಂಥಾದ್ದು ನ್ಯಾಚುರಲ್ ಜಸ್ಟೀಸ್‌ಗೆ ಸೂಕ್ತವಾದಂತಹದ್ದು ಅಲ್ಲ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಇತರ ಎಲ್ಲಾ ಅಂಶಗಳ ಬಗ್ಗೆ ಮಾನ್ಯ ಸುರೇಶ್‌ಕುಮಾರ್‌ರವರು ಈಗಾಗಲೇ ಹೇಳಿದ್ದಾರೆ. ಒಂದು ಅಂಶವನ್ನು ಮಾತ್ರ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ತಾವು ಸರ್ಫೇಸ್ ಚಾರ್ಜ್ ಅನ್ನು ಹಾಕುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ದೇವಾಲಯದ ಕಟ್ಟಡಗಳಿಗೆ, ಮಠಗಳಿಗೆ ಮಸೀದಿಗಳಿಗೆ, ಚರ್ಚ್‌ಗಳಿಗೆ ಮತ್ತು ಮಂದಿರಗಳಿಗೆ ತಾವು ಸರ್ಫೇಸ್ ಚಾರ್ಜ್ ಹಾಕುವುದಕ್ಕೆ ವಿನಾಯಿತಿ ಕೊಡುವಂತಹ ಅವಶ್ಯಕತೆ ಇದೆ. ನಾನು ಹೇಳಿರುವ 3-4 ಅಂಶಗಳನ್ನು ಕೈ ಬಿಟ್ಟಿದ್ದಲ್ಲಿ ಅಥವಾ ಅದರ ಬಗ್ಗೆ ಬದಲಾವಣೆಯನ್ನು ಮಾಡಿದ್ದೇ ಆದಲ್ಲಿ ಈ ಸಮಗ್ರವಾದಂತಹ ತಿದ್ದುಪಡಿ ತಂದಿರುವ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಇದು ಸಮಾಜಕ್ಕೆ ಭಾರ ಎನಿಸಬಾರದು. ಉಳಿದಂತಹ ನಗರಪಾಲಿಕೆಗಳಿಗೆ ಈ ಕ್ಷಣದಲ್ಲೇ ಮಾನ್ಯ ಸಚಿವರು ಆದೇಶನ್ನು ಕೊಟ್ಟು ಹಳೆಯ ಅಸೆಸ್‌ಮೆಂಟ್ ಅನ್ನು ನಿಲ್ಲಿಸಿ ಹೊಸ ಅಸೆಸ್‌ಮೆಂಟ್‌ಗೆ ಅವಕಾಶವನ್ನು ಮಾಡಿಕೊಡುವುದಕ್ಕೆ ಒಂದು ಆರ್ಡರ್ ಅನ್ನು ಮಾಡುತ್ತೇವೆ ಎನ್ನುವುದನ್ನು ಹೇಳಬೇಕೆಂದು ಕೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ಕೆಲವೊಂದು ಹೊಸ ವಿಷಯಗಳು ಇವೆ. ಅದರಲ್ಲಿ ಕೆಲವನ್ನು ಬದಲಾವಣೆ ಮಾಡಿಕೊಳ್ಳುವುದು ಸ್ವಲ್ಪ ಸೂಕ್ತವೆಂದು ನಾನು ಅಂದುಕೊಂಡಿದ್ದೇನೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಸೆಸ್ ಎಂದು ನೀವೇನು ಹಾಕಿದ್ದೀರಿ ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದ್ದಂತೆ ಕಾಣಿಸುತ್ತದೆ. ಸೆಕ್ಷನ್ 103(ಬಿ)ರಲ್ಲಿ

"(1) Notwithstanding anything contained in Section 19 of the Karnataka Motor Vehicles Taxation Act, 1957 (Karnataka Act 35 of 1957) the Corporation may in addition to the tax levied under that Act, levy and collect an infrastructure cess, at such rate not exceeding five hundred rupees...."

ಎಂದು ಹೇಳಿದ್ದೀರಿ. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಸೆಸ್ ಅನ್ನು ನಾವು ಕಲೆಕ್ಟ್ ಮಾಡುತ್ತಿದ್ದೇವೆ ಎಂಬ ಅಂಶ ಈ ಪ್ಯಾರಾದಲ್ಲಿ ಬರುವುದಿಲ್ಲ. ಮುಂದುವರೆದು ಇದರಲ್ಲಿ

"....as may be prescribed on every motor vehicle suitable

for the use on roads within the city and different rates may be prescribed in respect of different classes of motor vehicles."

ಎಂದು ಹೇಳಿದ್ದೀರಿ. ಪಲ್ಯೂಷನ್‌ಗಳಲ್ಲಿ ಸಾಲಿಡ್ ವೇಸ್ಟ್, ವಾಟರ್ ಪಲ್ಯೂಷನ್ ಮತ್ತು ಏರ್ ಪಲ್ಯೂಷನ್ ಎಂದು ಮೂರು ವಿಧ. ವೆಹಿಕಲ್ಸ್ ಏರ್ ಪಲ್ಯೂಷನ್ ಮಾಡುತ್ತವೆ. ಈ ಏರ್ ಪಲ್ಯೂಷನ್ ಅನ್ನು ನೋಡಿಕೊಳ್ಳುವುದಕ್ಕೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಇದೆ. ನೀವೇನು ಈಗ ಸೆಸ್ ಕಲೆಕ್ಟ್ ಮಾಡಲು ಉದ್ದೇಶಿಸಿದ್ದೀರಿ ಅದು ನನಗೆ ತಿಳಿದ ಮಟ್ಟಿಗೆ, ಯಾವ ಯಾವ ವಾಹನಗಳಲ್ಲಿ ಈ ಸಾಲಿಡ್ ವೇಸ್ಟ್ ಅನ್ನು ತೆಗೆದುಕೊಂಡು ಹೋಗುತ್ತಾರೋ, ಆ ರಸ್ತೆಗಳನ್ನು ರಿಪೇರಿ ಮಾಡಲಿಕ್ಕೆ ಮತ್ತು ಯಾವ ಜಾಗದಲ್ಲಿ ಈ ವೇಸ್ಟ್ ಅನ್ನು ಇಡುತ್ತಾರೋ ಆ ಜಾಗಕ್ಕೆ ಹಾಕುವಂತಹ ಸೆಸ್ ಎಂದು ನನ್ನ ಭಾವನೆ. ಅದೇ ಸೆಕ್ಷನ್ 103ಬಿ (2)ರಲ್ಲಿ ಏನು ಹೇಳುತ್ತಾರೆಂದರೆ,

"(2) The Corporation may in addition to property tax levied under Section 103, levy a Solid Waste Mangement cess at such rate not exceeding one thousand rupees per month as may be prescribed, on every owner or occupier of buildings or lands or both in the city, for the pupose of collection, transportation and disposal of solid waste and different rates may be prescribed in respect of different classes of lands or buildings or in different areas."

'every owner' ಅಂದರೆ ಇದರಲ್ಲಿ ಎಲ್ಲರೂ ಬರುತ್ತಾರೆ. ಸ್ವಂತ ವೆಹಿಕಲ್ಸ್ ಅನ್ನು ಇಟ್ಟುಕೊಂಡಿರತಕ್ಕಂತಹ ನಾವು we don't carry solid waste in our vehicle. ಆದರೆ ಇದರಲ್ಲಿ ಏನು ಅರ್ಥವಾಗುತ್ತದೆ On every vehicle, your Corporation can levy cess. ಅದರ ಬಗ್ಗೆ ಸ್ಪೆಸಿಫಿಕ್ಕಾಗಿ ಹೇಳಬೇಕಾಗುತ್ತದೆ. ಸ್ಪೆಸಿಫಿಕ್ಕಾಗಿ ಹೇಳದಿದ್ದರೆ 'every vehicle' ಎಂಬ ಅರ್ಥ ಬರುತ್ತದೆ. ಅದನ್ನು ಸ್ವಲ್ಪ ತಾವು ನೋಡಬೇಕು. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಎಂಬುದು ಏನಿದೆ ಇದು ಬಹಳ ಒಳ್ಳೆಯ ಯೋಜನೆ. ರೆಂಟ್ ಮೇಲೆ ಕಂದಾಯ ಫಿಕ್ಸ್ ಮಾಡುವುದನ್ನು ತಾವು ಅಬಾಲಿಷ್ ಮಾಡಿ ಹೊಸದಾಗಿ ಬೇರೊಂದು ವಿಧಾನ ಮಾಡಿದ್ದೀರಿ.

"(2) to introduce a system of assessment of property tax based on taxable Capital Value having regard to the estimated market value of the land and estimated cost of erecting the building."

ಇದರಲ್ಲಿ ಕೆಲವು ವಿಚಾರಗಳಲ್ಲಿ ಏನಾಗುತ್ತದೆ ಎಂದರೆ, ಇದರ ಪ್ರಕಾರ you are

taxing the property i.e. capital and not the income. ಕೆಲವೆಡೆ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆ. ಅದಕ್ಕೆ ಪ್ರಾಪರ್ಟಿ ಟ್ಯಾಕ್ಸ್ ಬೇರೆ ಬೇರೆ ಇರುತ್ತದೆ. ಆದರೆ ರೆಂಟ್ ಅನ್ನು 20-40 ವರ್ಷಗಳ ಹಿಂದೆ ಯಾವುದೋ ಹಳೆಯ ಕಾಲದಲ್ಲಿ ಫಿಕ್ಸ್ ಮಾಡಿದ್ದು, ಅದರ ಪ್ರಕಾರ ರೆಂಟ್ ಕೊಡುತ್ತಿರುತ್ತಾರೆ. ಆ ರೆಂಟ್ ಬಹಳ ಕಡಿಮೆ ಬರುತ್ತಿರುತ್ತದೆ. ಆದರೆ ಪ್ರಾಪರ್ಟಿ ಟ್ಯಾಕ್ಸ್ ಮಾತ್ರ ಜಾಸ್ತಿಯಾಗುತ್ತದೆ. ತಾವು ಅದನ್ನು ಯಾವ ರೀತಿ ನಿಗದಿ ಮಾಡುತ್ತೀರಿ ಮತ್ತು ಪ್ರತ್ಯೇಕ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು. ಇಲ್ಲದಿದ್ದರೆ ಆ ಓನರ್‌ಗೆ ಏನೇನೂ ಸಿಗುವುದಿಲ್ಲ. ಯಾವುದೋ ಕಾಲದಲ್ಲಿ ಫಿಕ್ಸ್ ಮಾಡಿದ್ದ ರೆಂಟ್ ಅನ್ನು ತೆಗೆದುಕೊಳ್ಳುತ್ತಿದ್ದರೆ ಅದರ ಮೇಲೆ ಹಾಕುವ ಟ್ಯಾಕ್ಸ್ ಮಾತ್ರ ಬೇರೆ ರೀತಿಯಲ್ಲಿ ಇರುತ್ತದೆ. ಅಂತಹ ಕಟ್ಟಡಗಳಿಗೆ ತಾವು ಯಾವ ರೀತಿ ಮಾಡುತ್ತೀರಿ ಎಂಬ ಬಗ್ಗೆ ಸ್ವಲ್ಪ ಹೇಳಬೇಕು. Having regard to the estimated market value of the land, you are calculating the property value based on the market rate.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ರೆಂಟ್ ಅನ್ನು ನಾವು ಕನ್‌ಸಿಡರ್ ಮಾಡುವುದೇ ಇಲ್ಲ.

SRI B.SOMASHEKAR:- You are taxing the capital, not the income. ಇದರ ಅರ್ಥ ನೀವು ಹಳೆಯ ಪದ್ಧತಿಯನ್ನೇ ಜಾರಿಗೆ ತಂದಂತಾಗುತ್ತಿದೆ. ಶೇಕಡ.5ರಷ್ಟು ದರದಲ್ಲಿ ಇನ್ಸೆಂಟೀವ್ ಕೊಡುವುದು ಸರಿ. ಅದರಲ್ಲಿ ರ್‍ಯಾಂಡಮ್ ಚೆಕ್ಕಿಂಗ್ ಇಟ್ಟುಕೊಂಡರೆ ಅನುಕೂಲವಾಗುತ್ತದೆ. To impose a penalty at the rate of 50% of the tax in cases of failure to submit returns, ಎಂದು ಇನ್ನೊಂದು ಕ್ಲಾಸ್ ಮಾಡಿದ್ದೀರಿ. ಶೇಕಡ 50ರಷ್ಟು ಜಾಸ್ತಿಯಾಗುತ್ತದೆ ಎಂಬುದು ನನ್ನ ಭಾವನೆಯಾಗಿದೆ. ಯಾವುದೋ ಕಾರಣದಿಂದ ಕೆಲವರು ಟೈಮ್‌ಗೆ ಸರಿಯಾಗಿ ಕಟ್ಟಿರುವುದಿಲ್ಲ. ಅಥವಾ ಅವರು ಬೇರೆ ಯಾವುದೋ ಊರಿನಲ್ಲಿ ಇರುತ್ತಾರೆ ಅಥವಾ ಅರ್ಧದಲ್ಲೇ ಕಟ್ಟಡಗಳು ನಿಂತಿರುತ್ತದೆ, ಅವುಗಳ ಮೇಲೆಲ್ಲಾ ನೀವು ಪನಿಷ್‌ಮೆಂಟಾಗಿ ಶೇಕಡ 50ರಷ್ಟು ಹಾಕಿದರೆ ಅದು ಬಹಳ ಜಾಸ್ತಿಯಾಗುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಅನ್-ಲಾಫುಲ್ ಕನ್‌ಸ್ಟ್ರಕ್ಟೆಡ್ ಲ್ಯಾಂಡ್ ಅನ್ನು ಲೀಗಲೈಸ್ ಮಾಡಲಿಕ್ಕೆ ನೀವು ಹೊರಟಿದ್ದೀರಿ. ಅದನ್ನು ಕೆಡಹುವುದಕ್ಕೆ ಆಗುವುದಿಲ್ಲ, ಅದರಿಂದ ಹೆಚ್ಚು ಹಣ ಬರಬೇಕು ಎಂಬ ಉದ್ದೇಶದಿಂದ ಇದನ್ನು ತಾವು ಮಾಡಲಿಕ್ಕೆ ಹೊರಟಿದ್ದೀರಿ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ನೀವು twice the property tax ಎಂದು ಹೇಳಿದ್ದೀರಿ. ಅದು ಬಹಳ ಕಡಿಮೆಯಾಗುತ್ತದೆ. ಬಹಳ ಜನ ಅದನ್ನು ಸುಲಭವಾಗಿ ಕೊಟ್ಟು ಬಿಡುತ್ತಾರೆ. ಅದನ್ನು ಶೇಕಡ 100ರಷ್ಟು ಮಾಡಬೇಕು. ಇಲ್ಲದಿದ್ದರೆ, ಎಷ್ಟಕ್ಕೆ ನೀವು ಅನುಮತಿ ಕೊಟ್ಟಿರುತ್ತೀರೋ ಅದಕ್ಕಿಂತ ಹೆಚ್ಚಿಗೆ ಕಟ್ಟಿರುವುದರ ರೇಟ್ ಅನ್ನು ನೀವು ಪಡೆದುಕೊಳ್ಳಬೇಕಾಗುತ್ತದೆ. ಇದನ್ನು ಸ್ವಲ್ಪ ಜಾಸ್ತಿ ಮಾಡತಕ್ಕದ್ದು ಬಹಳ ಒಳ್ಳೆಯದು. ಇಲ್ಲದಿದ್ದರೆ ನಿಮಗೆ ಜಾಸ್ತಿ ಹಣ ಬರುವುದಿಲ್ಲ. ಶೇಕಡ 100ರಷ್ಟು ಮಾಡಿದರೆ ಇನ್ನೂ

ಒಳ್ಳೆಯದು. ಮಾರ್ಕೆಟ್ ವ್ಯಾಲ್ಯೂ ಪ್ರಕಾರ ನೀವು ಚಾರ್ಜ್ ಮಾಡಬೇಕೆಂದು ನಾನು ಸಲಹೆ ನೀಡುತ್ತೇನೆ. ಇನ್ನೊಂದು ಸೆಕ್ಷನ್‌ನಲ್ಲಿ ಈ ರೀತಿ ಹೇಳಿದ್ದೀರಿ.

"(9) to publish property tax register for public information;

(10) to undertake survey of lands and buildings and preparation of property register;"

ಇದು ಬಹಳ ಉತ್ತಮವಾದಂತಹ ಒಂದು ಯೋಚನೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ನಾವು ಯೋಚನೆ ಮಾಡಿದಂತೆ ಮೈಕ್ರೋ ಲೆವೆಲ್‌ನಲ್ಲಿ ವೈಜ್ಞಾನಿಕವಾಗಿ ಪ್ರಾಪರ್ಟಿ ಟ್ಯಾಕ್ಸ್ ಅನ್ನು ಅಸ್ಸೆಸ್ ಮಾಡಬೇಕಾಗುತ್ತದೆ. ಇದನ್ನು ಬೇಕಾದರೆ ಒಂದು ಖಾಸಗಿ ಸಂಸ್ಥೆಗೆ ಕೊಡಬಹುದು. ಉದಾಹರಣೆಗೆ ಹೇಳುವುದಾದರೆ, ಕನ್ನಿಂಗ್‌ಹ್ಯಾಮ್ ಮೈನ್ ರೋಡಿನಲ್ಲಿ ಒಂದು ಪ್ರಾಪರ್ಟಿಗೆ ಒಂದು ವ್ಯಾಲ್ಯೂ ಇರುತ್ತದೆ. ಒಳಗಡೆ ಹೋದಂತೆಲ್ಲಾ ಬೇರೆ ವ್ಯಾಲ್ಯೂ ಇರುತ್ತದೆ. ಇದನ್ನು ಜೋನಲ್ ಎಂದು ತಾವು ತೆಗೆದುಕೊಂಡು ಅದಕ್ಕೆಲ್ಲಾ ಒಂದೇ ರೇಟ್ ಫಿಕ್ಸ ಮಾಡಿದರೆ ಬೇರೆ ಬೇರೆ ವ್ಯತ್ಯಾಸಗಳು ಕಾಣುತ್ತವೆ. ಅಲ್ಲಿಗೇ ಒಂದು ರೇಟು, ಮೈನ್ ರೋಡಿಗೇ ಒಂದು ರೇಟು, ಮತ್ತು ಸಬ್‌ವೇಗಳಿಗೇ ಒಂದು ರೇಟು ಎಂದರೆ ಅದು ಆಗುವುದಿಲ್ಲ. ಲ್ಯಾಂಡ್‌ಗಳಿಗಾಗಲೀ, ಅಥವಾ ಕಟ್ಟಡಗಳಿಗಾಗಲೀ ವೈಜ್ಞಾನಿಕವಾಗಿ ಮೈಕ್ರೋ ಲೆವೆಲ್‌ನಲ್ಲಿ ಒಂದು ಪ್ರಾಪರ್ಟಿ ರಿಜಿಸ್ಟರ್ ಅನ್ನು ತಯಾರು ಮಾಡುವುದು ಒಳ್ಳೆಯದು. ಇದರಿಂದ ನಮ್ಮ ಕಾರ್ಪೊರೇಷನ್‌ಗಳಿಗೆ ಮತ್ತು ಬಿ.ಡಿ.ಎ.ನವರಿಗೆ ಅನುಕೂಲವಾಗುತ್ತದೆ. ನಮ್ಮ ಸ್ಟ್ಯಾಂಪ್ ಆಕ್ಟ್ ಪ್ರಕಾರ ನಾವು ಏನು ಎರಡು ವ್ಯಾಲ್ಯು ರಿಜಿಸ್ಟರ್ ಮಾಡುತ್ತೇವೆ ಅದಕ್ಕೂ ಸಹ ಅನುಕೂಲವಾಗುತ್ತದೆ. ಈ ತರಹ ವೈಜ್ಞಾನಿಕವಾಗಿ ಮಾಡಬೇಕೆಂದು ನಾವು ಹಿಂದೆ ಪ್ರಯತ್ನ ಮಾಡಿದ್ದೆವು. ಇದನ್ನು ಮಾಡಿ ಇದರ ಪ್ರಕಾರ ಪ್ರಾಪರ್ಟಿ ರಿಜಿಸ್ಟರ್ ಮಾಡಿದರೆ ಅದರ ಪ್ರಕಾರ ಟ್ಯಾಕ್ಸ್ ಕೊಡಬೇಕು. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಬರುವುದಿಲ್ಲ. ಕೊನೆಯದಾಗಿ ವೈಜ್ಞಾನಿಕವಾಗಿ ಪ್ರಾಪರ್ಟಿ ರಿಜಿಸ್ಟರ್ ಮಾಡತಕ್ಕಂಥದ್ದು, ಅದರಲ್ಲಿ ಜೋನಲ್ ಆಗಿ ಮಾಡತಕ್ಕಂಥದ್ದು ಒಳ್ಳೆಯದು. ಮತ್ತೆ, ಇನ್ನೊಂದು ವಿಚಾರ ಕ್ಲಾಸ್ 108ರಲ್ಲಿ "The property tax shall be levied at such percentage, not being less than 0.3 percent (three thousandth) and not more than 0.6 per cent." ಇದರ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರೂ ಹೇಳಿದ್ದಾರೆ, ಅದರ ಬಗ್ಗೆ ನನ್ನ ಅಭಿಪ್ರಾಯ ಕೂಡ ಅದೇ, more than 0.6 percent, ಅಂತ ಇದೆಯಲ್ಲಾ, ಅದನ್ನು ಇನ್ನು ಜಾಸ್ತಿ ಮಾಡುವುದರಿಂದ ಇನ್ನು ಹೆಚ್ಚಿನ ಹಣ ನಮ್ಮ ಪುರಸಭೆಗಳಿಗೆ ಬರುತ್ತದೆ ಎಂದು ನಾನು ಸಲಹೆ ಕೊಡುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪೌರ

ನಿಗಮ ಅಭಿವೃದ್ಧಿ ತಿದ್ದುಪಡಿ ವಿಧೇಯಕದ ಮೇಲೆ ಚರ್ಚೆಯಾಗುತ್ತಿದೆ. ಕರ್ನಾಟಕ ಮುನಿಸಿಪಾಲಿಟೀಸ್ ಅಮೆಂಡ್‌ಮೆಂಟ್ ಆಕ್ಟ್ ಬಗ್ಗೆ ಒಂದೇ ಒಂದು ಮಾತು ಹೇಳುತ್ತೇನೆ. ಸೆಕ್ಷನ್ 105 ಇದರಲ್ಲಿ ಏನು ಹೇಳುತ್ತಾರೆಂದರೆ, "(1) Every owner or occupier who is liable to pay property tax under this Act, shall every year submit to the commissioner.... ಪ್ರತಿವರ್ಷ ಸಹಿತ ಸೆಲ್ಫ್ ಅಸೆಸ್‌ಮೆಂಟ್ ಕೊಡುವುದಕ್ಕೆ ಹೋಗುವುದು ಬಹಳ ತಪ್ಪಾಗುತ್ತದೆ. ನೀವು ಸೆಕ್ಷನ್ 109ರಲ್ಲಿ ಏನು ಹೇಳುತ್ತೀರೆಂದರೆ ಪ್ರತಿ ಐದು ವರ್ಷಕ್ಕೊಮ್ಮೆ ಟ್ಯಾಕ್ಸ್ ಎನ್‌ಹ್ಯಾನ್ಸ್ ಮಾಡುತ್ತೇವೆಂದು ಹೇಳಿದ್ದೀರಿ. ರಿವೈಸ್ ಮಾಡುವುದು ಎಂದರೆ ಕಡಿಮೆ ಆದರೂ ಆಗಬಹುದು, ಜಾಸ್ತಿಯಾದರೂ ಆಗಬಹುದು. ಪ್ರತಿ ವರ್ಷ ಅಸೆಸ್‌ಮೆಂಟ್ ಕೊಡುವುದು ಎಂದರೆ ಅದೇ ಒಂದು ಕೆಲಸವಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ: ರಿವಿಷನ್ ಐದು ವರ್ಷಗಳಿಗೊಂದು ಸಾರಿ ಕೊಡುವುದು, ಆದರೆ ಡಿಕ್ಲರೇಷನ್ ಕೊಡುವಾಗ ಪ್ರತಿ ವರ್ಷ ಕೊಡಬೇಕಾಗುತ್ತದೆ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ: ಐದು ವರ್ಷಕ್ಕೊಮ್ಮೆ ಮಾಡಿ ಏನು ತಪ್ಪಾಗುತ್ತದೆ? ಒಂದು ಸಾರಿ ನಿರ್ಧಾರ ಆದ ಮೇಲೆ ವರ್ಷಕ್ಕೊಮ್ಮೆ ಟ್ಯಾಕ್ಸ್ ಕಟ್ಟುತ್ತೇವೆ. ನೀವು ಏನು ಐದು ಪರ್ಸೆಂಟ್ 50 ಪರ್ಸೆಂಟ್ ರಿಬೇಟ್ ಮಾಡಿದ್ದೀರಿ ಅದನ್ನು ಉಪಯೋಗಿಸಿಕೊಂಡು ನಾವು ಟ್ಯಾಕ್ಸ್ ಕಟ್ಟುತ್ತೇವೆ. ಮಾರ್ಚ್ ಅಥವಾ ಫೆಬ್ರವರಿ ತಿಂಗಳಲ್ಲಿ ನಾವು ಟ್ಯಾಕ್ಸ್ ಕಟ್ಟುತ್ತೇವೆ. ಟ್ಯಾಕ್ಸ್ ಕಟ್ಟುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಪ್ರತಿ ವರ್ಷ ಸೆಲ್ಫ್ ಅಸೆಸ್‌ಮೆಂಟ್ ಕೊಡಿ ಎಂದರೆ, ಮುನಿಸಿಪಾಲಿಟೀಸ್ ಅಸೆಸ್‌ಮೆಂಟ್ ಆಕ್ಟ್‌ನಲ್ಲಿ ಎಲ್ಲಾ ವರ್ಗದ ರೈತರು ಇರುತ್ತಾರೆ. ಅವರಿಗೆ ಕೊಡುವುದಕ್ಕಾಗುವುದಿಲ್ಲ. ಇದನ್ನು ಐದು ವರ್ಷಕ್ಕೆ ಒಂದು ಸಾರಿ ಕಟ್ಟುವ ಹಾಗೆ ಮಾಡಿ. ಟ್ಯಾಕ್ಸ್ ವೇ ಮಾಡುವುದು ಪ್ರತಿ ವರ್ಷ ಕಟ್ಟಬೇಕು, ರಿಟರ್ನ್ಸ್ ಕೊಡುವುದು ಪ್ರತಿ ಐದು ವರ್ಷಕ್ಕೊಮ್ಮೆ ಕೊಡುವ ಹಾಗೆ ಮಾಡಬೇಕು. ನಾವು ಅಪೀಲ್ ಹೋಗಬೇಕಾದರೆ ಪುನಃ ಅದೇ ಚೀಫ್ ಆಫೀಸರ್ ಜೊತೆ ಮುನಿಸಿಪಲ್ ಕಮಿಷನರ್ ಜೊತೆ ಅಪೀಲ್ ಹೋಗಬೇಕಾಗುತ್ತದೆ. ಯಾರು ಕರ ನಿರ್ಧಾರ ಮಾಡಿರುತ್ತಾರೆ ಅವರ ಮುಂದೆಯೇ ಮತ್ತೆ ಅಪೀಲ್ ತೆಗೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಈಗಿರತಕ್ಕಂತಹ ಕಾನೂನಿನಲ್ಲಿ ಯಾರು ಕರ ನಿರ್ಧಾರ ಮಾಡಿದ ಮೇಲೆ, ಅಸೆಸಿಂಗ್ ಆಫೀಸರ್ ಮಾಡಿದ ಮೇಲೆ ಅಸಿಸ್ಟೆಂಟ್ ಕಮಿಷನರ್‌ಗೆ ಅಪೀಲ್ ಹೋಗುತ್ತದೆ. ಇಲ್ಲಿ ಚೀಫ್ ಆಫೀಸರ್ ಕರ ನಿರ್ಧಾರ ಮಾಡುತ್ತಾರೆ, ಮತ್ತೆ ಚೀಫ್ ಆಫೀಸರ್ ಮುಂದೆ ಅಪೀಲ್ ತೆಗೆದು ಕೊಳ್ಳಿ, ಒಂದು ವರ್ಷದಲ್ಲಿ ಅದನ್ನು ಡಿಸ್‌ಪೋಸ್ ಮಾಡಿ ಎಂದರೆ ಇದಕ್ಕೆ ಅರ್ಥ ಬರುವುದಿಲ್ಲ. ಹಾಗಾಗಿ ಅಸಿಸ್ಟೆಂಟ್ ಕಮಿಷನರ್ ಅಥವಾ ಚೀಫ್ ಆಫೀಸರ್‌ಗೆ ಸಮಾನವಾಗಿ ಡೆಪ್ಯುಟಿ ಕಮಿಷನರ್ ಅಥವಾ ಯಾರಿಗಾದರೂ ನೇಮಕ ಮಾಡುವುದು ಸೂಕ್ತ. ನನ್ನ ಈ ಎರಡು ಸಲಹೆಗಳನ್ನು ನಾನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಟ್ಟ ಮೇಲೆ ನಾನು ಇದರ ಬಗ್ಗೆ ಪರವಾಗಿ ಮಾತನಾಡಬೇಕೆ ಅಥವ ಬೇಡವೆ ಎಂದು ಜಿಜ್ಞಾಸೆ ಇತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಬೆಂಗಳೂರನ್ನು ಸಿಂಗಾಪುರವನ್ನಾಗಿ ಮಾಡತಕ್ಕಂಥದ್ದು ಗಗನ ಕುಸುಮ ಎಂದು ಹೇಳಿದರು. ಕೈಗೆಟುಕದ ಹೂವು ಎನ್ನುವ ಮಾತು ಹೇಳಿದರು. ಈ ಹಿನ್ನಲೆಯಲ್ಲಿ ಯಾವುದೇ ಪಟ್ಟಣ ಅಭಿವೃದ್ಧಿಯಾಗಬೇಕಾದರೆ ಹಣ ಬೇಕು. ಅದಕ್ಕೆ ಇನ್ನೂ ಅನೇಕ ಮಾರ್ಗಗಳು ಇದ್ದವು. ಅನೇಕ ಪಟ್ಟಣಗಳಲ್ಲಿ ಮೂರನೇ ಒಂದು ಭಾಗ ಮಾತ್ರ ಟ್ಯಾಕ್ಸ್ ಕಟ್ಟುತ್ತಾರೆ. ಎರಡನೇ ಮೂರು ಭಾಗದ ಜನ ಟ್ಯಾಕ್ಸ್ ಕಟ್ಟುವುದಿಲ್ಲ. ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿರುತ್ತಾರೆ. ಅವರು ಎಲ್ಲಾ ಸೌಕರ್ಯಗಳನ್ನು ಕೊಡಬೇಕಾಗುತ್ತದೆ. ಚರಂಡಿ ಕಟ್ಟಬೇಕು, ಕುಡಿಯುವ ನೀರು ಕೊಡಬೇಕು, ಕರೆಂಟ್ ಕೊಡಬೇಕು, ಬೀದಿ ದೀಪಗಳು ಹಾಕಬೇಕು, ಇವರು ಮುನಿಸಿಪಲ್ ಎಲಕ್ಷನ್‌ಗಳಲ್ಲಿ ಕೂಡ ಪಾಲ್ಗೊಳ್ಳುತ್ತಾರೆ. ಅವರಿಗೆ ಮಾತ್ರ ಟ್ಯಾಕ್ಸ್ ಇಲ್ಲ. ಯಾರು ಮೂರನೇ ಒಂದು ಭಾಗದ ಜನ ಆ ಭಾಗದಲ್ಲಿರುತ್ತಾರೆ. ಅವರು ಕೊಡುವ ಟ್ಯಾಕ್ಸ್ ಅವರು ಎಂಜಾಯ್ ಮಾಡುತ್ತಾರೆ. ಇಂತಹವರಿಗೆ ಮೊದಲು ನೀವು ಅಕ್ರಮವನ್ನು ಸಕ್ರಮವಾಗಿ ಮಾಡಿಯಾದರೂ ಫೆನಾಲ್ಟಿ ಹಾಕಿಯಾದರೂ ಅವರನ್ನು ಈ ಮಟ್ಟಕ್ಕೆ ತರುತ್ತೀರೋ, ನನಗೆ ಗೊತ್ತಿಲ್ಲ. ಆದರೆ ಅದು ಟ್ಯಾಕ್ಸ್ ಹಾಕುವ ಹಂತಕ್ಕೆ ತಂದರೆ ತನ್ನಷ್ಟಕ್ಕೆ ತಾನೇ ಅಸೆಸ್‌ಮೆಂಟ್ ಜಾಸ್ತಿಯಾಗುತ್ತದೆ. ರೆವಿನ್ಯೂ ಜಾಸ್ತಿಯಾಗುತ್ತದೆ. ಯಾರು ಸಾಲಿಡ್ ವೇಸ್ಟ್ ಮಾಡುವವರು ಈ ಪಟ್ಟಣದಲ್ಲಿರುತ್ತಾರೆ ಅವರಿಗೆ ಟ್ಯಾಕ್ಸ್ ಹಾಕಬೇಕೆಂದು ನನ್ನ ಅನಿಸಿಕೆ. ಹೋಟೆಲ್ ಇರಬಹುದು, ಕಲ್ಯಾಣ ಮಂಟಪ ಇರಬಹುದು, ಆಸ್ಪತ್ರೆಗಳಿರಬಹುದು, ನರ್ಸಿಂಗ್ ಹೋಮ್‌ಗಳಿರಬಹುದು, ಇವುಗಳಿಗೆ ಸಾಲಿಡ್ ವೇಸ್ಟ್ ಮಾಡುವವರಿಗೆ ಟ್ಯಾಕ್ಸ್ ಹಾಕಬೇಕಾಗುತ್ತದೆ. ಎಲ್ಲಾ ವೆಹಿಕಲ್‌ಗಳಿಗೂ ಒಂದೇ ರೂಪದಲ್ಲಿ 500 ರೂಪಾಯಿ ಟ್ಯಾಕ್ಸ್ ಹಾಕುವುದು ತಪ್ಪಾಗುತ್ತದೆ. ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ಆ ಬೆಲೆ ಕೊಟ್ಟು ಗಾಡಿ ಓಡಿಸುವುದೂ ಕಷ್ಟವಾಗಿದೆ. ಇಂಥದ್ದರಲ್ಲಿ ವರ್ಷಕ್ಕೆ 500 ರೂಪಾಯಿ ಹಾಕುವುದರಿಂದ ದ್ವಿಚಕ್ರ ವಾಹನಗಳಿಗೆ ಮತ್ತು ಆಟೋಗಳಿಗೆ ಕಷ್ಟವಾಗಬಹುದು ಎನ್ನುವ ಮಾತನ್ನೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇದು ಲೈಫ್ ಟ್ಯಾಕ್ಸ್‌ಗಿಂತ ಜಾಸ್ತಿಯಾಗುತ್ತದೆ. ಇದನ್ನು ತಾವು ಗಮನದಲ್ಲಿಡಬೇಕು. ಹಿಂದಿನಿಂದಲೂ ಪೆಟ್ರೋಲ್ ಸೆಸ್, ಭಿಕ್ಷುಕರ ಸೆಸ್ ಹಾಕಿ ಹಣ ಕಲೆಕ್ಟ್ ಮಾಡುತ್ತೀರಿ, ಆದರೆ ಕಲೆಕ್ಟ್ ಮಾಡಿದ ಹಣ ಆ ಉದ್ದೇಶಕ್ಕೆ ನೀವು ಉಪಯೋಗಿಸಿಲ್ಲ. ಭಿಕ್ಷುಕರ ಸೆಸ್‌ನಲ್ಲಿ ಕಲೆಕ್ಟ್ ಮಾಡಿದ ಹಣದ ಬಗ್ಗೆ ನಾನು ಪ್ರಶ್ನೆ ಕೇಳಿದ ಮೇಲೆ ಕಾರ್ಪೊರೇಷನ್‌ಗೆ ಕೊಡುವ ಕೆಲಸ ಮಾಡಿದ್ದೀರಿ. ಎರಡು ಪರ್ಸೆಂಟ್ ಪೆಟ್ರೋಲ್ ಸೆಸ್ ಏಕೆ ಹಾಕಿದಿರಿ ಎಂದರೆ, ಬೆಂಗಳೂರಿನಲ್ಲಿ ರೈಲ್ವೆ ಅಭಿವೃದ್ಧಿ ಮಾಡಬೇಕು, ಓವರ್ ಬ್ರಿಡ್ಜ್ ಮಾಡಬೇಕು ಎಂದು ಕಲೆಕ್ಟ್ ಮಾಡಿ ಆ ದುಡ್ಡಿನಲ್ಲಿಯೂ ಕೂಡ ನೀವು ಒಂದು ರೂಪಾಯಿ ಕೂಡ ಖರ್ಚು ಮಾಡಲಿಲ್ಲ. ಇದೂ ಕೂಡ ಆ ತರಹ ಆಗಬಾರದು ಎಂದು ಸೆಕ್ಷನ್ 103ರ ಬಗ್ಗೆ ಹೇಳುತ್ತಾ, ಪ್ರಾಪರ್ಟಿಗೆ

ಒಂದು ಸಾವಿರ ರೂಪಾಯಿ ಹಾಕುತ್ತೇವೆ, ವೇಕೆಂಟ್ ಪ್ಲೇಸ್‌ಗೆ ಕೂಡ ಟ್ಯಾಕ್ಸ್ ಹಾಕುತ್ತೇವೆ. ಮನೆ ಕಟ್ಟುವಾಗ ಕಾರ್ಪೋರೇಷನ್ ರೂಲ್ಸ್ ಪ್ರಕಾರ ಸೆಟ್ ಬ್ಯಾಕ್ ಇರಬೇಕಾಗುತ್ತದೆ. ನೀವು ಮನೆಗೂ ಕಂದಾಯ ಹಾಕಿ, ನಿಮ್ಮ ರೂಲ್ಸ್ ರೆಗ್ಯುಲೇಷನ್ ಪ್ರಕಾರ ಸೆಟ್ ಬ್ಯಾಕ್‌ಗೂ ನೀವು ಕಂದಾಯ ಹಾಕಿದರೆ ಹೇಗೆ? ಎಲ್ಲಿ ನೀವು ಸೆಟ್ ಬ್ಯಾಕ್‌ಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಆ ಸೆಟ್ ಬ್ಯಾಕ್‌ಗೆ ಟ್ಯಾಕ್ಸ್ ಹಾಕಬಾರದು. ನೀವು ಈ ಸೆಟ್ ಬ್ಯಾಕ್ ಇರುವವರಿಗೂ ಸಾವಿರ ರೂಪಾಯಿ ಟ್ಯಾಕ್ಸ್ ಹಾಕುತ್ತೇವೆಂದು ಹೇಳಿದ್ದೀರಿ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮೂರನೆಯದಾಗಿ ಸ್ವಯಂಪ್ರೇರಿತ ಟ್ಯಾಕ್ಸ್ ಕಟ್ಟುವುದು ನಿಜವಾಗಿಯೂ ಅದು ಒಳ್ಳೆಯ ಸ್ಕೀಮ್. ಅದು ಎಲ್ಲಾ ನಗರಗಳಲ್ಲೂ ವ್ಯಾಪಿಸಿಲ್ಲ. ಕೇವಲ ಬೆಂಗಳೂರಿನಲ್ಲಿ ಮಾತ್ರ ಅದು ಸೀಮಿತವಾಗಿದೆ. ಇದು ಬೇರೆ ನಗರಗಳಲ್ಲೂ ಚಾಲನೆಗೆ ಬಂದು ಅದನ್ನು ವೈಜ್ಞಾನಿಕವಾಗಿ ಕಾರ್ಯರೂಪಕ್ಕೆ ತರಬೇಕು. ಕೋಲಾರದಲ್ಲಿ ಎರಡು-ಮೂರು ವರ್ಷಗಳ ಹಿಂದೆ ಯಾರೋ ಬಂದು ಟ್ಯಾಕ್ಸ್ ಕಲೆಕ್ಟ್ ಮಾಡಿ, ದುಡ್ಡು ಕೊಟ್ಟವರಿಗೆ ಕಡಿಮೆ ಮಾಡಿದರು, ದುಡ್ಡು ಕೊಡದೆ ಇದ್ದವರಿಗೆ ಜಾಸ್ತಿ ಮಾಡಿದರು. ಈ ತರಹ ಕೆಲವು ಅಧಿಕಾರಿಗಳು ಮಾಡುವುದಕ್ಕೆ ಅವಕಾಶವಿದೆ. ಇದರ ಮೇಲೆ ಕೂಡ ನೀವು ತಡೆ ಹಾಕಬೇಕು. ಕ್ಯಾಪಿಟಲ್ ವ್ಯಾಲ್ಯು ಯಾವ ಆಧಾರದ ಮೇಲೆ ಮಾಡಿದ್ದೀರಿ? ಯಾವ ಯಾರ್ಡ್ ಸ್ಟಿಕ್‌ನಲ್ಲಿ ನೀವು ತೆಗೆದುಕೊಂಡಿದ್ದೀರಿ? ಇದನ್ನೂ ಕೂಡ ನಾವು ಇವತ್ತು ಚಿಂತನೆ ಮಾಡಬೇಕಾಗುತ್ತದೆ. ಕ್ಯಾಪಿಟಲ್ ಅಸೆಸ್‌ಮೆಂಟ್ ಅನ್ನು ಕೂಡ ನೀವು ಪುನರ್ ವಿಮರ್ಶೆ ಮಾಡಬೇಕು. ನಮ್ಮ ಮಾಜಿ ಸಚಿವರಾದ ಎಂ.ಚಂದ್ರಶೇಖರ್ ಮತ್ತು ನಾನು ಇಬ್ಬರೂ ಬೀಜಿಂಗ್‌ಗೆ ಹೋಗಿದ್ದೆವು, ಆ ದೇಶದಲ್ಲಿ 100 ವರ್ಷಗಳ ಚಿಂತನೆ ಇರುತ್ತದೆ. 100 ವರ್ಷದ ನಂತರ ಬೆಂಗಳೂರು ನಗರ ಯಾವ ರೀತಿ ಇರುತ್ತದೆ ಎಂದು ಚಿಂತನೆ ಮಾಡುತ್ತಾರೆ. ನಮ್ಮಲ್ಲಿ ಆ ದಿವಸಕ್ಕೆ ಅದು ಉಪಯೋಗ ಆದರೆ ಸಾಕು. ಎರಡನೆಯ ದಿವಸದ ಬಗ್ಗೆ ಯಾರೂ ಚಿಂತನೆ ಮಾಡುವುದಿಲ್ಲ. ಬೀಜಿಂಗ್‌ನಲ್ಲಿ ಟಾರ್ ರಸ್ತೆಗಳನ್ನು ಮಿಷನ್ ಬಿಟ್ಟು ತೊಳೆದಿದ್ದು ನಾನು ನೋಡಿದ್ದೇನೆ. 10 ವರ್ಷಗಳ ಹಿಂದೆ ನಮಗಿಂತ ಬಡತನದಲ್ಲಿರುವ ದೇಶ ರಸ್ತೆಗಳನ್ನು ಮಿಷನ್ ಉಪಯೋಗಿಸಿ ತೊಳೆಯುವುದು ನೋಡಿದರೆ, ಆಶ್ಚರ್ಯವಾಗುತ್ತದೆ. ರಸ್ತೆಗಳ ಅಭಿವೃದ್ಧಿ ಮಾಡುವುದಕ್ಕೆ ಹಣದ ಅವಶ್ಯಕತೆ ಇದೆ. ಮೊದಲು ಟೋಲ್‌ಗೇಟ್ ಇತ್ತು, ಟೋಲ್‌ಗೇಟ್‌ಗಳಲ್ಲಿ ಒಂದು ಆಣೆ ಟ್ಯಾಕ್ಸ್ ತೆಗೆದುಕೊಳ್ಳುತ್ತಿದ್ದರು.

6.20 ಪಿಎಂ

ನಮಗೆ ಆ ಟೋಲ್ ಗೇಟ್ ಫೀ ಕೊಡಬೇಕೆಂದು ಬೇರೆ ದಾರಿಯಲ್ಲಿ ಹೋಗುತ್ತಿದ್ದೆವು. ನಾವು ಸ್ಕೂಲ್ ಹುಡುಗರು. ಆ ಪರಿಸ್ಥಿತಿ ಇತ್ತು. ಇವತ್ತು ಆ ಟೋಲ್‌ಗೇಟನ್ನೂ ತೆಗೆದರಿ. ಇವೊತ್ತು ಎಲ್ಲೆಲ್ಲಿ ನಗರಸಭೆಗಳಿಗೆ ಆದಾಯ ಬರಬೇಕೋ ಆ ಆದಾಯಗಳನ್ನು ಕಡಿಮೆ ಮಾಡುವಂತಹ ಕೆಲಸಗಳು ಆಗುತ್ತಿದೆ. ಆಮೇಲೆ ಪ್ರಾಪರ್ಟಿ ಟ್ಯಾಕ್ಸ್ ವಿಚಾರ. ಇವತ್ತು ಕೆಲವು ಅಂಗಡಿಗಳನ್ನು ಕಾರ್ಪೋರೇಷನ್‌ಗಳಿಂದ ಹಾಗೂ

ಮುನಿಸಿಪಾಲಿಟಿಗಳಿಂದ ಕಟ್ಟಿದ್ದಾರೆ. ಅದನ್ನು ವಸೂಲಿಯೇ ಮಾಡುವುದಿಲ್ಲ. ಅಲ್ಲಿ ಕಾರ್ಪೊರೇಟರ್‌ಗಳಿಗೋ ಅಥವಾ ಮುನಿಸಿಪಲ್ ಕೌನ್ಸಿಲರ್ ಅವರಿಗೋ ಸಂಬಂಧಿಕರಿಗೆ ಅಂಗಡಿಗಳನ್ನು ಕೊಟ್ಟಿರುತ್ತಾರೆ. ಅದನ್ನು ನೀವು ವಸೂಲಿ ಮಾಡುವಂತಹದ್ದು ಮಾಡಬೇಕು. ಹಿಂದೆ ಸನ್ಮಾನ್ಯ ಭೈರೇಗೌಡರು ಒಂದು ಸಾರಿ ಮಂತ್ರಿ ಆಗಿದ್ದಾಗ ನಗರಸಭೆಗೆ ಹೇಗೆ ದುಡ್ಡು ಬರಬೇಕು ಎಂದರೆ ಅವರು ಒಂದು ರಿವ್ಯೂ ಮಾಡಿ ಹೇಳಿದರು. ಆವೊತ್ತು ಕೋಲಾರ ನಗರಸಭೆಯಿಂದಲೇ ಒಂದು ಕೋಟಿ ರೂಪಾಯಿ ಬರಬೇಕು, ನೀವು ವಸೂಲಿ ಮಾಡಿ ಅಭಿವೃದ್ಧಿ ಮಾಡಿ ಎಂದು ಹೇಳಿದರು. ಅದಾದ ಮೇಲೆ ಅದೇ ತರಹ ವಸೂಲಿ ಮಾಡಿ ಅನೇಕ ಸಿಮೆಂಟ್ ರಸ್ತೆಗಳನ್ನು ನಾನು ಮಾಡಿಸಿದೆ. ಬೇರೆ ಯಾವ ಹಣವನ್ನೂ ಅಲ್ಲಿ ನಾನು ಉಪಯೋಗಿಸಲಿಲ್ಲ. ಅದೇ ಹಣವನ್ನು ವಸೂಲಿ ಮಾಡಿಸಿದೆ. ಹಾಗೆ ಮಾಡಿಸಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ಬಹಳ ಅರ್ಜೆಂಟ್ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಬರೀ ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿದ್ದೇನೆ.

ಅಧ್ಯಕ್ಷರು: ನಿಮಗೆ ಹೆಚ್ಚು ಟೈಮ್ ಕೊಟ್ಟಷ್ಟೂ ನನಗೆ ಕೆಟ್ಟ ಹೆಸರು.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಇಷ್ಟನ್ನು ಗಮನಿಸಿ ನೀವು ಮಾಡಬೇಕು. ಈ ಅಕ್ರಮ ಸಕ್ರಮ ಮಾತ್ರ ಬೇಗನೆ ಮಾಡದೇ ಇದ್ದರೆ ತೊಂದರೆ ಆಗುತ್ತದೆ. ಅದನ್ನು ಬೇಗನೆ ಮಾಡಬೇಕು ಎಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸುಮಾರು ಎರಡು ಗಂಟೆಗಳ ಕಾಲ 8-9 ಜನ ಮಾನ್ಯ ಸದಸ್ಯರುಗಳು ಈ ಒಂದು ಅತ್ಯಂತ ಮುಖ್ಯವಾದಂತಹ ಮಸೂದೆಯ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ನಾನು ಅವರ ಅನುಭವ, ಅನುಭವ ಅಂದರೆ ಕಾರ್ಪೊರೇಷನ್‌ನಲ್ಲಿ ಸದಸ್ಯರಾಗಿ, ಪುರಸಭೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಮತ್ತು ಪುರಸಭೆಯ ಮಂತ್ರಿಯಾಗಿ ಕೆಲಸ ಮಾಡಿದಂತಹ ಶ್ರೀಮಾನ್ ಬಚ್ಚೇಗೌಡರು ಎಲ್ಲರೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಒಂದೆರಡು ಕ್ಲಾರಿಫಿಕೇಷನ್ ಮಾತ್ರ ಕೊಡಬೇಕು ಎಂದು ಹೇಳಿ ನಾನು ಇಲ್ಲಿ ನಿಂತುಕೊಂಡಿದ್ದೇನೆ ಅಷ್ಟೇ. ಅದು ಬಹಳ ಮುಖ್ಯವಾಗಿ ಈ ಇನ್‌ಫ್ರಾಸ್ಟ್ರಕ್ಚರ್ ಸೆಸ್ ವಿಚಾರ. ಇದನ್ನು ಏತಕ್ಕೆ ಹಾಕಬೇಕು. ಮೂಲಭೂತ ಸವಲತ್ತುಗಳು ಏನು ಆಗಬೇಕು. ಇದರಿಂದ ಆಗತಕ್ಕಂಥ ಮತ್ತು ಇಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನು ನಾನು ಸ್ವಲ್ಪ ಅವಲೋಕಿಸಬೇಕು. ಈಗ ಬೆಂಗಳೂರು ನಗರಕ್ಕೆ ಇನ್‌ಫ್ರಾಸ್ಟ್ರಕ್ಚರ್‌ನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಇನ್‌ವೆಸ್ಟ್‌ಮೆಂಟ್ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬೇಕು ಎಂದು ಅಂದಾಜು ಮಾಡಿದ್ದೇವೆ. ಮಾನ್ಯ ಶ್ರೀನಿವಾಸಗೌಡರು ಗಗನ ಕುಸುಮ ಎಂದು ಹೇಳಿದರಲ್ಲಾ ಇದನ್ನು ಮಾಡದೇ ಇದ್ದರೆ ಗಗನ ಕುಸುಮವಾಗಿ ಉಳಿಯುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ನಾನು ಹೇಳಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಡಿ.ಬಿ.ಚಂದ್ರೇಗೌಡ: ಅವರು ಏಕೆ ಹೇಳಿದರು ಎಂದರೆ ಇಷ್ಟೆಲ್ಲಾ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೂ ಸಹ ಆ ಪ್ರಯತ್ನದಲ್ಲಿ ಶಂಕೆ. ನೋಡೋಣ, Let us take a chance.

ಶ್ರೀ ಎಸ್.ಸುರೇಶ್ ಕುಮಾರ್: ನೀವು ಇರುವುದೇ ಅದಕ್ಕೋಸ್ಕರ. ಅದನ್ನು ನೀವು ಏನು ದೊಡ್ಡದಾಗಿ ಹೇಳಿಕೊಂಡರೆ.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಜೋರಾಗಿ ಹೇಳಲಿಲ್ಲ, ಬಹಳ ಸಣ್ಣ ಧ್ವನಿಯಲ್ಲಿ ಹೇಳಿದೆ. ಸಾಯಂಕಾಲ 6.30 ಗಂಟೆ ಆಗಿದೆ, ಜೋರಾದ ಧ್ವನಿ ಎಲ್ಲಿ?

ಶ್ರೀ ಎಸ್.ಸುರೇಶ್ ಕುಮಾರ್: ಬಹಳ ಪ್ರಾಮಾಣಿಕ ಎಂದರೆ ನಿಮ್ಮ ಕೆಲಸವೇ ಅದು.

ಶ್ರೀ ಡಿ.ಬಿ.ಚಂದ್ರೇಗೌಡ: ನನ್ನ ಕೆಲಸವನ್ನು ಜ್ಞಾಪಿಸಿದ್ದಕ್ಕೆ ಧನ್ಯವಾದಗಳು. ಆಮೇಲೆ ಈಗ ಇರತಕ್ಕ ಇಂಟರ್‌ನಲ್ ರಿಸೋರ್ಸ್‌ಸ್ ಇನ್‌ಅಡಿಕ್ವೇಟ್ ಆಗಿದೆ ಎನ್ನತಕ್ಕ ಮಾತನ್ನು ಅವರೇ ಒಪ್ಪುತ್ತಾರೆ. ಈಗ ನಮಗೆ ಏನಾಗಿದೆ ಅಂದರೆ ಪ್ರಾಪರ್ಟಿಯಲ್ಲಿ ಬರುವಂತಹ ರೆವಿನ್ಯೂ ಒಂದೇ ಬಹಳ ದೊಡ್ಡ ಆದಾಯ ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ. ಆ ಕಾರಣ ಇದನ್ನು ಸರಿದೂಗಿಸುವ ಸಲುವಾಗಿ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಅನ್ನು ಹಾಕಿದ್ದೇವೆ. ಮೂಲಭೂತ ಸವಲತ್ತುಗಳು ರಸ್ತೆ ಮಾಡಬೇಕು, ಫ್ಲೈ ಓವರ್ಸ್ ಮಾಡಬೇಕು. ಮಲ್ಟಿ ಸ್ಟೋರಿಡ್ ಕಾರ್ ಪಾರ್ಕಿಂಗ್ ಸಿಸ್ಟಂ ಅನ್ನು ತರಬೇಕು. ಸಬ್ ವೇ ಗಳನ್ನು ಮಾಡಬೇಕು. ಪಾರ್ಕ್ಸ್ ಮಾಡಬೇಕು, ಮಾರ್ಕೆಟ್ಸ್ ಮಾಡಬೇಕು. ಹೀಗೆ ಅನೇಕ ತರಹದ ಇನ್‌ಫ್ರಾಸ್ಟ್ರಕ್ಚರ್‌ಗಳ ಬಗ್ಗೆ ಆಲೋಚನೆಗಳನ್ನು ಮಾಡಿಯೇ ಈ ಒಂದು ಮಸೂದೆಯನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ತೆರಿಗೆ ವಿಚಾರ. ಸುಮಾರು 75 ರಿಂದ 80 ಕೋಟಿ ರೂಪಾಯಿ ಈಗ ಇರತಕ್ಕ ವೇಸ್ಟೇಜನ್ನು ಟ್ರಾನ್ಸ್‌ಪೋರ್ಟ್ ಮಾಡಲಿಕ್ಕೆ ಆಗುತ್ತದೆ. ಸುಮಾರು 2000 ಟನ್ ಏನು ಬೆಂಗಳೂರಿನಲ್ಲಿ ಉತ್ಪತ್ತಿ ಆಗುತ್ತಿದೆ. ಇದನ್ನು ಸಾಗಿಸುವುದಕ್ಕೆ ಒಂದು ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳು ಬೇಕು ಎಂದು ಅಂದಾಜು ಮಾಡಿದ್ದೇವೆ. ಜೊತೆಗೆ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಕೂಡ ಇದೆ. ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟುಬಿಡುತ್ತದೆ. ಅದನ್ನು ಜಾರಿಗೊಳಿಸುವುದಕ್ಕೆ ರಾಜ್ಯ ಸರ್ಕಾರ ಕಾರ್ಪೋರೇಷನ್ ಜೊತೆಗೆ ಕೈಜೋಡಿಸದೇ ಇದ್ದರೆ, ಅದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಶಾಸನದ ಮೂಲಕ ಅದಕ್ಕೆ ಗಟ್ಟಿಗೊಳಿಸದೇ ಇದ್ದರೆ ಅವರು ಹೇಗೆ ತಾನೇ ಜಾರಿ ಮಾಡುತ್ತಾರೆ? ಸುಪ್ರೀಂ ಕೋರ್ಟ್‌ನವರು ಹೇಳುತ್ತಾರೆ. set up a waste Disposal sites ಎಂದು ಹೇಳುತ್ತಾರೆ. ಆದೇಶ ಕೊಡುತ್ತಾರೆ, ಕಸ ಸಂಸ್ಕರಣೆ ಮಾಡಿ ಎಂದು ಹೇಳುತ್ತಾರೆ. ಆಮೇಲೆ set up land to fill the sites ಎಂದು

ಹೇಳುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಅದನ್ನೆಲ್ಲಾ ಕಾರ್ಪೊರೇಷನ್‌ನವರು ಸಹಜವಾಗಿ ಮಾಡಬೇಕಾಗಿತ್ತು. ಅದನ್ನು ಸುಪ್ರೀಂ ಕೋರ್ಟ್‌ನಿಂದ ಹೇಳಿಸಿಕೊಂಡು ಮಾಡಬೇಕಾ? ಗಾರ್ಬೇಜ್ ಡಂಪಿಂಗ್ ಯಾರು ಮಾಡಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಕೇಳಬೇಕಾಗುತ್ತದೆ. ಕಾರ್ಪೊರೇಟರ್ ಆಗಿದ್ದವರು ನೀವು ಹೇಳಬೇಕೇ ಹೊರತು ನನಗೆ ಗೊತ್ತಿಲ್ಲ. ಆದ್ದರಿಂದ ನಿಮಗೆ ತೊಂದರೆ ಇದೆ ಎಂದು ಹೇಳಿ ಸರ್ಕಾರ ನಿಮಗೆ ಬೆಂಬಲ ಕೊಡಬೇಕು, ಕೈಬಲಪಡಿಸಬೇಕು ಎಂದು ಒಂದು ಶಾಸನ ತಂದರೆ ಬೆಂಗಳೂರು ನಗರದಲ್ಲಿರುವ ಜನ ಅದೂ ಮುಂದೆ ಏನಾಗುತ್ತದೋ ಚುನಾವಣೆಗಳ ಮಾತು ಬೇರೆ. ಈ ಪ್ರಶ್ನೆ ಎಲ್ಲಿಗೆ ಬಂದಿದೆ ಎಂದರೆ ನಾವೇನೋ ಒಂದು ದೊಡ್ಡ ಸಾಹಸ ಮಾಡುವುದಕ್ಕೆ ಹೊರಟಿದ್ದೇವೆನೋ ಎಂಬ ಪ್ರಶ್ನೆ ಬಂದಿದೆ. ನಾವು ಸಾಹಸ ಮಾಡುತ್ತಿಲ್ಲ. ನಾವು ನಿಮ್ಮ ಕೈಗಳನ್ನು ಸ್ಟ್ರೆಂಥನ್ ಮಾಡುತ್ತಿದ್ದೇವೆ. ಕಾರ್ಪೊರೇಷನ್ ಕೈಗಳನ್ನು ಬಲಪಡಿಸಲು ಪ್ರಯತ್ನಿಸುತ್ತಿದ್ದೇವೆ. ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಯ ಕೈಗಳನ್ನು ಬಲಪಡಿಸಲು ಪ್ರಯತ್ನಿಸುತ್ತಿದ್ದೇವೆ. ಆಮೇಲೆ ಈ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಏನು ಇದೆ, ಇದು ಆಪ್ಷನಲ್. ತಾವು ಬಹಳ ಹೇಳಿದಿರಿ. ಇದು ಆಫ್ಷನಲ್ ಸ್ಕೀಮ್. ಈ ಆಫ್ಷನಲ್ ಸ್ಕೀಮನ್ನು ಹೈಕೋರ್ಟ್‌ನವರು ಎತ್ತಿ ಹಿಡಿದಿದ್ದಾರೆ. ತಮಗೆ ಅದು ಗೊತ್ತಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನನಗೆ ಅದು ಗೊತ್ತಿಲ್ಲ. ಬೆಂಗಳೂರಿನಲ್ಲಿ ನಾವೇನು ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಮಾಡಿದ್ದೇವೆ, ಕೋರ್ಟ್‌ನವರೂ ಎತ್ತಿ ಹಿಡಿದಿದ್ದಾರೆ. ಸಾರ್ವಜನಿಕರೂ ಸ್ವಾಗತಿಸಿದ್ದಾರೆ. ಈಗ ನಮ್ಮ ಸುರೇಶ್‌ಕುಮಾರ್ ಅವರೂ ಕೂಡ ಸ್ವಾಗತ ಮಾಡಿದರು. ಈಗ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಈ ಅಮೆಂಡ್‌ಮೆಂಟಿನಿಂದ ಆಪ್ಷನ್ ಇದ್ದುದ್ದು ಕಂಪಲ್ಸರಿ ಆಗುತ್ತದೆ. ಅದನ್ನು ನಾವು ಮಾಡಿರುವುದು. ಅದನ್ನು ಬಿಟ್ಟು ಬೇರೆ ಮಾಡಿಲ್ಲ. ಆಮೇಲೆ ಇದಕ್ಕೆ ಬೇಕಾಗಿರತಕ್ಕಂಥ ಗೈಡ್‌ಲೈನ್ಸನ್ನು ಕಾರ್ಪೊರೇಷನ್‌ನವರು ಮುಂದೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ, ಆ ಗೈಡ್‌ಲೈನ್ಸ್ ಅವರು ಕೊಡುತ್ತಾರೆ. ಈ ಆನ್ಯುಯಲ್ ರೇಟಬಲ್ ಟ್ಯಾಕ್ಸ್ ಬಗ್ಗೆ ಅವರು ಹೇಳಿದರು. ಅದಕ್ಕೆ ನಾವು ಬೇಸಿಸ್ ಅನ್ನೂ ಕೂಡ ಕೊಟ್ಟಿದ್ದೇವೆ. ಲೊಕೇಷನ್ ಆಫ್ ದಿ ಬಿಲ್ಡಿಂಗ್ ಏನು? ಕಾಸ್ಟ್ ಆಫ್ ಕನಸ್ಟ್ರಕ್ಷನ್ ಏನು? ಯಾವ ಸ್ಟೇಜ್‌ನಲ್ಲಿ ಆ ಕಟ್ಟಡ ಇದೆ, ಇವುಗಳನ್ನೆಲ್ಲಾ ಗಮನಿಸಿ ತೆರಿಗೆಯನ್ನು ಹಾಕಬೇಕು ಎಂಬುದು. ಈ ಅಮೆಂಡ್‌ಮೆಂಟ್ ಟು ಸೆಕ್ಷನ್ 45(ಬಿ) ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದಿರಿ. ಸ್ಟ್ಯಾಂಪ್ ಆಕ್ಟ್‌ನ ವಿಚಾರ ಪ್ರಸ್ತಾಪಿಸಿದ್ದೀರಿ. ಈ ಸ್ಟ್ಯಾಂಪ್ ಆಕ್ಟ್ ಎನ್ನುವುದು ಬರೀ ಗೈಡೆನ್ಸ್ ಯಾವುದಾದರೂ ಒಂದು ಆಧಾರ ಬೇಕಲ್ಲಾ. ಪ್ರಾಪರ್ಟಿ ಅಸೆಸ್‌ಮೆಂಟ್‌ಗೆ ಏನು ಆಧಾರ? ನಮ್ಮಲ್ಲೂ ಕೂಡ ತೋಟ ಮಾರಾಟ ಆದರೆ, ಗದ್ದೆ ಮಾರಾಟ ಆದರೆ ಆಧಾರ ಏನು? ಆಯಾಯ ತಾಲ್ಲೂಕು ಕಛೇರಿಗಳಲ್ಲಿ ಸ್ಟ್ಯಾಂಪ್ ಆಕ್ಟ್‌ನಲ್ಲಿ ಎಷ್ಟಕ್ಕೆ ಮಾರಾಟ ಆಗಿರುತ್ತದೋ ಅದನ್ನೆ ಬೇಸಿಸ್ ಇಟ್ಟುಕೊಂಡು

ನಾವು ತೆರಿಗೆ ಹಾಕುತ್ತೇವೆ. ಆದರೆ ಪ್ರಾಪರ್ಟಿ ಅಸ್ಸೆಸ್ ಮಾಡುವುದಕ್ಕಾಗಿ ಸೆಕ್ಷನ್ 45(ಬಿ)ಗೆ ಒಂದು ಕ್ಯಾಟಗರಿ ಬೇಕು. ಆ ಕ್ಯಾಟಗರಿಯನ್ನು ನಿರ್ಧಾರ ಮಾಡುವುದಕ್ಕೆ....

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಈಗ ಪ್ರಾಪರ್ಟಿ ಟ್ಯಾಕ್ಸ್, ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಇದ್ದರೂ ಸರ್ಕಾರವೇ ಇಂತಿಷ್ಟು ಜಾಗದಲ್ಲಿ ಇಂತಿಷ್ಟು ಬೆಲೆಗೆ ಬಾಳುತ್ತದೆ ಎಂದು ಹೇಳಿದ್ದೀರಿ. ಈಗ ಆ ಆಧಾರದ ಮೇಲೆ ಮಾಡುತ್ತೀರಾ ಅಥವಾ ಅಲ್ಲಿ ಏನು ಪ್ರಾಪರ್ಟಿ ರಿಜಿಸ್ಟರ್ ಆಗಿದೆ, ಅದನ್ನೇ ಆವರೇಜ್ ಆಗಿ ತೆಗೆದುಕೊಂಡು ಮಾಡುತ್ತೀರಾ?

ಶ್ರೀ ಡಿ.ಬಿ.ಚಂದ್ರೇಗೌಡ: ಇಲ್ಲಿಯತನಕ ಆಯಾಯ ಸ್ಥಳದಲ್ಲಿ ಏನು ರಿಜಿಸ್ಟ್ರೇಷನ್ ಆಗಿದೆ, ಅದೇ ಆಧಾರ. ಜೊತೆಗೆ ಲೋಕೋಪಯೋಗಿ ಇಲಾಖೆಯವರು ಅಸ್ಸೆಸ್ ಮಾಡುತ್ತಾರೆ. ಎಷ್ಟು ವ್ಯಾಲ್ಯೂ ಬಿಲ್ಡಿಂಗ್‌ನದ್ದು ಎಂದು ಲೋಕೋಪಯೋಗಿ ಇಲಾಖೆಯವರು ಅಸ್ಸೆಸ್ ಮಾಡುತ್ತಾರೆ. ಕರೆಂಟ್ಲಿ ಈಗ ಪೆನಾಲ್ಟಿ ವಿಚಾರ. ಈಗಾಗಲೇ ಡಿಲೇಡ್ ಪೇಮೆಂಟ್‌ಗೆ ಐದು ಪರ್ಸೆಂಟ್ ತೆರಿಗೆ ಇದೆ. ಇದು ಬ್ಯಾಂಕ್ ರೇಟಿಗಿಂತ ಸ್ವಲ್ಪ ಕಡಿಮೆ ಇದೆ ಎಂದು ಹೇಳಿ ಈಗ ಪ್ರಪೋಸ್ಡ್ ಎಷ್ಟು ಎಂದರೆ ಎರಡು ಪರ್ಸೆಂಟ್ ಪರ್ ಮಂತ್. ಫೆನಾಲ್ಟಿ ಮತ್ತು ಡೀವಿಯೇಷನ್ ಮಾತ್ರ ಸ್ವಲ್ಪ ಡೆಟೆರೆಂಟ್ ಆಗಿ ಏಕೆ ಮಾಡಿದ್ದೇವೆ ಎಂದರೆ ಇದು ಬೆಂಗಳೂರಿನಲ್ಲಿ ವಿಪರೀತವಾಗಿ ಆಗಿ ಹೋಗಿದೆ. ಡೀವಿಯೇಷನ್ಸ್ ಮತ್ತು ಲೈಸೆನ್ಸ್ ಇಲ್ಲದೇ ಕಟ್ಟಡ ಕಟ್ಟತಕ್ಕದ್ದು ಹಾಗೂ ಇಲ್ಲೀಗಲ್ ಆಗಿ ಕಟ್ಟತಕ್ಕದ್ದು. ಈ ಮೂರೂ ವಿಪರೀತ ಜಾಸ್ತಿ ಆಗಿರುವುದರಿಂದ ಸ್ವಲ್ಪ ಡೆಟರೆಂಟ್ ಆಗಿ ಆ ಶಾಸನವನ್ನು ಮಾಡಿದ್ದೇವೆ.

ಶ್ರೀ ಎಸ್.ಸುರೇಶ್‌ಕುಮಾರ್: ಕಟ್ಟಯ್ಯ ನೀನು ನಾನು ಇದ್ದೇನೆ ಎಂದು ಧೈರ್ಯ ಕೊಟ್ಟವರ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳುವುದಿಲ್ಲವಲ್ಲಾ. ಕನ್ನಡದಲ್ಲಿ ಒಂದು ಗಾದೆ ಇದೆ. 'ಕೊಟ್ಟವನು ಕೋಡಂಗಿ, ಈಸ್ಕೊಂಡವನು ಈರಭದ್ರ' ಎಂದು. ಕಟ್ಟಿಸುವವನು?

ಶ್ರೀ ಡಿ.ಬಿ.ಚಂದ್ರೇಗೌಡ: ಎಷ್ಟು ಸಾಧ್ಯನೋ ಅಷ್ಟು.

ಶ್ರೀ ಎಸ್.ಸುರೇಶ್‌ಕುಮಾರ್: ಹಾಡು ಹಗಲಿನಲ್ಲೇ ಮೇನ್ ರೋಡಿನಲ್ಲಿ ಕಟ್ಟಿಸುತ್ತಲೇ ಇರುತ್ತಾರೆ. ಏನು ರೋಷನ್‌ಬೇಗ್‌ರವರೇ? Is it not a fact? ಹೀಗೆ ಕಟ್ಟಿಸಿದವರ ಮೇಲೆ ನೀವು ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲ. ನಾವು ಯಾರದ್ದಾದರೂ ಸಪೋರ್ಟ್ ತೆಗೆದುಕೊಳ್ಳಬೇಕಲ್ಲಾ. ನಾನು ಈಗ ಫೆನಾಲ್ಟಿ ಬಗ್ಗೆ ಮಾತನಾಡುತ್ತಿಲ್ಲ. It is a good clause ಮಾಡಿ. ಆದರೆ ಕಟ್ಟಿಸುವವರ ಮೇಲೆ ಏನು ಮಾಡುತ್ತೀರಿ? ಸಂಬಂಧಪಟ್ಟ ಜ್ಯೂನಿಯರ್ ಇಂಜಿನಿಯರ್, ಎ.ಇಇ. ಎಕ್ಸಿಕ್ಯೂಟೀವ್ ಇಂಜಿನಿಯರ್. what they are doing? ಅವರ ಮೇಲೆ ಏನಾದರೂ ಒಂದು ಕ್ರಮ ಯೋಚಿಸಿದ್ದೀರಾ?

ಶ್ರೀ ಡಿ.ಬಿ.ಚಂದ್ರೇಗೌಡ: ಆಡಳಿತದ ಮೇಲೆ ಹತೋಟಿ ಇದ್ದರೆ ಅವೆಲ್ಲಾ ಆಗುತ್ತದೆ. ಹತೋಟಿ ತಪ್ಪಿ ಹೋದರೆ ಇವೆಲ್ಲಾ ದೋಷಗಳು ಆಗುತ್ತದೆ. ಹತೋಟಿ ತರುವುದಕ್ಕೆ ಏನು ಬೇಕೋ ಅದನ್ನು ಸರಿಯಾದ ಕಾರ್ಪೊರೇಷನ್‌ನಲ್ಲಿ ಧರ್ಮ ಯುದ್ಧ ಅಲ್ಲ, ಕಾನೂನಿನ ಯುದ್ಧ ನಡೆಯಬೇಕು.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಊರಿಗೆ ಹೋಗಬೇಕಾದರೆ ರಾಮಮೂರ್ತಿ ನಗರದ ಮೂಲಕ ಹೋಗುತ್ತಿದ್ದೆ. ಮೇನ್ ರೋಡ್ ಅನ್‌ಫಾಲ್ಟ್ ಮಾಡಿ ಎರಡು ದಿನವಾಗಿಲ್ಲ. ಇವೊತ್ತು ನಾನು ಹೋಗಿಬಂದೆ, ಇವತ್ತಾಗಲೆ ಅದು ಕಿತ್ತುಹೋಗಿದೆ. ಇದು ಇವರ ಆಡಳಿತ! ಇವರದ್ದು ಅವರ ಮೇಲೆ ಬಹಳ ಹಿಡಿತ ಇದೆ. ಹೆಚ್ಚು ಹಿಡಿತ ಇದೆ, ಎಲ್ಲಾ ಇದೆ. ತಾವೂ ಕೂಡ ದಯಮಾಡಿ ಈ ಸಾರಿ ಹೋಗುವಾಗ ಆ ರಸ್ತೆ ನೋಡಿಕೊಂಡು ಹೋಗಬೇಕು. ಎರಡು ದಿವಸವಾಗಿದೆ ಟಾರು ಮಾಡಿ, ಎರಡು ದಿವಸದಲ್ಲಿ ಆ ರಸ್ತೆ ಹಾಳಾಗಿ ಹೋಗುತ್ತದೆ. ಆಡಳಿತದ ಮೇಲೆ ಹಿಡಿತ ಇದೆ ಎಂದು ಹೇಳುತ್ತಾರೆ. ಏನು ಹಿಡಿತ ಸ್ವಾಮಿ ಇದು? ಯಾವ ಹಿಡಿತ ನಿಮ್ಮದು?

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಹೇಳುವುದು ಕಾರ್ಪೊರೇಷನ್ನಿನ ಆಡಳಿತದ ಮೇಲೆ. ನೀವು ಹೇಳುವುದು ಜನರಲ್ ಪ್ರಾಬ್ಲಂ. ನೀವು ಮಂತ್ರಿಯಾಗಿದ್ದಾಗ ಏನಾಗಿತ್ತು ಎಂದು ಪಟ್ಟಿ ಮಾಡಿ ಕೊಡುತ್ತೇನೆ. ಈಗ ವಿರೋಧ ಪಕ್ಷದಲ್ಲಿ ಕುಳಿತಿದ್ದೀರಿ ಎಂದು ಹೇಳುವುದು ಅಲ್ಲ.

ಶ್ರೀ ಸಿ.ಬೈರೇಗೌಡ: ಆ ರೀತಿ ಯಾರು ಮಾಡಿದ್ದಾರೆ ಅವರನ್ನು ನಾವು ಕಂಬಿ ಎಣಿಸುವುದಕ್ಕೆ ಕಳುಹಿಸಿದ್ದೇವೆ. ಅದನ್ನು ತಿಳಿದುಕೊಳ್ಳಿರಿ. ಆ ರೀತಿ ನೀವು ಒಬ್ಬರನ್ನೂ ಮಾಡುವುದಕ್ಕೆ ಆಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಎಷ್ಟು ಜನರಿಗೆ ಹಾಗೆ ಮಾಡಿಸಿದ್ದೀರಿ ಎಂಬುದಕ್ಕೆ ಪಟ್ಟಿಯಿದ್ದರೆ ಕೊಡಿ.

ಶ್ರೀ ಸಿ.ಬೈರೇಗೌಡ: ಅವುಗಳಿಗೆಲ್ಲಾ ಈಗ ನೀವು 'ಬಿ' ರಿಪೋರ್ಟ್ ಹಾಕಿಸುತ್ತಿದ್ದೀರಿ.

ಶ್ರೀ ಡಿ.ಬಿ.ಚಂದ್ರೇಗೌಡ: ಬೈರೇಗೌಡರೇ, ನಿಮ್ಮ ಹಾಗೆ ಎಲ್ಲರೂ ಇರಬೇಕೆಂದರೆ ಆಗುವುದಿಲ್ಲ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದಂತಹ ವಿಷಯ ಬಹಳ ಮುಖ್ಯವಾದುದು. ಜೊತೆಗೆ ತಾವು ತಂದಿರತಕ್ಕಂಥಾದ್ದು, ಬಹಳ ವರ್ಷಗಳಿಂದ ಯಾರು ಅನ್ಯಾಯ ಮಾಡಿದ್ದಾರೆ, ಅವರು ಕಂದಾಯ ಕಟ್ಟದೆ ಇದ್ದಾರೆನ್ನುವಂಥಾದ್ದು ಸರಿ. ಅವರು ಪೆನಾಲ್ಟಿ ಹಾಕುತ್ತಿರುವಂತಾದ್ದು ಸರಿ. ಆದರೆ ದಯಮಾಡಿ ಇದನ್ನು ಇದೇ ಕ್ಲಾಜ್‌ನ ಅಡಿಯಲ್ಲಿ ನಿರಂತರವಾಗಿ ದಶಕಗಳ ಕಾಲ

ಹೋಗಬಾರದು. ಹೇಗಿದ್ದರೂ ನೀವು ಪ್ರಾಪರ್ಟಿ ಪುಸ್ತಕ ಬರೆಯುತ್ತಿದ್ದೀರಿ, ಅಲ್ಲಿಯವರೆಗೂ ಒನ್ ಟೈಂ ಮೆಜರ್ ಎಂದು ಮಾಡಿ, ಎಷ್ಟು ಈ ರೀತಿ ಅಕ್ರಮಗಳಾಗಿವೆ ಅದನ್ನು ರೆಗ್ಯುಲರೈಜ್ ಮಾಡಿಬಿಡಿ. ಮುಂದೆ ಆಗಿರುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಮಾಡಿಕೊಡಬೇಡಿ. ಪೆನಾಲ್ಟಿ ಕ್ಲಾಜ್ ಏನಿದೆ, ಇದನ್ನೆ ಒಂದು ಷೆಲ್ಟರ್‌ನ್ನಾಗಿ ಮಾಡಿಕೊಳ್ಳಬಾರದು. ಒನ್ ಟೈಂ ಮೆಜರ್ ಎಂದು ಮಾಡುವುದು ಸೂಕ್ತವೆಂದು ಕಾಣುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಬೈರೇಗೌಡರು ಹೇಳಿದ ಹಾಗೆ ಅಪರಾಧಗಳು ಆಗಿಲ್ಲವೆಂದು ನಾನು ಹೇಳುವುದಿಲ್ಲ. ಆಗಲೇ ಇಲ್ಲವೆಂದು ಹೇಳಿ ಯಾರನ್ನು ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಮಾತಿನಲ್ಲಿ ಹೇಳುತ್ತೇನೆ, ನಿಮ್ಮ ಹಾಗೆ ಎಲ್ಲರೂ ದೇಶದ ಬಗ್ಗೆ ಒಳ್ಳೆಯದಾಗಬೇಕೆಂದು ಆಲೋಚನೆ ಮಾಡಿಕೊಂಡಿರುತ್ತಾರೆ. ಅದಕ್ಕೆ ಶಾಸನಗಳು ಇವೆ. ಆ ಶಾಸನಗಳನ್ನು ಜಾರಿ ಕೊಡತಕ್ಕಂಥ ಕಾಲದಲ್ಲಿ ಅಧಿಕಾರಿಗಳ ಮೇಲೆ ಚುನಾಯಿತ ಪ್ರತಿನಿಧಿಗಳು ಸ್ವಲ್ಪಮಟ್ಟಿಗೆ ಈ ನಗರದ ಒಳ್ಳೆಯದನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ಕೊಟ್ಟರೆ ಏನೂ ತೊಂದರೆಯಾಗುವುದಿಲ್ಲ. ಆದರೆ ಕಾರ್ಪೋರೇಷನ್‌ನಲ್ಲಿ ಇದು ಯಾವಾಗ ಬರುತ್ತದೋ, ಅದನ್ನು ಭಗವಂತನೆ ಕರುಣಿಸಬೇಕು. ಆ ದಿವಸ ನೋಡೋಣ. Helpless, I do accept that. ಈ ಇನ್‌ಫ್ರಾಸ್ಟ್ರಕ್ಚರ್ ಸೆಸ್ ವಸೂಲು ಮಾಡುವುದಕ್ಕೆ we are planning to take the services of the Insurance companies. ವಾಹನಗಳ ಮೇಲೆ ಹಾಕಿರತಕ್ಕಂಥ ತೆರಿಗೆಗಳು. ಈಗಾಗಲೇ ಹೈದಾರಾಬಾದ್‌ನಲ್ಲಿ, ಮುಂಬಯಿನಲ್ಲಿ ಈ ಇನ್‌ಫ್ರಾಸ್ಟ್ರಕ್ಚರ್ ಅನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಸುಮಾರು 20 ರಿಂದ 30 ಕೋಟಿ ರೂಪಾಯಿಗಳವರೆಗೆ ಬರಬಹುದೆಂದು ನಾವು ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಡಿಪ್ರೀಸಿಯೇಷನ್ ಬಗ್ಗೆ ಸೆಕ್ಷನ್ 44(ಎ) ಪ್ರಕಾರ ಏಜ್ ಆಫ್ ದಿ ಬಿಲ್ಡಿಂಗ್, ಡಿಪ್ರೀಸಿಯೇಷನ್ ಎಂದರೆ ಏನು ಮಾಡುತ್ತೀರಿ ಎಂದು ಕೇಳಿದ್ದಿರಿ, ಅನೆಕ್ಸರ್-3ರಲ್ಲಿ ಒಂದು ಮಾರ್ಗಸೂಚಿ ಇದೆ. ಪ್ರಾಪರ್ಟಿ ಟ್ಯಾಕ್ಸ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಒಂದು ಮಾರ್ಗಸೂಚಿಯನ್ನು ಕೊಟ್ಟಿದ್ದೇವೆ. ಆ ಮಾರ್ಗ ಸೂಚಿಯ ಪ್ರಕಾರ ಐದು ವರ್ಷಗಳಿಗೆ ಹತ್ತು ಪರ್ಸೆಂಟ್ ಕಡಿಮೆ ಮಾಡಬಹುದು. ಯಾವ ಕಟ್ಟಡ ಐದು ವರ್ಷದ ಮೇಲೆ ಆಗಿದೆ ಅದಕ್ಕೆ ಹದಿನೈದು ಪರ್ಸೆಂಟ್, ಹತ್ತು ವರ್ಷವಾಗಿದ್ದರೆ ಇಪ್ಪತ್ತು ಪರ್ಸೆಂಟ್ ಹದಿನೈದು ವರ್ಷವಾಗಿದ್ದರೆ ಇಪ್ಪತ್ತೈದು ಪರ್ಸೆಂಟ್, ಹೀಗೆ ಐವತ್ತು ವರ್ಷ ಧಾಟಿರತಕ್ಕಂಥ ಕಟ್ಟಡಗಳಿಗೆ ಎಪ್ಪತ್ತು ಪರ್ಸೆಂಟ್‌ಗೆ ಡಿಪ್ರಿಸಿಯೇಷನ್ ಕಳೆಯುವುದಕ್ಕೆ ಇದರಲ್ಲಿ ಅವಕಾಶ ಇದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಆ ಗೈಡ್‌ಲೈನ್ಸ್ ಇದಕ್ಕೆ ಅಪ್ಲೈ ಆಗುತ್ತದೆಯಾದರೆ ಸರಿ.

ಶ್ರೀ ಡಿ.ಬಿ.ಚಂದ್ರೇಗೌಡ: ಇವತ್ತು ತಂದಿರತಕ್ಕಂಥ ಶಾಸನಕ್ಕೂ ಅದು ಅಪ್ಲೈ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ರಾಮದಾಸ್: 'ಸಾಧ್ಯವಾದಷ್ಟು' ಎಂದು ಇರುವುದನ್ನು ತೆಗೆದುಬಿಡಿ. Let it be mandatory.

SRI D.B.CHANDREGOWDA: The depreciation of the building shall be as referred to in Sub-section(2) of Section 109 of KMC Act 1976. It is a mandatory provision. ಈಗ ಐದಾರು ಜೋನ್ ಎಂದು ಏನು ಮಾಡಿದ್ದೇವೆ, ಆಯಾಯ ಜೋನ್ ವ್ಯಾಲ್ಯೂಯೇಷನ್ ಗಮನದಲ್ಲಿಟ್ಟುಕೊಂಡೇ ಮಾಡಿದ್ದೇವೆ. ಅದರಲ್ಲಿ ಮಾರ್ಪಾಟು ಮಾಡುವುದಕ್ಕೆ ಅವಕಾಶ ಇದೆ ಎಂದು ಕಂಡರೆ ತಮ್ಮ ಸಲಹೆಯನ್ನು ನಾವು ಕೇಳುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸಚಿವರೇ, ಕ್ಯಾಪಿಟಲ್ ವ್ಯಾಲ್ಯೂ ಎಂದು ಬಂದ ಮೇಲೆ ಜೋನ್ಸ್‌ದ್ದು ಅಷ್ಟು ಆಗುವುದಿಲ್ಲ. ಅಲ್ಲಿ ಜೋನ್ಸ್ ಅವಶ್ಯಕತೆ ಬರುವುದಿಲ್ಲ. ದಯಪಟ್ಟು ಅದನ್ನು ರಕ್ಷಿಷ್ಟೆ ಮಾಡಿ. ಕ್ಯಾಪಿಟಲ್ ವ್ಯಾಲ್ಯೂ ಬಂದ ಮೇಲೆ ಬಿಲ್ಡಿಂಗ್‌ನ ಜೋನ್ಸ್ ಇಲ್ಲಿ ಬರುವುದಿಲ್ಲ. ಜೋನ್ ರೆಗ್ಯುಲೇಷನ್ ಬರುವುದಿಲ್ಲ. Even depreciation also, you have not incorporated in the amendment of this bill. You are just mentioning in the book self-assessment is optional. ತಾವೇನು ಹೇಳುತ್ತೀರಿ ಹತ್ತು ಅಥವಾ ಐದು ವರ್ಷ ಏಜ್ ಆಫ್ ಬಿಲ್ಡಿಂಗ್, ಅದನ್ನು ಮೂಲ ತಿದ್ದುಪಡಿಯಲ್ಲಿ ತಂದಿಲ್ಲ.

SRI D.B.CHANDRE GOWDA: This option will be made use of in the Act. I am making a positive statement as a Minister with responsibility. Nothing to be worried about.

ಶ್ರೀ ಎ.ರಾಮದಾಸ್: ತಾವು ಇದನ್ನು ರೆಂಟ್ ಆಕ್ಟ್ ಅಡಿಯಿಂದ ತೆಗೆದು ಸ್ಟ್ಯಾಂಪ್ ಆಕ್ಟ್‌ಗೆ ಕೊಟ್ಟಿದ್ದೀರಿ. ಪ್ರತಿವರ್ಷ ತಾವು ಹೇಳಿದ ಹಾಗೆ 1957ನೇ ಸ್ಟ್ಯಾಂಪ್ ಆಕ್ಟ್ ಸೆಕ್ಷನ್ 45(ಬಿ) ಪ್ರಕಾರದಲ್ಲಿ ಪ್ರತಿವರ್ಷ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆ ಅಸೆಸ್‌ಮೆಂಟ್ ಯಾವ ರಸ್ತೆಗೆ, ಎಷ್ಟು ವ್ಯಾಲ್ಯೂಯೇಷನ್ ಇದೆ ಎಂದು ಕೊಡುತ್ತಾರೆ. ಹಾಗಾಗಿ ನೀವು ಎ, ಬಿ, ಸಿ ಹುಡುಕಿ ಮಾಡುವ ಅವಶ್ಯಕತೆ ಇಲ್ಲ. ಈ ಸ್ಟ್ಯಾಂಪ್ ಆಕ್ಟ್ ಅಡಿಯಲ್ಲಿ ತಂದ ಮೇಲೆ ಇದು ಬೇಡ ಇದನ್ನು ತೆಗೆದುಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಒಂದು ಸಾರಿ ಅಸೆಸ್‌ಮೆಂಟ್ ಆಗಿಬಿಟ್ಟರೆ ಈ ಪ್ರೊಸೆಸ್ ಆಫ್ ಅಸೆಸ್‌ಮೆಂಟ್ ಕಂಪ್ಲೀಟ್ ಆದ ಮೇಲೆ ಜೋನಲ್ ಸಿಸ್ಟಂನ ಪ್ರಶ್ನೆ ಬರುವುದಿಲ್ಲ. ಅದಕ್ಕೆ ನಾನು ಒಟ್ಟಿಗೆ ಹೇಳುತ್ತಿದ್ದೇನೆ, ಜೋನ್ ಅವಶ್ಯಕತೆ ಬರುವುದಿಲ್ಲ. ಆದರೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನೀವು ಮಾಗ್ಸಿಮಂ ಒಂದು ಸಾವಿರ ರೂಪಾಯಿ ಕೇಳುತ್ತೀರಲ್ಲಾ that will be lieved only to star hotels and industrialists.

ಶ್ರೀ ಎಸ್.ಸುರೇಶ್ ಕುಮಾರ್: ನಿಮ್ಮ ಹತ್ತಿರ ಬೇರೆ ಕಾಪಿ ಏನಾದರೂ ಕೊಟ್ಟಿದ್ದಾರೋ ಗೊತ್ತಿಲ್ಲ. ನನಗೆ ಕೊಟ್ಟಿರುವುದರಲ್ಲಿ it is mentioned "every owner or occupier of buildings or lands..". Every owner is not a owner of a star hotel.

SRI D.B.CHANDREGOWDA: That can be done in the rules.

ಶ್ರೀ ಎಸ್.ಸುರೇಶ್‌ಕುಮಾರ್: ಹಾಗಾದರೆ ಆ ಅಂಬ್ಬಿಗ್ಯೂಟಿ ಏತಕ್ಕಾಗಿ when you are very clear?

SRI D.B.CHANDREGOWDA: But i will assure the House and the hon.member concerned that we will see that it is incorporated in the rules.

ಶ್ರೀ ಎಸ್.ಸುರೇಶ್‌ಕುಮಾರ್: ಹಾಗಾದರೆ ಇಲ್ಲಿ ಆ್ಯಡ್ ಮಾಡಿ ಅದನ್ನು.

ಶ್ರೀ ಎ.ರಾಮದಾಸ್: ನಾನು ಒಂದು ವಿಚಾರವನ್ನು ನಿಮ್ಮ ಮುಂದೆ ಇಟ್ಟೆ. ಎಲ್ಲಿ ಹೆಲ್ತ್ ಲೈಸೆನ್ಸ್ ಹೊಂದಿರುವವರು ಎಂದರೆ ಟ್ರೇಡರ್ಸ್, ಹೋಟೇಲ್‌ಗಳು ಇವು ಬಂದು ಬಿಡುತ್ತವೆ. ಯಾರ್‍ಯಾರು ಹೆಲ್ತ್ ಲೈಸೆನ್ಸ್ ಹೊಂದಿರುತ್ತಾರೆ ಅವರ ಮೇಲೆ ಅದನ್ನು ಹಾಕುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಅದನ್ನು ರೂಲ್ಸ್‌ನಲ್ಲಿ ಫ್ರೇಮ್ ಮಾಡಬಹುದಲ್ಲಾ.

ಶ್ರೀ ಎ.ರಾಮದಾಸ್: ಆ ಒಂದು ಪದ ಆಕ್ಟ್‌ನಲ್ಲಿ ತಂದರೆ ಮುಗಿದು ಹೋಗುತ್ತದೆ, ತೊಂದರೆ ಏನೂ ಇಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಅದನ್ನು ಚೇಂಜ್ ಮಾಡುತ್ತೇವೆಂದು ಹೇಳಿಬಿಡಿ.

SRI D.B.CHANDREGOWDA: I assure the hon.member concerned that your suggestions will be incorporated in the rules. ತಮ್ಮ ಸಲಹೆಯನ್ನು ರೂಲ್ಸ್‌ನಲ್ಲಿ ಮಾಡುವುದಕ್ಕೆ ಅಧಿಕಾರವಿದೆ.

ಶ್ರೀ ಬಿ.ಸೋಮಶೇಖರ್: ರೂಲ್ಸ್‌ನಲ್ಲಿ ತಿದ್ದುಪಡಿ ಮಾಡುವುದಕ್ಕೆ ಮಂತ್ರಿಗಳಿಗೆ ಅಧಿಕಾರ ಇದೆ. ಅವರು ಯಾವಾಗಲೂ ಮಾಡಬಹುದು. ಅದು ನಮಗೆ ಗೊತ್ತಾಗುವುದಿಲ್ಲ. ಅದನ್ನು ಆಕ್ಟ್‌ನಲ್ಲಿ ತಂದರೆ ನೀವು ಬದಲಾವಣೆ ಮಾಡಬೇಕಾದರೆ ಅದು ಹೌಸ್‌ಗೆ ಬರಬೇಕಾಗುತ್ತದೆ. ಅದಕ್ಕೆ ಆಕ್ಟ್‌ನಲ್ಲಿ ತನ್ನಿ ಎಂದು ಹೇಳುವುದು. ನೀವು ಹೇಳಿದರೆ ಅದನ್ನು ಇಷ್ಯೂ ಮಾಡುತ್ತಾರೆ.

SRI D.B.CHANDRE GOWDA: On every house owner, business, property, star hotels etc. annual rates, they go on varying. ಕಾರ್ಪೊರೇಷನ್ ಇದನ್ನು ಕೌನ್ಸಿಲ್‌ನಲ್ಲಿ ಕುಳಿತುಕೊಂಡು ಡಿಸೈಡ್ ಮಾಡುವುದಕ್ಕೆ ಅವಕಾಶ ಇದೆ. ಒಂದೊಂದು ಕಡೆ ಒಂದೊಂದಾಗುತ್ತದೆ. ಮೈಸೂರು ನಗರದಲ್ಲಿ ಒಂದಾಗುತ್ತದೆ. ಗುಲ್ಬರ್ಗ ನಗರದಲ್ಲಿ ಒಂದು ರೀತಿಯಾಗುತ್ತದೆ.

SRI B.N.BACHE GOWDA: The statute will have no effect according to you. Upper limit you are suggesting Rs.1000/- but the Council may charge Rs.100. Council is authorised to take decision and we are abiding. The bill will have no effect on the resolution.

SRI D.B.CHANDRE GOWDA: Your point is well taken. ನಮ್ಮ ಸ್ನೇಹಿತರು ಬೆಂಗಳೂರಿನ ಪ್ರಾಪರ್ಟಿ ಟ್ಯಾಕ್ಸ್ 120 ಕೋಟಿ ರೂಪಾಯಿಗಳಿದೆ ಎಂದು ಹೇಳುತ್ತಿದ್ದರು, ಇದು 160ಕೋಟಿ ರೂಪಾಯಿ ಆಗಿದೆ. This is after self-assessment is introduced. ಈ ರಿವಿಜನ್ 25 ವರ್ಷಗಳ ನಂತರ ಆಗುತ್ತಿದೆ. ಆದುದರಿಂದ ಸ್ಯಾಲರಿ, ಪೆನ್‌ಷನ್ ಸೇರಿ 170 ಕೋಟಿ ರೂಪಾಯಿಗಳು ಕಾರ್ಪೊರೇಷನ್‌ಗೆ ಖರ್ಚಾಗುತ್ತಿದೆ. So, Corporation requires after some financial support. That is what we have given in to Bill.

SRI B.N.BACHE GOWDA: The Corporation's budget is Rs.700 crores, whereas the revenue earned is only Rs.160 crores!

SRI D.B.CHANDRE GOWDA: Total budget is different from the collection of house tax. ನಮ್ಮ ಸ್ನೇಹಿತರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ನನಗೆ ಎಷ್ಟು ಮಾಹಿತಿಗಳು ಸಿಕ್ಕಿದೆಯೋ, ಅಷ್ಟಕ್ಕೆ ನಾನು ವಿವರಣೆಯನ್ನು ಕೊಟ್ಟಿದ್ದೇನೆ. ತಾವು ಈ ಬಿಲ್ ಅನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ನಾನು ಹೇಳುವಂತಹ ವಿಚಾರ ಎಂದರೆ ಮುನಿಸಿಪಾಲಿಟಿಯಲ್ಲಿ ಪ್ರತಿ ವರ್ಷ ರಿಟರ್ನ್ಸ್ ಫೈಲ್ ಮಾಡುವಂಥಾದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಬಹಳ ಜನರಿಗೆ ಇದರಿಂದ ತೊಂದರೆಯಾಗುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್: ಅದನ್ನು ಅವರು ರೂಲ್ಸ್‌ನಲ್ಲಿ ಮಾಡುತ್ತಾರೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಆಕ್ಟ್‌ನಲ್ಲಿ ಪ್ರತಿ ವರ್ಷವೆಂದು ಇದ್ದ ಮೇಲೆ ರೂಲ್ಸ್‌ನಲ್ಲಿ

ಹೇಗೆ ಮಾಡುವುದಕ್ಕೆ ಆಗುತ್ತದೆ?

ಶ್ರೀ ಡಿ.ಬಿ.ಚಂದ್ರೇಗೌಡ: ಇದು ಏನೂ ನಗುವಂತಹ ವಿಚಾರವಲ್ಲ, ತಾವು ಏನು ಈ ರೀತಿಯಾಗಿ ನಗುತ್ತಿದ್ದೀರಿ?

ಶ್ರೀ ಎಸ್.ಸುರೇಶ್‌ಕುಮಾರ್: ತಾವು ಕೋಪ ಮಾಡಿಕೊಳ್ಳುವಂತಹ ವಿಚಾರವೂ ಅಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಇಲ್ಲಿ ಏನಾಗಿದೆ, ತಾವು ಏಕೆ ಈ ರೀತಿಯಾಗಿ ನಗುತ್ತೀರಿ? What is wrong? Whatever cannot be brought within the purview of law, this matter shall be taken care of by the rules. ಇದು ನಾವು ಮಾಡಿಕೊಂಡು ಬಂದಿರತಕ್ಕಂಥಾದ್ದು.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಈ ಬಿಲ್ ಬಗ್ಗೆ ಸುಮಾರು ಎರಡೂವರೆ ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೇ, ಇಲ್ಲಿ ಆಕ್ಟ್‌ನಲ್ಲಿ ಒಂದು ವರ್ಷವೆಂದು ಇದ್ದ ಮೇಲೆ ನಾವು ಅದನ್ನು ರೂಲ್ಸ್‌ನಲ್ಲಿ ಐದು ವರ್ಷಗಳೆಂದು ಮಾಡುವುದಕ್ಕೆ ಆಗುವುದಿಲ್ಲ. ನಾವು ನಿಮ್ಮ ಅನುಭವದ ಬಗ್ಗೆ ಹೇಳುವುದಿಲ್ಲ, ನಾವು ಹೇಳುವಂಥಾದ್ದು ಇಲ್ಲಿ ನೀವು ಪ್ರತಿ ವರ್ಷ ರಿಟರ್ನ್ಸ್ ಫೈಲ್ ಮಾಡಬೇಕೆಂದು ಮಾಡಿ, ರೂಲ್ಸ್‌ನಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲವೆಂದು ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ತಾವು ಇದನ್ನು ಐದು ವರ್ಷವೆಂದು ಮಾಡಿ, ನಾವು ಟ್ಯಾಕ್ಸ್ ಕಲೆಕ್ಷನ್ ಮಾಡುತ್ತೇವೆ, ಇಲ್ಲದಿದ್ದರೆ ಹಳ್ಳಿ ಜನರು ಪ್ರತಿ ವರ್ಷ ಟ್ಯಾಕ್ಸ್ ರಿಟರ್ನ್ಸ್ ಫೈಲ್ ಮಾಡುವುದಕ್ಕಾಗುತ್ತದೆಯೇ? ಬರೀ ಇದೇ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ನೀವು ರೂಲ್ಸ್‌ನಲ್ಲಿ ಒಂದು ವರ್ಷದೊಳಗೆ ಯಾವ ರೀತಿಯಾಗಿ ಕಲೆಕ್ಟ್ ಮಾಡಬಹುದೆಂದು ನೀವೇ ರೂಲ್ಸ್ ಮಾಡಬಹುದೇ ಹೊರತು ಆ ಪಿರೀಯಡ್ ಅನ್ನು ಅಮೆಂಡ್ ಮಾಡುವುದಕ್ಕಾಗುವುದಿಲ್ಲ. How can you amend the Act by virtue of rules? ತಾವು ಒಂದು ವರ್ಷದೊಳಗೆ ಯಾವ ಯಾವ ರೀತಿಯಾಗಿ ಟ್ಯಾಕ್ಸ್ ಕಲೆಕ್ಟ್ ಮಾಡಬಹುದೆಂಬ ವಿಧಾನಗಳನ್ನು ರೂಲ್ಸ್‌ನಲ್ಲಿ ತರಬಹುದು. ಆದರೆ ಒಂದು ವರ್ಷಎಂದು ಮಾಡಿ ಐದು ವರ್ಷಕ್ಕೆ ಎಂದು ಕಾನೂನು ತರುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಈಗ ಇನ್‌ಕಂ ಟ್ಯಾಕ್ಸ್ ಎಂದು ಪ್ರತಿ ವರ್ಷ ಕೊಡುವುದಿಲ್ಲವೇ? ನೀವು ಲೋಕಾಯುಕ್ತಕ್ಕೆ ಪ್ರತಿ ವರ್ಷ ಕಳುಹಿಸಿ ಕೊಡುವುದಿಲ್ಲವೇ. Corporation is also same.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ನಾವು ಕೊಡುತ್ತೇವೆ, ಆದರೆ ಜನರು ಪ್ರತಿ ವರ್ಷ ಕೊಡುವುದಕ್ಕೆ ಕಷ್ಟವಾಗುತ್ತದೆ.

(ಗೊಂದಲ)

ಅಧ್ಯಕ್ಷರು: ತಾವೆಲ್ಲರೂ ಏನೇನು ಸಜೇಷನ್ ಕೊಟ್ಟದ್ದೀರಿ, ಯಾವ ಯಾವ ಸಜೇಷನ್‌ಗಳನ್ನು ಕೊಟ್ಟದ್ದೀರಿ ಅದನ್ನು ಮುಂದಿನ ಸಲ ತರುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾವು ಈ ಬಿಲ್‌ಗೆ ಸಂಬಂಧಪಟ್ಟ ಹಾಗೆ ಸುಮಾರು ಎರಡೂವರೆ ಗಂಟೆಗಳು ಮಾತನಾಡಿದ್ದೇನೆ. ನೀವು ಹೇಳಿದ ಹಾಗೆ ಸುಮಾರು ಎಂಟು ಒಂಬತ್ತು ಜನ ಸದಸ್ಯರು ಮಾತನಾಡಿದ್ದಾರೆ.

SRI K.JAYAPRAKASH HEGDE: There is a difference between filling of returns before the Lokayuktha and Income-Tax returns. ಪ್ರತಿ ವರ್ಷ ಟ್ಯಾಕ್ಸ್ ಜಾಸ್ತಿಯಾಗದೇ ಇರುವಾಗ, ಪ್ರತಿ ವರ್ಷ ರಿಟರ್ನ್ಸ್ ಏಕೆ ಫೈಲ್ ಮಾಡಬೇಕು ಪ್ರತಿವರ್ಷ ನಮ್ಮ ಇನ್‌ಕಂ ವೇರಿಯಾಗುತ್ತದೆ. ನಮ್ಮ ಪ್ರಾಪರ್ಟಿ ಜಾಸ್ತಿಯಾಗಬಹುದು, ಕಡಿಮೆಯಾಗಬಹುದು So, We need to file income-tax returns every year and before Lokayuktha every year, but, every year House tax ಜಾಸ್ತಿಯಾಗದೇ ಇದ್ದಾಗ why should a person to file the return? ಈಗ ಅದನ್ನೇ ರಿಟರ್ನ್ಸ್ ಫೈಲ್ ಮಾಡುವುದು.

ಶ್ರೀ ಡಿ.ಬಿ.ಚಂದ್ರೇಗೌಡ: ಪ್ರತಿವರ್ಷ ರಿಟರ್ನ್ಸ್ ಫೈಲ್ ಕಳುಹಿಸಿ ಅದರ ಜೊತೆಗೆ ನಿಮ್ಮ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಲ್ಲಿ ಏನು ಒಪ್ಪಿಕೊಂಡಿದ್ದೀರೋ. ಅದನ್ನು ಆ ರಿಟರ್ನ್ಸ್ ಜೊತೆಗೆ ಹಾಕಿ ಕಳುಹಿಸಿಕೊಟ್ಟರೆ both of it will be accepted without any problem.

ಶ್ರೀ ಬಿ.ಸೋಮಶೇಖರ್: ನೀವು ಯಾವಾಗ ಈ ಟ್ಯಾಕ್ಸ್ ಅನ್ನು ಬದಲಾವಣೆ ಮಾಡುತ್ತೀರಿ, ಆಗ ರಿಟರ್ನ್ಸ್ ಫೈಲ್ ಮಾಡಬಹುದೆಂದು ಮಾಡಿ, ಅದು ಆಗ ಅನುಕೂಲವಾಗುತ್ತದೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾವು ಸುಮಾರು ಎರಡೂವರೆ ಗಂಟೆಗಳ ಕಾಲ ಈ ಬಿಲ್ ಬಗ್ಗೆ ಚರ್ಚೆ ಮಾಡಿದ್ದೇವೆ. (ನಾನು ಹೇಳುವಂಥಾದ್ದು ಏನೆಂದರೆ ನಾವೆಲ್ಲರೂ ಮಾನ್ಯ ಕೆ.ಹೆಚ್.ರಂಗನಾಥ್‌ರವರ ಶಿಷ್ಯರಾಗಿದ್ದೇವೆ, ಇವರು ಅರಣ್ಯ ಸಚಿವರಾಗಿದ್ದಾರೆ. ನಾವು ಇಲ್ಲಿ ಮಾಡುತ್ತಿರುವಂಥಾದ್ದು ಅರಣ್ಯ ರೋಧನವಾಗಿದೆ.)

ಅಧ್ಯಕ್ಷರು: ತಾವು ಸದನದಲ್ಲಿ ಅವರ ಹೆಸರನ್ನು ಏಕೆ ಪ್ರಸ್ತಾಪ ಮಾಡುತ್ತೀರಿ, where

is the necessity?

ಶ್ರೀ ಎಸ್.ಸುರೇಶ್‌ಕುಮಾರ್: ನಾನು ಅವರನ್ನು ಹೊಗಳಿದ್ದು, ಆಯಿತು ಅವರ ಹೆಸರನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸುರೇಶ್‌ರವರೇ, ತಾವು ಎಷ್ಟು sarcastic ಆಗಿ ಮಾತನಾಡುತ್ತೀರೋ, ಈ ಕಡೆ ಇರುವವರಿಗೂ ಅಷ್ಟೆ ಗೊತ್ತಿದೆ. ಆ ರೀತಿ ಮಾಡಬೇಡಿ What you said is not in good taste.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾವು ಹೇಳುವಂಥಾದ್ದು ಯಾವುದು ಕೇಳುತ್ತಿಲ್ಲ, ತಮಗೆ ಗೊತ್ತಿದೆಯಾ? ಬೆಂಗಳೂರಿನಲ್ಲಿ ಯಾರಾದರೂ ಒಬ್ಬರು ಎರಡು ಚಕ್ರದ ಗಾಡಿಯನ್ನು ತೆಗೆದುಕೊಂಡರೆ ಅವನು ಪ್ರತಿ ದಿವಸ 15 ರೂಪಾಯಿಗಳಿಂದ 20 ರೂಪಾಯಿಗಳವರೆಗೆ ತೆರಿಗೆಯನ್ನು ಪಾರ್ಕಿಂಗ್ ಹೆಸರಿನಲ್ಲಿ ಕಟ್ಟುತ್ತಿದ್ದಾನೆ. ಇದು ವರ್ಷಕ್ಕೆ ಆರು ಸಾವಿರ ರೂಪಾಯಿಗಳಾಗುತ್ತದೆ. ಇವರಿಗೆ ಯಾವುದೇ ಅನುಕೂಲಗಳು ಇರುವುದಿಲ್ಲ. ನೀವು ಎಲ್ಲಾದರೂ ಪಾರ್ಕಿಂಗ್‌ಗೆ ಎಂದು ಶೆಲ್ಟರ್ ಕೊಟ್ಟಿದ್ದೀರಾ? ಇಲ್ಲಿ ರಸ್ತೆಯ ಬದಿಯನ್ನು ಉಪಯೋಗಿಸುವವರು ಪಾರ್ಕಿಂಗ್ ಫೀ ಕೊಡಬೇಕೆಂದರೆ ಅರ್ಥವೇನು? ಅಲ್ಲಿ ವಾಹನಗಳು ಕಳ್ಳತನವಾದರೂ ಅವನು ಕೇರ್ ತೆಗೆದುಕೊಳ್ಳುವುದಿಲ್ಲ. ಆದುದರಿಂದ ನಾನು ಕೇಳುವಂಥಾದ್ದು ಈ ಎರಡೂವರೆ ಗಂಟೆಗಳು ಏನು ಚರ್ಚೆಯಾಗಿದೆ, ಅದಕ್ಕೆ ಏನಾದರೂ Concession ತೋರಿಸುತ್ತೀರಾ? ತಾವು ಬರೀ ಉತ್ತರವನ್ನು ಕೊಟ್ಟದ್ದು ಅಲ್ಲ. ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ, ಇನ್‌ಫ್ರಾಸ್ಟ್ರಕ್ಚರ್‌ಸೆಸ್ ಬಗ್ಗೆ ತಾವು ಐದು ನೂರು ರೂಪಾಯಿಗಳನ್ನು ಹಾಕಬೇಡಿ ಎಂದು ನಾವು ಅನೇಕ ಸಂಗತಿಗಳನ್ನು ಹೇಳಿದ್ದೇವೆ.

SRI D.B.CHANDRE GOWDA: That is the maximum limit. ಈಗ ಎರಡು ವಿಚಾರಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಸೆಸ್‌ನಲ್ಲಿರಬಹುದು ಅಥವಾ ವಾಹನಗಳ ಮೇಲೆ ಹಾಕಿರತಕ್ಕಂತಹ ತೆರಿಗೆಗಳಿರಬಹುದು. ಒಂದರಲ್ಲಿ ಮ್ಯಾಗ್ಸಿಮಮ್ ಒಂದು ಸಾವಿರ ರೂಪಾಯಿಗಳು, ಮತ್ತೊಂದರಲ್ಲಿ ಐದು ನೂರು ರೂಪಾಯಿಗಳು ಅಥವಾ ನೂರು ರೂಪಾಯಿಗಳು ಆಗಬಹುದು, ಅಥವಾ ಈ ದ್ವಿಚಕ್ರ ವಾಹನಗಳನ್ನು ಬಿಟ್ಟು ಬಿಡಬಹುದು. ಅದಕ್ಕೆ ನಾನು ಹೇಳಿದಂಥಾದ್ದು, it all depends on the Corporation. They can make the best use of it. ಈ ಆಕ್ಟ್‌ನಲ್ಲಿ ಏನು ಜಾರಿಗೆ ತಂದಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಎಲ್ಲಾ ಪವರ್ ಅವರಿಗೆ ಇದೆ.

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ

ಯಾವುದೇ ಸಲಹೆ ಸೂಚನೆಗಳನ್ನು ಕೊಟ್ಟರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವಂತಹ ಪರಿಸ್ಥಿತಿ ಅವರುಗಳಲ್ಲಿ ಇಲ್ಲ. ಸರ್ಕಾರ ಇಲ್ಲಿ ಬಿಲ್ ಅನ್ನು ತರುವಂಥಾದ್ದು, ತಮ್ಮ ಪ್ರತಿಷ್ಠೆಯ ಮೇಲೆ ತರುವಂತಹ ವ್ಯವಸ್ಥೆಗಳಾಗಿದೆ. ಆದುದರಿಂದ ಯಾವುದೇ ಅಮೆಂಡ್‌ಮೆಂಟ್ ಮಾಡಿದರೂ ಕೂಡ ನಮ್ಮ ಪ್ರತಿಷ್ಠೆಗೆ ಏನೋ ಭಾರಿ ಕೊರತೆಯಾಗುತ್ತದೆನ್ನುವಂತಹ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಇವತ್ತು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಹಾಗೂ ಲೆವಿ ಆಫ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ನಾವು ಭಾರಿ ಸೂಕ್ಷ್ಮವಾಗಿ ತಮಗೆ ಹೇಳಿದೆವು. ಅದು ಐದು ನೂರು ರೂಪಾಯಿಗಳು ಮ್ಯಾಗ್ಸಿಮಮ್ ಇರಬಹುದು, ಆದರೂ 500 ರೂಪಾಯಿಗಳನ್ನು ಹಾಕಿದರೆ ಲೈಫ್ ಟ್ಯಾಕ್ಸ್ ಕೊಟ್ಟದ್ದಕ್ಕಿಂತಲೂ ಜಾಸ್ತಿಯಾದಂತಹ ಸಂದರ್ಭಗಳಾಗುತ್ತವೆ. ತಾವು ಬೇಕಾದರೆ ಇದನ್ನು ಕೌಂಟ್ ಮಾಡಿ, ನೀವು ವಾಹನವನ್ನು ಇಟ್ಟುಕೊಂಡರೆ ಪ್ರತಿ ವರ್ಷ 500 ರೂಪಾಯಿಗಳ ಹಾಗೆ ತೆರಿಗೆ ಎಂದು ಮಾಡಿದರೆ ಇದು ಲೈಫ್ ಟ್ಯಾಕ್ಸ್‌ಗಿಂತ ಜಾಸ್ತಿಯಾಗುವಂತಹ ಸಂದರ್ಭಗಳು ಜಾಸ್ತಿಯಾಗುತ್ತದೆ. ನೀವು ಬೆಂಗಳೂರಿನಲ್ಲಿ ಭಾರೀ ದೊಡ್ಡ ವ್ಯವಸ್ಥೆಗಳನ್ನು ಮಾಡುತ್ತೇವೆಂಬ ಹೆಸರಿನಲ್ಲಿ ಈ ಬಿಲ್ ತರುವುದರ ಮೂಲಕ ಸಾಮಾನ್ಯ ಜನರ ಮೇಲೆ ಸವಾರಿ ಮಾಡುವಂತಹದ್ದು ಸರಿಯಲ್ಲ. ಯಾವುದೇ ಅಮೆಂಡ್‌ಮೆಂಟ್‌ಗಳನ್ನು ಸ್ವೀಕಾರ ಮಾಡುವುದಕ್ಕೆ ತಯಾರಿಲ್ಲವೆಂದರೆ ನಾವು ಇಷ್ಟು ಸಲಹೆಗಳನ್ನು ಕೊಟ್ಟು ಇದಕ್ಕೆ ಗೌರವ ಬರುವಂತಹ ಸಂಗತಿಗಳು ಇಲ್ಲವೆಂದು ಹೇಳುತ್ತೇನೆ. ಈಗ ಎರಡು ಸಣ್ಣ ವಿಚಾರಗಳನ್ನು ಹೇಳಿದ್ದಾರೆ, ವಾಹನಗಳ ಮೇಲೆ ಲೆವಿ ಮಾಡುವಂಥಾದ್ದು, ಇನ್ನೊಂದು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಮೇಲೆ ಹಾಕಿರುವಂತಹ ಭಾರಿ ಮೊತ್ತ, ತಾವು ಕನಿಷ್ಠ ಇದನ್ನಾದರೂ ಸ್ವೀಕಾರ ಮಾಡಿ ಸೆಕ್ಷನ್ 103ಬಿಯನ್ನಾದರೂ ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬಹುದಲ್ಲಾ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಗರಿಷ್ಠ ಹಾಕಿದ್ದೇವೆ.

ಶ್ರೀ ಡಿ.ವಿ.ಸದಾನಂದಗೌಡ: ಅದು ನಮಗೆ ಗೊತ್ತಾಗಿದೆ. ನೀವು ಏಕೆ ಸ್ಪೆಸಿಫಿಕ್ ಆಗಿ ಅದನ್ನು ಹೇಳುವಂತಹ ಪ್ರಯತ್ನವನ್ನು ಮಾಡುತ್ತಾ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಸಂಬಂಧಪಟ್ಟಂತಹ ಕಾರ್ಪೊರೇಷನ್ ಮಾಡಿಕೊಳ್ಳಬಹುದೆಂದು ಹೇಳಿದ್ದೇವೆ.

ಶ್ರೀ ಡಿ.ವಿ.ಸದಾನಂದಗೌಡ: ಈ ನಿಮ್ಮ ನಿರ್ಲಕ್ಷ್ಯ ಇದು ಜನರ ಮೇಲೆ ಮಾಡುವಂತಹ ಸವಾರಿಯಾಗುತ್ತದೆ. ಆದಕಾರಣ ಸೆಕ್ಷನ್ 103 ಬಿಯನ್ನು ಮಾತ್ರ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ಸದನದಿಂದ ಸಭಾತ್ಯಾಗ ಮಾಡಿದರು)

6.50 ಪಿಎಂ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಸರ್ಕಾರದವರು ಬೆಂಗಳೂರು ಅಭಿವೃದ್ಧಿಯ ದೃಷ್ಟಿಯಿಂದ ಮಾಡಿರತಕ್ಕಂತಹ ಕೆಲವು ಕೆಲಸಗಳನ್ನು ಅವರ ಉದ್ದೇಶವನ್ನು ಪ್ರಶ್ನೆ ಮಾಡುವುದಕ್ಕೆ ನಾವು ಮತ್ತು ವಿರೋಧಪಕ್ಷದವರು ಹೋಗುವುದಿಲ್ಲ. ಈಗ ಲೋಕಲ್ ಬಾಡೀಸ್‌ಗಳ ಸಂಪನ್ಮೂಲಗಳ ಸಂಗ್ರಹಣೆಗೆ ನಾವು ಅವಕಾಶವನ್ನು ಮಾಡಿಕೊಡದೇ ಹೋದರೆ ತಪ್ಪಾಗುತ್ತದೆ. ಎಲ್ಲೋ ಒಂದು ಕಡೆ ನಾವು ಮಾಡಲೇಬೇಕಾಗುತ್ತದೆ. ಎಲ್ಲಾ ತೆರಿಗೆಯಲ್ಲಿ ವಿನಾಯಿತಿಯನ್ನು ಕೊಡಬೇಕೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಿಮ್ಮ ಧೋರಣೆಗಳು ಏನಿವೆ ಅದನ್ನು ಖಂಡಿಸುತ್ತೇವೆ. ತಾವು ಇದನ್ನು ಬದಲಾವಣೆ ಮಾಡಿಕೊಳ್ಳಬೇಕು. ಏಕೆಂದರೆ, ಅಮೂಲ್ಯವಾದ ಸಲಹೆಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ತಾವು ಕಾನೂನು ಮಂತ್ರಿಗಳಾಗಿದ್ದೀರಿ. You might not have gone into the subject matter. ಸಂಬಂಧಪಟ್ಟ ಮಂತ್ರಿಗಳು ಅಧಿಕಾರಿಗಳನ್ನು ಕರೆದು, ಇಲ್ಲಿ ಎರಡೂ, ಎರಡೂವರೆ ಗಂಟೆಗಳ ಕಾಲ ಈ ಮಸೂದೆಯ ಬಗ್ಗೆ ಚರ್ಚೆಯಾಗಿದೆ, ಅಂತಹ ಸನ್ನಿವೇಶದಲ್ಲಿ, ತಮಗೆ ಇಲ್ಲಿ ಬಹುಮತವಿದೆ, ನಾವು ಸಭಾತ್ಯಾಗ ಮಾಡಿದರೂ ಕೂಡ ನೀವು ಬಿಲ್ ಪಾಸ್ ಮಾಡಿಕೊಳ್ಳುತ್ತೀರಿ ಎಂಬ ಅರಿವು ಕೂಡ ನಮಗೆ ಇದೆ. ಉದಾಹರಣೆಗೆ ಸಾಲಿಡ್‌ವೇಸ್ಟ್ ಮ್ಯಾನೇಜ್‌ಮೆಂಟ್‌ಗೆ ತಾವು ಎಷ್ಟೊಂದು ಟ್ಯಾಕ್ಸ್ ಹಾಕಿದ್ದೀರಿ ಅದನ್ನು ಕಡಿಮೆ ಮಾಡಬೇಕೆಂಬುದು ಒಂದು ಸಲಹೆಯಾಗಿದೆ. ಕೊನೆಯ ಪಕ್ಷ ಕಡಿಮೆ ಮಾಡುತ್ತೀರಿ ಎನ್ನುವ ಬಗ್ಗೆ ಭರವಸೆಯನ್ನಾದರೂ ತಾವು ಕೂಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾವು ತೆರಿಗೆಯನ್ನು ಹಾಕಿಲ್ಲ, ಮಿತಿಯನ್ನು ಹೇಳಿದ್ದೇವೆ.

SRI P.G.R.SINDHYA: You can have provision for that. ಪಾರ್ಕಿಂಗ್ ಫೀಯನ್ನು ಯಾರೂ ಜಾಸ್ತಿ ಮಾಡಬಾರದು ಎಂದು ಯಾರು ಹೇಳುವುದಿಲ್ಲ. ಪಾರ್ಕಿಂಗ್ ಫೀಯನ್ನು ಹಾಕಿದ ಮೇಲೆ ಅದಕ್ಕೆ ಸೌಲಭ್ಯಗಳನ್ನು ಒದಗಿಸಬೇಕಲ್ಲವೇ? ತೆರಿಗೆ ಅಸೆಸ್‌ಮೆಂಟ್‌ನ್ನು ಪ್ರತಿ ವರ್ಷ ಮಾಡುವುದರ ಬದಲು ಐದು ವರ್ಷಕ್ಕೊಮ್ಮೆ ಮಾಡಿ ಎಂದು ಸಲಹೆ ಕೊಟ್ಟಿದ್ದೇವೆ. ಇದನ್ನು ನಾವು ಪರಿಗಣನೆ ಮಾಡುತ್ತೇವೆ, ಎಂದು ಭರವಸೆಯನ್ನು ಕೊಟ್ಟರೆ ಏನೂ ತಪ್ಪಾಗುವುದಿಲ್ಲ. ನೀವು ಶಾಶ್ವತವಾಗಿ ಉಳಿಯುವುದಿಲ್ಲ, ನಾವು ಶಾಶ್ವತವಾಗಿ ಉಳಿಯುವುದಿಲ್ಲ, ದಯವಿಟ್ಟು ಇವನ್ನು ಪರಿಗಣಿಸಿ ಎಂದು ಆಗ್ರಹ ಮಾಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: 30 ಚದರದ ಮನೆಯನ್ನು ಕಟ್ಟಿದರೆ ಅದು ಮುಂದಿನ ವರ್ಷ 32 ಚದರ ಆದರೂ ಆಗಬಹುದು, ಅಥವಾ 28 ಚದರ ಆಗಬಹುದು. ಆದರೆ ಎಷ್ಟು ಆಗಿದೆ ಎಂಬುದನ್ನು ತಿಳಿಸಬೇಕಲ್ಲವೇ?

ಶ್ರೀ ಬಿ.ಸೋಮಶೇಖರ್: ನಾವು ಕಾರ್ಪೊರೇಷನ್ ಬಗ್ಗೆ ಹೇಳುತ್ತಿಲ್ಲ, ಪುರಸಭೆಗಳಲ್ಲಿ ಬಡವರು ಪ್ರತಿ ವರ್ಷ ಆಸ್ತಿ ತೆರಿಗೆ ರಿಟರ್ನ್ಸ್‌ನ್ನು ಫೈಲ್ ಮಾಡಬೇಕೆಂದರೆ, ಅಲ್ಲಿ

ಸರಿಯಾದಂತಹ ಸಿಬ್ಬಂದಿಗಳಿಲ್ಲ, ಇದ್ದರೆ ಯಾರೋ ಒಬ್ಬ ಚೀಫ್ ಆಫೀಸರ್ ಇರುತ್ತಾರೆ. ಇದರಿಂದಾಗಿ ತುಂಬಾ ತೊಂದರೆಯಾಗುತ್ತದೆ. ಆ ಬಗ್ಗೆ ಭರವಸೆಯನ್ನು ಕೊಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಸದಸ್ಯರು ಜನರಿಗೆ ತಿಳಿವಳಿಕೆಯಿಲ್ಲದೆ ಪ್ರತಿ ವರ್ಷವೂ ಕೂಡ ಈ ಪುರಸಭೆಗಳಲ್ಲಿ ಆಸ್ತಿತೆರಿಗೆಯ ಬಗ್ಗೆ ರಿಟರ್ನ್ಸ್ ಫೈಲ್ ಮಾಡುವುದು ತುಂಬಾ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ನಾವು ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೊಡುತ್ತಿದ್ದೇವೆ, ಅವರು ತೀರ್ಮಾನವನ್ನು ತೆಗೆದುಕೊಳ್ಳುವರು. ನೀವು ಗರಿಷ್ಠ ಇಷ್ಟರವರೆವಿಗೆ ವಸೂಲು ಮಾಡಬಹುದು ಎಂದು ಹೇಳುತ್ತೇವೆ. ಅಲ್ಲಿ ತೆರಿಗೆ ವಿಧಿಸಬೇಕಾದರೂ ಕೂಡ ಕೆಲವು ಪ್ರೊಸೀಜರ್‌ಗಳನ್ನು ಫಾಲೋ ಮಾಡಬೇಕಾಗುತ್ತದೆ. ರೂಲ್ಸ್‌ನಲ್ಲಿ ಮಾಡುವಾಗ ತಾವು ಹೇಳುವ ಸಲಹೆಯನ್ನು ಎಲ್ಲವನ್ನು ಅದರಲ್ಲಿ ಸೇರಿಸಲಾಗುವುದು. ಆ ದೃಷ್ಟಿಯಿಂದ ಆ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಪ್ರತಿಯೊಂದು ನಗರಸಭೆಗಳು, ಪುರಸಭೆಗಳು 20 ರೂಪಾಯಿ ಕೂಡ ಚಾರ್ಜ್ ಮಾಡಿದರೂ ಮಾಡದೆ ಇದ್ದರೂ ಕೂಡ ಅಭ್ಯಂತರವಿಲ್ಲ. ನಾವು ಪ್ರಾವಿಜನ್ ಮಾಡುತ್ತೇವೆ. ಮಾಡಬಹುದು ಎಂದಮೇಲೆ ಅದು ಕಡ್ಡಾಯವಲ್ಲ, ಸಂಪನ್ಮೂಲಗಳನ್ನು ಸಂಗ್ರಹ ಮಾಡುವುದಕ್ಕೆ ಅವರು ಮನಸ್ಸು ಮಾಡಿದರೆ ಒಳ್ಳೆಯದು, ಮಾಡದೆ ಇದ್ದರೂ ಕೂಡ ತೊಂದರೆಯಿಲ್ಲ. ಆ ಸ್ವಾಯತ್ತ ಸಂಸ್ಥೆಗಳಿಗೆ ಅಧಿಕಾರವನ್ನು ಕೊಡತಕ್ಕಂತಹ ಕೆಲಸವನ್ನು ಮಾಡಬೇಕಾಗಿದೆ. ನಿಜವಾಗಿಯೂ ಅವರಿಗೆ ಅಧಿಕಾರವನ್ನು ಕೊಟ್ಟಾಗ ಅವರು ಎಕ್ಸರ್‌ಸೈಜ್ ಮಾಡುತ್ತಾರೆ. ಇದರ ಒಂದು ಅನುಮಾನದ ಬಗ್ಗೆ ಹೇಳಿದರು, ಆ ದೃಷ್ಟಿಯಿಂದ ನಾವು ಜನರಿಗೆ ತಿಳುವಳಿಕೆಯನ್ನು ಕೊಡುವ ಕೆಲಸವನ್ನು ಮಾಡಬೇಕಾಗುತ್ತದೆ, ಪತ್ರಿಕೆಗಳ ಮೂಲಕ ಡಂಗುರದ ಮೂಲಕ, ಸೆಮಿನಾರ್‌ಗಳ ಮೂಲಕ ಪ್ರತಿಯೊಂದು ಸಂಸ್ಥೆಗಳ ವಾರ್ಡ್‌ಗೆ ಹೋಗಿ ತಿಳುವಳಿಕೆಯನ್ನು ಕೊಟ್ಟು ಪರಿಜ್ಞಾನವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಪ್ರಾಪರ್ಟಿ ಪ್ರತಿ ವರ್ಷ ಹೆಚ್ಚಾಗುತ್ತಿರುತ್ತದೆ, ಅನೇಕ ಕಟ್ಟಡಗಳು ಬರುತ್ತಿರುತ್ತವೆ, ಕೆಲವರು ಆಲ್ಟರೇಷನ್ ಮಾಡುತ್ತಿರುತ್ತಾರೆ, ನಾವು ಪ್ರತಿವರ್ಷ ರಿಟರ್ನ್ಸ್ ಅವರು ಕಟ್ಟದೇ ಹೋದರೆ ಅದು ತಪ್ಪಾಗುತ್ತದೆ. ಅವರಿಗೆ ನಾವು ಟ್ಯಾಕ್ಸ್‌ನ್ನು ಹೆಚ್ಚಾಗಿ ಹಾಕುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಪ್ರತಿ ವರ್ಷ ಲೋಕಾಯುಕ್ತಕ್ಕೆ ರಿಟರ್ನ್ಸ್‌ನ್ನು ಫೈಲ್ ಮಾಡುತ್ತೇವೆ, ಏನಾದರೂ ಬದಲಾವಣೆ ಇದ್ದರೆ ಸೇರಿಸಬೇಕಾಗುತ್ತದೆ, ಇಲ್ಲದಿದ್ದರೆ ಹಿಂದಿನ ವರ್ಷ ಏನು ಕೊಟ್ಟಿರುತ್ತೇವೆ ಅದನ್ನು ಬರೆಯುತ್ತೇವೆ, ಇದರಿಂದ ಏನು ತೊಂದರೆಯಾಗುತ್ತದೆ?

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2000ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 14 ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 14ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 14ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ- 1 ಇತ್ಯಾದಿ;

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ''2000ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2000ನೇ ಸಾಲಿನ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 12ರವರೆಗೆ

ಅಧ್ಯಕ್ಷರು: ''ಖಂಡ 2 ರಿಂದ 12 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 12ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವದ ಅಂಗೀಕಾರ

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ''2000ದ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2000ನೇ ಸಾಲಿನ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.